"ಕಷ್ಟವನ್ನು ಸಹಿಸಿಕೊಳ್ಳುವನು ಧನ್ಯನು" (ಯಾಕೋ 1:12)

# ನಾನು ನನ್ನ ಸರ್ವಸ್ವ

ಲೇಖಕರು:

**ಫಾಸ್ಟರ್.ಪಿ.ತೇಜಸ್ಸ್**

**"NAANU NANNA SARVASVA"** is the collection of Kannada Catholic Charismatic Hymns of Pastor P. Tejas,

ಪ್ರಥಮ ಮುದ್ರಣ : ಡಿಸೆಂಬರ್ 2014
5000 ಪ್ರತಿಗಳು

ಚಿಒ : 70

ಮುದ್ರಕರು : ರವಿಶಂಕರ್, ಬೆಂಗಳೂರು

ಓದಿರುವಿರಾ :-

1. "ನಂಬಿಕೆಯ ರಹಸ್ಯ"
2. "ಅದ್ಭುತ ಸಾಕ್ಷಿ"
3. "ಪ್ರೀತಿಯ ಯಶಸ್ಸು"
4. "ಕಣ್ಣೀರಿನ ಕೂಗು"

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
ಫೋನ್: 9900241593, 9880245222

# ಲೇಖಕರ ಮಾತು

**"ಯೆಹೋವನು ಸದ್ಭಕ್ತರ ಜೀವಮಾನವನ್ನು ಲಕ್ಷಿಸುತ್ತಾನೆ"** (**ಕೀರ್ತ** 37:18)

ಪ್ರೀತಿಯ ದೇವರ ಮಕ್ಕಳೇ ಈ ಪುಸ್ತಕವು ನಿಮಗೆ ಆಶೀರ್ವದಕರವಾಗಿ ಇರುತ್ತದೆಂದು ನಾನು ಮನಃಪೂರ್ವಕವಾಗಿ ನಂಬುತ್ತೇನೆ. ಈ ಪುಸ್ತಕದಲ್ಲಿ ನನ್ನ ಜೀವನದಲ್ಲಿ ನಡೆದ ಮತ್ತು ನಡೆಯುತ್ತಿರುವ ಸತ್ಯಕಥೆಯನ್ನು ಬರೆದಿರುತ್ತೇನೆ. ಕರ್ತನು ನನ್ನ ಜೀವನವನ್ನು ಉತ್ತಮವಾಗಿ ರೂಪಿಸಿ ನಡೆಸುತ್ತಿರುವುದು ನನಗೆ ತುಂಬಾ ಆಶ್ಚರ್ಯವಾಗಿದೆ. ನನ್ನ ನಿಜವಾದ ಸತ್ಯಕಥೆಯನ್ನು "ನಾನು ನನ್ನ ಸರ್ವಸ್ವ" ಎಂಬ ಈ ಪುಸ್ತಕದ ಮುಖಾಂತರ ನಿಮ್ಮ ಬಳಿಯಲ್ಲಿ ಕಾಣಿಸಿಕೊಳ್ಳಲು ದೇವರು ನನಗೆ ಒದಗಿಸಿಕೊಟ್ಟಿರುವ ಈ ಅವಕಾಶಕ್ಕಾಗಿ ನಾನು ದೇವರಿಗೆ ಸ್ತೋತ್ರ ಸಲ್ಲಿಸುತ್ತೇನೆ.

ಓದುವಂತಹ ಹವ್ಯಾಸ ಇರುವವರು ಆತ್ಮೀಕ ಪುಸ್ತಕಗಳು ಪರಿಚಯವಾದಾಗ, ಆತ್ಮೀಕ ಜೀವನದ ಬೆಳವಣಿಗೆಯ ಸಲುವಾಗಿ ಆಸಕ್ತಿಯಿಂದ ಓದುವುದಕ್ಕೆ ಪ್ರಾರಂಭಿಸುತ್ತಾರೆ, ಹಾಗೂ ಅವರು ತಮ್ಮ ಆತ್ಮೀಕ ಜೀವನದ ಬಗ್ಗೆ ಕಾಳಜಿಯುಳ್ಳ ವ್ಯಕ್ತಿಗಳೆಂದು ಪರಿಗಣಿಸಲ್ಪಟ್ಟವರಾಗಿದ್ದಾರೆ.

ಈ ಲೋಕದಲ್ಲಿ ಜನರಿಗೆ ಸಮಯವನ್ನು ಕಳೆಯುವುದಕ್ಕೆ ಮಾರ್ಗಗಳೂ ಅನೇಕ ರೀತಿಯಲ್ಲಿವೆ. ಅದರಲ್ಲಿ ಲೋಕಾರೂಢಿಯಾಗಿ ಬರೆದಿರುವಂತಹ ಪುಸ್ತಕಗಳು ಕಥೆಗಳು ಎಲ್ಲೆಲ್ಲೂ ಕಾಣಬರುತ್ತಿವೆ. ಅಂತಹ ಪುಸ್ತಕಗಳಲ್ಲಿ ಎಷ್ಟು ನಿಜವಿರುತ್ತದೋ? ಎಷ್ಟು ಸುಳ್ಳು ಇರುತ್ತದೋ? ಈ ಲೋಕದ ಓದುಗಾರರು ಅದನ್ನು ಪರಿಗಣನೆಗೂ ಸಹ ತೆಗೆದುಕೊಳ್ಳುವುದಿಲ್ಲ. ಮತ್ತು ಎಲ್ಲಾ ಬರಹಗಾರರು ಅವರ ಕಥೆ ಪುಸ್ತಕಗಳಲ್ಲಿ ಕಾಲ್ಪನಿಕವಾಗಿಯೂ, ಊಹಾಪೋಹದಿಂದಲೂ ಅವರ ಆಲೋಚನೆಗೆ ತಕ್ಕಂತೆ ಬರೆದಿರುತ್ತಾರೆ. ಆದರೆ ಅವುಗಳನ್ನು ಓದುವಾಗ ಏನೋ ಒಂದು ರೀತಿ ಟೈಮ್ ಪಾಸ್ ಅಂದುಕೊಂಡು ಓದುಗಾರರು ಓದುತ್ತಾರೆಯೇ ಹೊರತು ಕಲಿಯುವಂತದ್ದು ಮತ್ತೊಬ್ಬರಿಗೆ ಕಲಿಸಿಕೊಡುವಂತದ್ದು ಏನೂ ಇರುವುದಿಲ್ಲ. ಮತ್ತು ಅವರಿಗೆ ಇಂತಹ ಪುಸ್ತಕಗಳಿಂದ ಸಮಯ ಕಳೆಯುವುದೇ ಗೊತ್ತಾಗುವುದಿಲ್ಲ.

ಆದರೆ ನಿಮ್ಮ ಕೈಗಳಲ್ಲಿ ತಲುಪಿರುವ ಈ ಪುಸ್ತಕವು ನಡೆದಂತಹ

ಘಟನೆಗಳನ್ನು ನಿಮಗೆ ತಿಳಿಸುತ್ತದೆ. ಕರ್ತನ ಆಜ್ಞೆಯ ಮೇರೆಗೆ ಸಾಕ್ಷಿಯನ್ನು ಪ್ರಕಟಪಡಿಸುವ ಪುಸ್ತಕವಾಗಿದೆ.

ನನ್ನ ಜೀವನದಲ್ಲಿ ನಿಜವಾಗಿಯೂ ನಡೆದಿರುವಂತಹ ಸತ್ಯ ಕಥೆಯನ್ನು ನಿಮ್ಮ ಮುಂದೆ ಹೇಳಿಕೊಳ್ಳುತ್ತಿದ್ದೇನೆ. ನನ್ನ ಹಿಂದಿನ ಜೀವನ ಹೇಗಿತ್ತು? ಯೇಸುವನ್ನು ತಿಳಿದುಕೊಂಡ ನಂತರ ನನ್ನ ಜೀವನ ಯಾವ ರೀತಿ ಬದಲಾವಣೆಯಾಯಿತು. ಈಗ ಕರ್ತನು ನನ್ನನ್ನು ಯಾವ ರೀತಿಯಲ್ಲಿ ನಡೆಸುತ್ತಿದ್ದಾರೆ. ಯಾವ ರೀತಿಯಲ್ಲಿ ನಾನು ನನ್ನ ಯೇಸುವಿಗಾಗಿ ಸಾಕ್ಷಿಯಾಗಿ ಜೀವಿಸಲು ನನಗೆ ಕರ್ತನು ಕೃಪೆ ನೀಡಿದ್ದಾನೆ. ಎಂಬುದನ್ನು ಈ ಪುಸ್ತಕದಲ್ಲಿ ನಿಮಗೆ ತಿಳಿಸಲಾಗಿದೆ.

"ಪವಿತ್ರಾತ್ಮ ನಿಮ್ಮ ಮೇಲಿ ಬರಲು, ನೀವು ಬಲವನ್ನು ಹೊಂದಿ ಯೆರೂಸಲೇಮಿನಲ್ಲಿಯೂ ಎಲ್ಲಾ ಯೂದಾಯ ಸಮಾರ್ಯ ಸೀಮೆಗಳಲ್ಲಿಯೂ ಭೂಲೋಕದ ಕಟ್ಟಕಡೆಯವರೆಗೂ ನನಗೆ ಸಾಕ್ಷಿಗಳಾಗಿರಬೇಕು" (ಅಪೊ 1:8)

ಕರ್ತನು ತನ್ನ ಆತ್ಮದಿಂದ ನನ್ನನ್ನು ತುಂಬಿಸಲು, ನನ್ನ ಜೀವನದಲ್ಲಿ ಕರ್ತನು ಮಾಡಿರುವ ಎಲ್ಲಾ ಉತ್ತಮವಾದ ಅದ್ಭುತಗಳನ್ನು ಸಾಕ್ಷಿಯಾಗಿ ನಿಮ್ಮ ಮುಂದೆ ಹಂಚಿಕೊಳ್ಳಲು ದೇವರು ಅವಕಾಶವನ್ನು ಮಾಡಿಕೊಟ್ಟಿದ್ದಾರೆ.

ಯೇಸುಕ್ರಿಸ್ತನಿಗಾಗಿ ಒಳ್ಳೇ ಸಾಕ್ಷಿಯಾಗಿ ಜೀವಿಸಲು ನಿಮ್ಮನ್ನೂ ಸಹ ಈ ಪುಸ್ತಕವು ಪ್ರೇರೇಪಿಸುತ್ತದೆ ಎಂದು ನಾನು ವಿಶ್ವಾಸಿಸುತ್ತೇನೆ. "ನಾನು ನನ್ನ ಸರ್ವಸ್ವ" ಎನ್ನುವ ಈ ಪುಸ್ತಕವನ್ನು ಆಸಕ್ತಿಯಿಂದ ಓದಿರಿ, ಕರ್ತನಿಗೆ ಸಾಕ್ಷಿಯಾಗಿ ನಿಲ್ಲಿರಿ; ಕರ್ತನು ನಿಮ್ಮನ್ನು ಹೆಚ್ಚಿನ ರೀತಿಯಲ್ಲಿ ಆಶೀರ್ವದಿಸಲಿ.

ಕರ್ತನ ಸೇವಕಿ

**ಪಿ.ತೇಜಸ್**

ದೇವರ ನಾಮಕ್ಕೆ ಸ್ತೋತ್ರ

# ನಾನು ನನ್ನ ಸರ್ವಸ್ವ

## ಅರ್ಪಣೆ

**ಕರ್ತನು "ನನ್ನ ಇಷ್ಟಾರ್ಥಗಳನ್ನು ನೆರವೇರಿಸುವನು"**
**(ಕೀರ್ತನೆ 37:4)**

ಅಸತ್ಯವನ್ನು ಬಿಟ್ಟು ಸತ್ಯದ ಮಾರ್ಗದಲ್ಲಿ ನನ್ನನ್ನು ನಡೆಸುತ್ತಿರುವ ಪ್ರೀಯ ಯೇಸುವಿಗೆ "ನಾನು ನನ್ನ ಸರ್ವಸ್ವ" ಎನ್ನುವ ಈ ಪುಸ್ತಕವನ್ನು ಅರ್ಪಿಸುತ್ತಿದ್ದೇನೆ.

**ಲೇಖಕರು**
**ಫಾಸ್ಟರ್.ಪಿ.ತೇಜಸ್ಸ್**

# ಅಭಿಪ್ರಾಯ

ನಾನು ಮೊಟ್ಟಮೊದಲು ದೇವರು ನನಗೆ ಅಭಿಪ್ರಾಯವನ್ನು ಬರೆಯುವುದಕ್ಕೆ ಮಾಡಿಕೊಟ್ಟಂತಹ ಅವಕಾಶಕ್ಕಾಗಿ ದೇವರಿಗೆ ಸ್ತೋತ್ರವನ್ನು ಸಲ್ಲಿಸುತ್ತೇನೆ.

ನಾನು ಸಹೋದರಿಯಾದ ಪಿ.ತೇಜಸ್ಸ್‌ರವರ ಸಾಕ್ಷಿಯನ್ನು ಕೇಳಿದಾಗ ನನಗೆ ತುಂಬಾ ಅಚ್ಚರಿಯನ್ನುಂಟು ಮಾಡಿತು. ಈ ಸಾಕ್ಷಿಯು ಅನೇಕ ಜನರಿಗೆ ಪ್ರೋತ್ಸಾಹವಾಗಿರುತ್ತದೆ ಎಂದು ನಾನು ನಂಬುತ್ತೇನೆ. ಇವರ ಸಾಕ್ಷಿಯು ಪುಸ್ತಕವಾಗಿ ನಿಮ್ಮ ಕೈಗಳಿಗೆ ತಲುಪುತ್ತಿದೆ ಎಂದರೆ ನನಗೆ ತುಂಬಾ ಸಂತೋಷವಾಗುತ್ತಿದೆ. ಏಕೆಂದರೆ ಈ ಸಾಕ್ಷಿಯು ಒಬ್ಬರು ಮಾತ್ರ ಕೇಳುವಂತಹುದಲ್ಲ. ಅನೇಕರು ಆಶೀರ್ವದಿಲ್ಪಡುವಂತಹುದಾಗಿದೆ.

ಸಹೋದರಿಯವರು ಜೀವನದಲ್ಲಿ ಕಷ್ಟಪಟ್ಟರೂ ಈ ದಿನ ಅದರ ಪ್ರತಿಫಲವನ್ನು ನೋಡುವಾಗ ಬಹಳ ಒಳ್ಳೇದಾಗಿದೆಯೇ ಹೊರತು ಅವರು ಕೆಳಮಟ್ಟದಲ್ಲಿಲ್ಲ ಎಂಬುದು ನಾನು ಗಮನಿಸಿದೆ.

ದೇವರು ಸಹೋದರಿಯ ಜೀವನವನ್ನು ರೂಪಿಸಿದ್ದಾರೆ ಮತ್ತು ಸೇವೆಯಲ್ಲಿ ಅದ್ಭುತವಾಗಿ ಉಪಯೋಗಿಸುತ್ತಿದ್ದಾರೆ. ಕಷ್ಟ ಪಟ್ಟಿದ್ದರಿಂದ ಸಹೋದರಿಗೆ ದೇವರ ಬೆಲೆ ಏನೆಂಬುದು ಮತ್ತು ಆತನ ಆಶೀರ್ವಾದದ ಬೆಲೆ ಏನೆಂಬುದು ಚನ್ನಾಗಿ ಅರ್ಥವಾಗುತ್ತದೆ. ಎಂದು ನಾನು ನೆನೆಸುತ್ತೇನೆ. ಸಾಹುಕಾರರಿಗೆ ದುಡ್ಡು ಬಂದರೆ ಆ ದುಡ್ಡಿನ ಬೆಲೆ ಅವರಿಗೆ ಗೊತ್ತಾಗುವುದಿಲ್ಲ. ಅದೇ ರೀತಿ ಎಷ್ಟೋ ಕಷ್ಟಪಟ್ಟು ಅವರಿಗೆ ಆಶೀರ್ವಾದ ಬಂದರೆ ಅವರಿಗೆ ಅದರ ಬೆಲೆ ಏನೆಂಬುದು ತಿಳಿಯುತ್ತದೆ.

ಸ್ವಂತ ಅಣ್ಣ-ಅಕ್ಕಂದಿರು ಎಲ್ಲರೂ ಇದ್ದರೂ ಇಷ್ಟ ಹಿಂಸಿಯನ್ನು ಅನುಭವಿಸುವುದು ಕಷ್ಟ ಆದ್ರೆ ಬೇರೆಯವರ ಬಳಿ ಹೇಗೆ, ಯಾರನ್ನು ಇಟ್ಟುಕೊಳ್ಳುವುದು, ಯಾರನ್ನು ನಂಬುವುದು. ಆದ್ರೆ ಕ್ಷಮಾಪಣೆ ಪಾತ್ರ ಬಹು ಪ್ರಾಮುಖ್ಯವಾಗಿದೆ. ನಾವು ಯಾಕೆ ಬೇರೆಯವರ ಮೇಲೆ ಸಿಟ್ಟುಮಾಡಬೇಕು.

ಸಹೋದರಿಯವರ ಎಲ್ಲಾ ಪುಸ್ತಕಗಳು ಬಹಳ ಉತ್ತೇಜನವಾಗಿದೆ ದೇವರ ಮಾರ್ಗದಲ್ಲಿ. ನಡೆಯಬೇಕಾದರೆ ನಮಗೆ ಸತ್ಯವೇದ

ಅರ್ಥಮಾಡಿಕೊಳ್ಳಲು ಸಹಾಯವಾಗುತ್ತದೆ. ಸತ್ಯವೇದವನ್ನೂ ಸಹ ಓದಲು ಉತ್ತೇಜನವಾಗಿದೆ. ವಯಕ್ತಿಕವಾಗಿ ಇದು ಚೆನ್ನಾಗಿದೆ. ದೇವರು ಎಲ್ಲರನ್ನು ಯಾವ ರೀತಿಯಲ್ಲಿ ಉಪಯೋಗಿಸುತ್ತಾರೆ ಎಂದು ಗೊತ್ತಾಗುತ್ತದೆ. ಜನರಿಗೆ ಸಮಾಜಕ್ಕೆ ಬಹಳ ಉಪಯೋಗವಾಗುತ್ತದೆ. ಎಂದು ಗೊತ್ತಾಗುತ್ತದೆ.

**Pastor. M.D.Kumar**
House of prayer
(Four runner prayer force)
Calgary Cenada

# ಲೇಖಕರ ಮಾತು

'ಮಹಿಮಾ ಪ್ರಾರ್ಥನಾ ಮಂದಿರ"ದಿಂದ 'ನಾನು ನನ್ನ ಸರ್ವಸ್ವ' ಎನ್ನುವ ಈ ಐದನೆಯ ಪುಸ್ತಕವನ್ನು ಬಿಡುಗಡೆ ಮಾಡಲಾಗಿದೆ. ಈ ಪುಸ್ತಕದಲ್ಲಿ ಬರೆದಿರುವ ಸತ್ಯ ಸಾಕ್ಷಿಯು ನಿಮ್ಮೆಲ್ಲರ ಹೃದಯ ಕಲಕುತ್ತದೆಂದು ನಾನು ವಿಶ್ವಾಸಿಸುತ್ತೇನೆ. ದೇವರಿಗೆ ಸಾಕ್ಷಿಯಾಗಿ ಜೀವಿಸುವುದು ಬಹು ಪ್ರಾಮುಖ್ಯವಾಗಿದೆ, ಸೇವೆ ಮಾಡುವುದು ಸುಲಭ, ವಾಕ್ಯ ಪ್ರಸಂಗಿಸುವುದು ಸುಲಭ, ಆದರೆ ಒಳ್ಳೇ ಸಾಕ್ಷಿಯಾಗಿ ಜೀವಿಸುವುದು ಕಷ್ಟ, ಆದರೆ ನಾವು ಕರ್ತನಿಗೆ ಒಳ್ಳೇ ಸಾಕ್ಷಿಯಾಗಿ ಜೀವಿಸುವುದೇ ಪ್ರಾಮುಖ್ಯವೆಂದು ಸೇವಕರೆಲ್ಲರೂ ಮತ್ತು ವಿಶ್ವಾಸಿಗಳೆಲ್ಲರೂ ತಿಳಿದುಕೊಳ್ಳಬೇಕೆಂಬುದೇ ನನ್ನ ಸಲಹೆಯಾಗಿದೆ. ನೀವು ಒಳ್ಳೇ ಸಾಕ್ಷಿಯಾಗಿ ಜೀವಸಬೇಕೆಂದು ನಾನು ಹೃದಯಪೂರ್ವಕವಾಗಿ ಆಶಿಸುತ್ತೇನೆ.

ಈ ಸಾಕ್ಷಿಯ ಪುಸ್ತಕವನ್ನು ಹೊರತರುವ ನನ್ನ ಮುಖ್ಯ ಉದ್ದೇಶವೇನೆಂದರೆ ಕರ್ತನು ಮಾಡಿರುವ ಅದ್ಭುತಗಳನ್ನು ತಿಳಿಸುವುದರ ಸಲುವಾಗಿಯೇ ಹೊರತು ಬೇರೆ ಯಾವ ಹೆಗ್ಗಳಿಕೆಗೋಸ್ಕರವು ಅಲ್ಲವೆಂದು ನಿಮಗೆ ಸ್ಪಷ್ಟವಾಗಿ ತಿಳಿಸುತ್ತಿದ್ದೇನೆ.

ದೇವರು ನಿಮ್ಮನ್ನು ಆಶೀರ್ವದಿಸಲಿ.

"ಯಾರನ್ನು ಕಟಾಕ್ಷಿಸುವೆನೋ ಅವರಿಗೆ ಮಹಿಮೆ ಹೆಚ್ಚುವದು" (ದಾನಿಯೇಲ 11:39)

ನಿಮ್ಮ ಪ್ರಾರ್ಥನಾ ವಿಜ್ಞಾಪನೆಗಳಿಗಾಗಿ ನಮ್ಮನ್ನು ಸಂಪರ್ಕಿಸಿರಿ:

**ಫೋನ್: 9880245222, 9900241593**

Email: mahimaprarthanamandhira@gmail.com
parimalatej@gmail.com

# ಅನುಕ್ರಮಣಿಕೆ

**ಪೀಠಿಕೆ**

1. ನನ್ನ ಕುಟುಂಬದ ಪರಿಚಯ

2. ನನ್ನ ಜನನ

3. ಕುಟುಂಬದಲ್ಲಿ ಸಮೃದ್ಧಿ

4. ನನ್ನ ಸ್ನೇಹ

6. ನನ್ನ ತಾಯಿ

7. ನನ್ನ ಬೆಳವಣಿಗೆ

8. ಸುವಾರ್ತೆ ತಲುಪಿತು

9.  ಮೊಟ್ಟ ಮೊದಲ ಅದ್ಭುತ

10. ರಕ್ಷಣೆ ಹೊಂದಿದ್ದು

11. ಹೊಸ ಹೆಸರು. ಹೊಸ ಅಮ್ಮ

12. ಆತ್ಮೀಕ ಬೆಳವಣಿಗೆ

13. ಶೋಧನೆ ಸಮಯ

14. ಮನೆಯನ್ನು ತ್ಯಜಿಸಿದ ಸಂಧರ್ಭ

15. ಕಾಲೇಜ್ ಸೇರಿದೆ

16. ಆಂಧ್ರದಲ್ಲಿ

17. ಕರ್ತನು ಇಳಿದು ಬಂದನು

18.ಮಾತನಾಡಿದ ದೇವರು

19. ಜೀವನ ಬದಲಾಯಿತು

20. ಮೆಲುಕು

# 1. ನನ್ನ ಕುಟುಂಬದ ಪರಿಚಯ

"ಯೆಹೋವ ದೇವರು ನೆಲದ ಮಣ್ಣಿನಿಂದ ಮನುಷ್ಯನನ್ನು ರೂಪಿಸಿ ಅವನ ಮೂಗಿನಲ್ಲಿ ಜೀವಶ್ವಾಸವನ್ನು ಊದಿದನು; ಆಗ ಮನುಷ್ಯನು ಬದುಕುವ ಪ್ರಾಣಿಯಾದನು."

(ಆದಿ 2:7)

ನಮ್ಮ ಕುಟುಂಬವು ಬೆಂಗಳೂರಿನ ಮಡಿವಾಳ ಎಂಬ ಪಟ್ಟಣದಲ್ಲಿ ಪುಟ್ಟ ಕುಟುಂಬ. ನನ್ನ ತಂದೆ -> ಹನುಮಪ್ಪ ತಾಯಿ -> ಮರಿಯಮ್ಮ ಇವರು ಗುಡಿಸಲಿನಲ್ಲಿ ಬಾಳಿ ಬದುಕುತ್ತಿದ್ದರು. ತಂದೆಯವರು ಹೊಲದಲ್ಲಿ ಕೂಲಿ ಕೆಲಸ ಮಾಡುತ್ತಾ ಜೀವನವನ್ನು ಸಾಗಿಸುತ್ತಿದ್ದರು. ತಾಯಿ ಅವರಿಗೆ ಸಹಕಾರಿಯಾಗಿ ಕುಟುಂಬವನ್ನು ನಡೆಸುತ್ತಿದ್ದರು. ನನ್ನ ತಂದೆಗೆ 6 ಹೆಣ್ಣು ಮಕ್ಕಳು ಇಬ್ಬರು ಗಂಡುಮಕ್ಕಳಿದ್ದರು, ತನ್ನ ಮಕ್ಕಳನ್ನು ಸಾಕುವುದಕ್ಕೆ ತುಂಬ ಕಷ್ಟಾಪಟ್ಟು ಹಗಲು ರಾತ್ರಿ ಕುಟುಂಬಕ್ಕಾಗಿ ದುಡಿಯುತ್ತಿದ್ದರು. ಅವರಿಗೆ ಸಹಾಯಕವಾಗಿ ಯಾರೂ ಮುಂದೆ ಬರುತ್ತಿರಲಿಲ್ಲ. ಯಾಕೆಂದರೆ ನನ್ನ ತಂದೆಯವರ ಕೈಯಲ್ಲಿ ಹಣವಿರಲಿಲ್ಲ, ದಿನದ ಸಂಬಳಕ್ಕಾಗಿ ಕೆಲಸ ಮಾಡಿ ಅದರಿಂದ ಬರುವ ಹಣದಿಂದ ಕುಟುಂಬವನ್ನು ಸಾಗಿಸುತ್ತಿದ್ದರು. ಸರಿಯಾಗಿ ನಿದ್ರೆಮಾಡದೆ, ಊಟ ತಿನ್ನದೇ, ಮಕ್ಕಳ ಭವಿಷ್ಯಕ್ಕಾಗಿ ತುಂಬಾ ಪ್ರಯಾಸ ಪಡುತ್ತಿದ್ದರು. ಇದೇ ರೀತಿ ಕಷ್ಟ ಪಡುತ್ತಾ ಗುಡಿಸಲಿನಲ್ಲಿ ಜೀವನ ನಡೆಸುತ್ತಿದ್ದ ನಮ್ಮ ತಂದೆಯವರು 'ಹೆಂಚು ಮನೆ'ಯನ್ನು ಮಾಡಿಕೊಂಡು ಒಂದು ಹಂತಕ್ಕೆ ಬಂದರು. ಆದರೆ ಮನಸ್ಸಿನಲ್ಲಿ ಅಸಮಾಧಾನ. ಈ ಕಡುಬಡತನ ಜೀವನದಲ್ಲಿ ಹೀಗೆ ಹೋದರೆ ಮುಂದೆ ಯಾರು ನಮ್ಮನ್ನು ಗೌರವಿಸುತ್ತಾರೆ. ಮುಂದಿನ ಭವಿಷ್ಯ ಹೇಗೆ, ಎಂದು ಯೋಚಿಸುತ್ತಾ, ಸಮಯವನ್ನು ವ್ಯರ್ಥ ಮಾಡದೇ ಇನ್ನು ಹೆಚ್ಚು ದುಡಿಯಲು ಮುಂದಾಗುತ್ತಿದ್ದರು.

ಮೂರು ಅಕ್ಕಂದಿರಿಗೆ ಮದುವೆ ಮಾಡಿದರು. ತಂದೆಯವರು ವಿಶ್ರಾಂತಿ ತೆಗೆದುಕೊಳ್ಳದೇ ಯಾವಾಗಲೂ ದುಡಿಯುತ್ತಿದ್ದ ಕಾರಣ 'ಹೃದಯದ ನೋವು' ಅವರನ್ನು ಕಾಡಿಸುತ್ತಿತ್ತು, ಯಾರಿಗೂ ತಾನು ಅನುಭವಿಸುತ್ತಿರುವ 'ಹೃದಯದ ನೋವ'ನ್ನು ಹೇಳದೇ ತನ್ನ ಕೆಲಸಕಾರ್ಯಗಳಲ್ಲಿ ತಮ್ಮನ್ನು ತಾವು ಅಳವಡಿಸಿಕೊಂಡು ಮುಂದೆ ಸಾಗುತ್ತಿದ್ದರು. ಎಲ್ಲಾ ಮಕ್ಕಳಿಗೂ ವಿದ್ಯಾಭ್ಯಾಸ ಕೊಡಬೇಕು ಎನ್ನುವ ಹಂಬಲದಿಂದ ಅಂತಹ ಸಂದಿಗ್ಧ ಪರಿಸ್ಥಿತಿಯಲ್ಲೂ ಎಲ್ಲರಿಗೂ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುತ್ತಿದ್ದರು.

## 2. ನನ್ನ ಜನನ

"ನಿಮ್ಮ ಕಾಲದಲ್ಲಿ ನಾನು ಒಂದು ಕಾರ್ಯವನ್ನು ಮಾಡುವೆನು"
(ಅ.ಕೃ 13:41)

ನಾಲ್ಕನೇ ಅಕ್ಕನ ಮದುವೆಯಲ್ಲಿ ಮತ್ತೇ ನನ್ನ ಪ್ರಿಯ ತಾಯಿಯವರು ಗರ್ಭಿಣಿಯಾಗಿದ್ದರು. ಆ ಸಮಯದಲ್ಲಿ ನನ್ನ ತಂದೆಯವರು ಅವರು ಪೂಜಿಸುತ್ತಿದ್ದಂತಹ ದೇವರ ಬಳಿ ಕೇಳಿಕೊಂಡರು "ದೇವರೇ ಆರು ಹೆಣ್ಣು ಎರಡು ಗಂಡು ಕೊಟ್ಟಿದ್ದೀಯಾ! ಇನ್ನೊಂದು ಗಂಡು ಮಗು ನನಗೆ ಕೊಡಪ್ಪಾ ಈ ಹುಟ್ಟುವ ಮಗುವಿನಿಂದಾದರೂ ನನ್ನ ಬಡತನದಿಂದ ಕಷ್ಟದಿಂದ ಪಾರಾಗುತ್ತೇನೆ. ಇದುವರೆಗೂ ಪಟ್ಟಿರುವ ಕಷ್ಟ ಸಾಕು. ಇನ್ನು ಮುಂದೆ ಹುಟ್ಟುವ ಮಗುವಿನಿಂದ ಎಲ್ಲಾ ಕಷ್ಟಾ ತೀರಿ ಸಮಾಧಾನವಾಗಿ ಕೆಲವು ಕಾಲ ಬದುಕುತ್ತೇನೆ" ಎಂದು ತುಂಬ ದುಃಖದಲ್ಲಿಯೂ ಬೇಸರದಿಂದ ಕೇಳಿಕೊಂಡರು. ತಂದೆಯವರು ಸ್ನೇಹಿತರೊಟ್ಟಿಗೆ ಬೆರೆತು ಕಷ್ಟ ದುಃಖಗಳನ್ನು ಹಂಚಿಕೊಳ್ಳುತ್ತದ್ದರು. ಯಾವಾಗಲೂ ಹೊಲದಲ್ಲಿ ಕೂಲಿ ಕೆಲಸ ಮಾಡಿಕೊಂಡು ಮನೆಗೆ ಬರುತ್ತಿದ್ದರು. ಮನೆಯ ಸುತ್ತಮುತ್ತಲು ಇರುವ ಕೆಲ ಜನರು ನನ್ನ ತಂದೆ ಮೇಲೆ ಸಿಟ್ಟುಗೊಳ್ಳುತ್ತಿದ್ದರು. ಯಾರಿಂದಲೂ ಅವರಿಗೆ ಯಾವ ಸಹಾಯವು ಸಿಗುತ್ತಿರಲಿಲ್ಲ. ಅವರಿಗೆ ಸಾಲ ಕೇಳುವುದೂ ಇಷ್ಟವಿಲ್ಲ; ಸಾಲದಲ್ಲಿ ಜೀವನ ನಡೆಸುವುದು ತುಂಬ ಕಷ್ಟ, ಆದರೆ ಸಾಲ ಮಾಡುವಂತಹ ಪರಿಸ್ಥಿತಿ ಯಾವ ಕಾರಣಕ್ಕೂ ಬರಬಾರದು ಎಂದು ಯೋಚಿಸುತ್ತಾ ಜೀವನ ಸಾಗಿಸುತ್ತಿದ್ದರು.

ಮನೆಯಲ್ಲಿ ಎಲ್ಲಾ ಮಕ್ಕಳಿಗೂ ಜೀವನದ ಕಷ್ಟ ಏನು ಎಂಬುದನ್ನು ತಂದೆಯವರು ಕಲಿಸಿಕೊಡುತ್ತಿದ್ದರು. "ಹಾಸಿಗೆ ಇದ್ದಷ್ಟು ಕಾಲು ಚಾಚು" ಎನ್ನುವ ತತ್ವದ ಪ್ರಕಾರ ತಂದೆಯವರು ಮನೆಯ ಎಲ್ಲಾ ಜವಾಬ್ದಾರಿ ವಹಿಸಿಕೊಂಡು ಒಳ್ಳೇ ಕುಟುಂಬಸ್ಥರಾಗಿ ಸಂಪ್ರದಾಯದ ಪ್ರಕಾರ ಮಕ್ಕಳನ್ನು ಭಯಭಕ್ತಿಯಿಂದ ಬೆಳೆಸುತ್ತಿದ್ದರು. ಊರಿನಲ್ಲಿ ಗೌರವವುಳ್ಳ ವ್ಯಕ್ತಿಯಾಗಿ ಪ್ರೀತಿ ವಿಶ್ವಾಸದಿಂದ ಎಲ್ಲರೊಟ್ಟಿಗೆ ನಡೆದುಕೊಳ್ಳುತ್ತಿದ್ದರು. ಹೀಗೆ ದಿನಗಳು ಕಳೆದ ಮೇಲೆ ನನ್ನ ತಾಯಿಯು 10-7-76 ರಲ್ಲಿ ಹೆಣ್ಣು ಮಗುವಿಗೆ ಭಾನುವಾರ ಜನ್ಮ ನೀಡಿದರು. ಆಗ ಹೊಲದಲ್ಲಿ ಕೆಲಸ ಮಾಡುತ್ತಿದ್ದ ತಂದೆಯವರಿಗೆ ವಿಷಯ ತಿಳಿಸಿದರು. ತಂದೆಯವರು ವಿಷಯ ಕೇಳಿದ ಮೇಲೆ ಬೇಸರವಾದರು ಕಾರಣ ಅವರು ನಿರೀಕ್ಷಿಸಿದ್ದು ಗಂಡು ಮಗು ಆದರೆ ಹುಟ್ಟಿದ್ದು ಮತ್ತೇ ಹೆಣ್ಣು ಮಗು, ಅವರು ತುಂಬಾ ಬೇಸರದಿಂದ ಮನೆಗೆ ಬಂದು ಮಲಗಿದ್ದ ತಾಯಿಯನ್ನು ನೋಡಿ

ನಂತರ ತೊಟ್ಟಿಲಿನಲ್ಲಿದ್ದ ನನ್ನನ್ನು ದೃಷ್ಟಿಸಿ ನೋಡಿದರು, ನೋಡುತ್ತಾ . . . . ನೋಡುತ್ತಾ . . . ಅವರಿಗೆ ಇದ್ದ 'ಹೃದಯದ ನೋವು' ಬಿಟ್ಟು ಹೋಯಿತು, ಮನಸ್ಸಿಗೆ ಸಮಾಧಾನ ಸಿಕ್ಕಿತು. ಆಗ ತಂದೆಯವರು ನನ್ನನ್ನು ನೋಡಿ ಮನಸ್ಸಿನಲ್ಲಿ ಅಂದುಕೊಂಡರು ನಾನು ಗಂಡು ಮಗು ಕೇಳಿದೆ, ಆದರೆ ನನಗೆ ಮತ್ತೇ ಹೆಣ್ಣು ಮಗು ಹುಟ್ಟಿತು ನನಗೆ ಇದ್ದಂತಹ 'ಹೃದಯದ ನೋವ'ನ್ನು ತೆಗೆದುಬಿಟ್ಟಿತು. ಅದಕ್ಕಾಗಿ ಈ ಮಗುವು ನನಗೆ 'ಅದೃಷ್ಟದ ಮಗು' ಎಂದು ಹೇಳಿ ತುಂಬಾ ಸಂತೋಷ ಪಟ್ಟರು.

ಹೊಲದ ಕೆಲಸ ಮಾಡಲು ಎತ್ತು ಇಲ್ಲದೆ ಪರದಾಡುತ್ತಿದ್ದರು. ಕೆಲವು ದಿನಗಳು ಆದ ಮೇಲೆ ಪರಿಚಯವಿದ್ದ ಒಬ್ಬ ವ್ಯಕ್ತಿ ಬಂದು ತಂದೆಯೊಟ್ಟಿಗೆ "ಇಗೋ ಹನುಮಯ್ಯ ನೀನು ದುಡಿಮೆಗೆ ಎತ್ತನ್ನ ಕೇಳಿದೆ ಅಲ್ವಾ ತೆಗೆದಿಕೋ - ಇದರಿಂದ ನಿನ್ನ ಕಷ್ಟ ಪರಿಹಾರ ಆಗಲಿ, ದುಡಿದು ನಿನ್ನ ಮಕ್ಕಳನ್ನು ಸಾಕಿಕೋ ಎಂದು ಹೇಳಿ ಹೊರಟು ಹೋದರು." ತಂದೆಯವರಿಗೆ ಇದು ತುಂಬ ಆಶ್ಚರ್ಯವಾಯಿತು, ಕಾರಣ ಮಗು ಹುಟ್ಟುವವರೆಗೂ ಯಾರ ಬಳಿಯಲ್ಲಿಯೂ ಸಹಾಯ ಕೇಳಿದರೂ ಸಿಗಲಿಲ್ಲ, ಯಾರೂ ಸಹ ಎತ್ತನ್ನು ಕೇಳಿದರೂ ಕೊಡಲಿಲ್ಲ, ಮಗು ಹುಟ್ಟಿದ ಮೇಲೆ ನಾನು ಯಾರ ಬಳಿಯಲ್ಲೂ ಏನೂ ಕೇಳದೇನೇ ನನಗೆ ಸಹಾಯ ಬರುತ್ತದಲ್ಲಾ ಎಂದು ಆಶ್ಚರ್ಯ ಪಟ್ಟು, ಹಾಗಾದರೆ ಈ ಮಗು ಹುಟ್ಟಿದ ಮೇಲೆ ಒಂದೊಂದು ಅದೃಷ್ಟ ನಮಗೆ ಕೂಡಿ ಬರುತ್ತಾ ಇದೆ ಎಂದು ಗ್ರಹಿಸಿಕೊಂಡು ಈ ಮಗುವನ್ನು ನಾನು ನನ್ನ ಇಷ್ಟದ ಪ್ರಕಾರ ಬೆಳೆಸಬೇಕು ಎಂದು ತೀರ್ಮಾನ ಮಾಡಿ, ನಾನು ಗಂಡು ಮಗು ಅದೃಷ್ಟದ ಮಗು ಕೇಳಿದೆ ಆದ್ರೆ ಹೆಣ್ಣು ಮಗು ಅದೃಷ್ಟದ ಮಗುವಾಗಿ ಹುಟ್ಟಿರುವುದರಿಂದ ಈ ಮಗುವಿಗೆ ನಾನು 'ಪ್ಯಾಂಟ್ ಶರ್ಟ್' ಹಾಕಿ ಗಂಡು ಮಗುವಿನ ರೀತಿಯಲ್ಲಿ ಬೆಳೆಸುತ್ತೇನೆ ಎಂದು ತೀರ್ಮಾನ ಮಾಡಿ ತೊಟ್ಟಿಲಿನಲ್ಲೇ ನನಗೆ ಉಡುಪನ್ನು ನನ್ನ ತಂದೆ ಬದಲಾಯಿಸಿದರು. 6 ಹೆಣ್ಣು ಮಕ್ಕಳನ್ನು 2 ಗಂಡು ಮಕ್ಕಳನ್ನು ನೋಡಿದಾಗಲು ಅಷ್ಟು ಸಂತೋಷ ಅವರು ಕಾಣಲಿಲ್ಲ. ಆದರೆ ಕಡೇ ಮಗುವಾಗಿ ಹುಟ್ಟಿದ ನನ್ನನ್ನು ನೋಡುವಾಗಲೆಲ್ಲಾ ಅವರಿಗೆ ತುಂಬಾ ಸಂತೋಷವಾಗುತ್ತಿತ್ತು. ಬೆಳಿಗ್ಗೆ ಎದ್ದು ಮಗುವಿನ ಮುಖ ನೋಡದೇ ಯಾವುದೇ ಕೆಲಸಕ್ಕೆ ಹೋಗುತ್ತಿರಲಿಲ್ಲ. ಮುಖ ನೋಡಿಕೊಂಡೇ ಕೆಲಸಕ್ಕೆ ಹೋಗಿ ಕೈ ಹಾಕುತ್ತಿದ್ದರು, ಸಫಲ ಕಾಣುತ್ತಿದ್ದರು. ಮತ್ತು ಇದು ನನಗೆ ಅದೃಷ್ಟದ ಮಗು ಆದುದರಿಂದ ಈ ಮಗುವಿಗೆ ನಾನು "ಪದ್ಮಾವತಿ" ಎಂದು ಹೆಸರು ಇಡುತ್ತೇನೆ ಎಂದು ನಾಮಕರಣ ಮಾಡಿದರು.

# ೩. ಕುಟುಂಬದಲ್ಲಿ ಸಮೃದ್ಧಿ

"ನಿಮ್ಮ ಅಂತರಾತ್ಮವು ಯಾವಾಗಲೂ ಚೈತನ್ಯವುಳ್ಳದ್ದಾಗಿರಲಿ."
(ಕೀರ್ತ 22:26)

ತಂದೆಯವರು ಹೀಗೆ ಬೆಳೆಯುತ್ತಾ ಒಳ್ಳೊಳ್ಳೇ ಮನೆಗಳನ್ನು ಕಟ್ಟಿದರು. ಎಲ್ಲಾ ಮಕ್ಕಳಿಗೂ ಉತ್ತಮವಾದ ರೀತಿಯಲ್ಲಿ ಮದುವೆ ಮಾಡಿದರು. ಮನೆಯಲ್ಲಿ ಕೊರತೆಯೇ ಇಲ್ಲದಂತೆ ದವಸ ಧಾನ್ಯಗಳು ತುಂಬಿಕೊಂಡಿತು. ಕೆಲವು ಜಾಗದಲ್ಲಿ ರಾಗಿ ಹೊಲಗಳನ್ನು ಮಾಡಿಸಿದರು. ಎಲ್ಲಾ ರೀತಿಯ ಬಡತನ ದೂರವಾಯಿತು. ಮಡಿವಾಳ ಗ್ರಾಮದಲ್ಲಿ ಹನುಮಪ್ಪ ಕುಟುಂಬ ಶ್ರೀಮಂತ ಕುಟುಂಬವಾಗಿ ಬೆಳೆದು ಬಂತು. ತಂದೆಯವರು ನನಗೆ ಯಾವ ಕೊರತೆಯೂ ಮಾಡದೇ, ನಾನು ಕೇಳಿದ್ದೆಲ್ಲವನ್ನೂ ತೃಪ್ತಿಕರವಾಗಿ ಕೊಡುತ್ತಾ, ತನ್ನ ಮಡಿಲಿನಲ್ಲೇ ಇಟ್ಟು ಕೊಂಡು ಬೆಳೆಸುತ್ತಾ ಬಂದರು.

ಅವರಿಗಿದ್ದ ಕಷ್ಟ, ಕೊರತೆ, ಬಡತನ, ಖಾಯಿಲೆ, ಎಲ್ಲವೂ ನಾನು ಹುಟ್ಟಿದ ನಂತರ ಅವರನ್ನು ಬಿಟ್ಟು ಹೋಯಿತೆಂದು ಅವರು ತಿಳಿದುಕೊಂಡು, ನನ್ನನ್ನು ಜೀವಕ್ಕೆ ಜೀವವಾಗಿ ನೋಡಿಕೊಳ್ಳುತ್ತಿದ್ದರು. ನಾನು ಬೆಳೆಯುತ್ತಾ ಬರೀ ಹಣದಲ್ಲೇ ನಾನು ಬೆಳೆದು ಬಂದೆನು ಎನ್ನುವ ಮಾತು ಸತ್ಯದ ಮಾತಾಗಿದೆ. ಈ ಮಗು 'ನನ್ನ ಉಸಿರು' ಎಂದು ಎಲ್ಲರ ಬಳಿಯಲ್ಲೂ ಹೇಳುತ್ತಾ ಇದ್ದರು. ನನ್ನ ತಂದೆ ನನಗೆ ಯಾವ ಕೊರತೆಯೂ ಇಲ್ಲದಂತೆ ಬೆಳೆಸಿಕೊಂಡು ಬಂದರು. ಆದರೆ ಮನೆಯಲ್ಲಿ ಅಕ್ಕಂದಿರಿಗೆ ಅಣ್ಣನಿಗೆ ನನ್ನ ಬೆಳವಣಿಗೆಯನ್ನು ನೋಡಿ ಹೊಟ್ಟೆಕಿಚ್ಚು ಬಂದಿತು. ಏಕೆಂದರೆ ನನ್ನ ತಂದೆ ಅವರನ್ನು ನನ್ನ ಹಾಗೆ ಬೆಳೆಸಲಿಲ್ಲ. ಕಷ್ಟದಿಂದಲೇ ಬೆಳೆಸಿಕೊಂಡು ಬಂದರು. ಸರಿಯಾಗಿ ಬಟ್ಟೆಯನ್ನು ತೆಗೆದುಕೊಡುತ್ತಿರಲಿಲ್ಲ. ವರ್ಷಕ್ಕೆ ಎರಡು-ಮೂರು ಮಾತ್ರ. ಆದರೆ ನನಗೆ ಹೆಚ್ಚು ಹೊಸ-ಹೊಸ ಬಟ್ಟೆಗಳು ದಿನೇ-ದಿನೇ ಬರುತ್ತಲೇ ಇತ್ತು. ತಿಂಡಿಗಳು ನಾನು ಕೇಳಿದ್ದನ್ನೆಲ್ಲಾ ಅಪ್ಪ ಕೊಡಿಸೇ ಕೊಡಿಸುತ್ತಾರೆ, ಅವರಿಗೆ ಹೀಗೆ ಮಾಡುತ್ತಿಲ್ಲವಲ್ಲ ಎಂದು ಹೇಳಿ ಪ್ರತಿಭಾರಿಯೂ ಗುಣುಗುಟ್ಟುತ್ತಿದ್ದರು.

ನನ್ನ ತಂದೆಯವರು ನನ್ನನ್ನು ತನಗೆ ಮುದ್ದು ಮಗಳೆಂದೆ ತಾವೇ ಯಾವಾಗಲೂ ಕೈ ಹಿಡಿದುಕೊಂಡು ಶಾಲೆಗೆ ಕರೆದುಕೊಂಡು ಹೋಗುತ್ತಿದ್ದರು. ಮನೆಗೂ ಸಹ ಅವರೇ ಕರೆದುಕೊಂಡು ಬರುತ್ತಿದ್ದರು. ಈ ರೀತಿ ಪ್ರೀತಿಯಿಂದ ಬೆಳೆದು ಬಂದ ನನಗೆ ಯಾವ ಕೆಲಸವನ್ನು ಮಾಡಲು ಬಿಡುತ್ತಿರಲಿಲ್ಲ. ಬಹಳ ಚನ್ನಾಗಿ ನನ್ನನ್ನು ಬೆಳೆಸಿಕೊಂಡು ಬರುತ್ತಿದ್ದರು.

ತಾಯಿಯವರು ಕೆಲಸ ಕಾರ್ಯದಲ್ಲಿ ತೊಡಗುತ್ತಿದ್ದರು, ಅದೇ ರೀತಿ ಎಲ್ಲಾ ಮಕ್ಕಳನ್ನು ಒಳ್ಳೇ ಭಾವನೆಯಲ್ಲಿ, ಒಳ್ಳೇ ಕಾರ್ಯಗಳನ್ನು ಕಲಿಸಿಕೊಡುತ್ತಾ ಕುಟುಂಬಕ್ಕೆ ಒಳ್ಳೇ ತಾಯಿ ಎನ್ನುವ ಪ್ರೀತಿಯನ್ನು ಪಡೆದುಕೊಂಡರು. ಎಷ್ಟೇ ಕಷ್ಟ ಬಂದರೂ ಹಿಂಸೆ ಇದ್ದರೂ ಯಾರ ಬಳಿ ಹೇಳಿಕೊಳ್ಳುತ್ತಿರಲಿಲ್ಲ. ಎಲ್ಲಾ ನೋವುಗಳನ್ನು ಸಹಿಸಿಕೊಂಡು ಕುಟುಂಬದ ಗೌರವವನ್ನು ಕಾಪಾಡಿಕೊಳ್ಳುತ್ತಾ ಬರುತ್ತಿದ್ದರು. ಎಲ್ಲರಿಗೂ ಒಳ್ಳೇಯದನ್ನೇ ಮಾಡಬೇಕು; ಕೆಟ್ಟದ್ದನ್ನೂ ಮಾಡಬಾರದು. ಒಳ್ಳೇಯ ಹೆಸರನ್ನು ಪಡೆದುಕೊಳ್ಳಬೇಕು ಎನ್ನುವ ಛಲದಿಂದ ಎಲ್ಲಾ ಕೆಲಸ ಕಾರ್ಯಗಳನ್ನು ಧೈರ್ಯವಾಗಿ ನಿಭಾಯಿಸುತ್ತದ್ದರು. ತಾಯಿಯವರು ಊಟಕ್ಕಿಂತ ಹೆಚ್ಚು ಎಲೆ, ಅಡಿಕೆ, ಹೊಗೆಸೊಪ್ಪು ಹಾಕುವ ಅಭ್ಯಾಸವಿತ್ತು, ಇವರು ಏನು ಬಿಟ್ಟರೂ ಎಲೆ, ಅಡಿಕೆ ಬಿಡಲ್ಲಾ ಎನ್ನುವ ಪದ್ಧತಿಯಲ್ಲಿದ್ದರು. ತಂದೆಯವರು ಎಲೆ, ಅಡಿಕೆ ತೆಗೆದುಕೊಂಡು ಬರಲಿಲ್ಲವೆಂದರೆ ಮನೆಯಲ್ಲಿ ಜಗಳ ಆಗುತ್ತಿತ್ತು.

ನಾನು ಬೆಳೆಯುತ್ತಾ ಬರುಬೇಕಾದರೆ ನನ್ನ ತಂದೆ ಹೇಳುತ್ತಿದ್ದರು. “ನೀನು ನನಗೆ ದೇವರು; ನಾನು ನಿನಗೆ ದೇವರು” ನಾ ಹೇಳಿದ ರೀತಿ ನೀನು ಕೇಳಿಕೊಂಡು ನಡೆದುಕೊಂಡು ಹೋಗುವುದಾದರೆ ನಿನ್ನನ್ನು ಮಹಾರಾಣಿಯಾಗಿ ಬೆಳೆಸುತ್ತೇನೆ ಎಂದು. ಹೇಳುತ್ತಿದ್ದ ಕಾರಣ ನನ್ನ ಮನಸ್ಸಿನಲ್ಲಿ ನನ್ನ ತಂದೆಯ ಮೇಲೆ ಅಪಾರವಾದ ಪ್ರೀತಿಯಿತ್ತು.

ನಾನು ತಂದೆಯೊಟ್ಟಿಗೆ ಸಂತೋಷವಾಗಿ ಇರುತ್ತಿದ್ದೆ. ನನ್ನ ತಾಯಿಯೊಟ್ಟಿಗೆ ಅಷ್ಟು ಇರುತ್ತಿರಲಿಲ್ಲ. ಕಾರಣ ಅಮ್ಮ ಆ ಕೆಲಸ ಮಾಡು ಈ ಕೆಲಸ ಮಾಡು ಅಂತ ಹೇಳುವಾಗ ನಾನು ಕೆಲಸ ಮಾಡದೇ ಓಡಿ ಹೋಗಿ ತಂದೆಯ ಬಳಿಯಲ್ಲಿ ಇರುತ್ತಿದ್ದೆ. ತಂದೆ ನನ್ನನ್ನು ಆಟವಾಡುವುದಕ್ಕೆ ಹೊರಗೆ ಹೋಗಲು ಅನುಮತಿಸುತ್ತಿದ್ದರು. ನಾನು ಏನನ್ನು ಕೇಳುತ್ತೇನೋ ಅದನ್ನು ಕೊಡಿಸುತ್ತಿದ್ದರು, ‘ಅಪ್ಪ’ ಎಂದರೇ ನನಗೆ ತುಂಬಾ ಇಷ್ಟ ನಾನು ಅಪ್ಪನ ಪ್ರೀತಿಯನ್ನು ತುಂಬ ಹೊಂದಿಕೊಳ್ಳುತ್ತಿದ್ದೆ. ಅವರು ಎಲ್ಲಿಗೆ ಹೋದರೂ ನನಗಾಗಿ ಏನಾದರೂ ಒಂದು ತಿಂಡಿಯನ್ನು ತೆಗೆದುಕೊಂಡು ಬರುತ್ತಿದ್ದರು. ನನಗೆ ಸಿಕ್ಕಿದಂತಹ ತಾಯಿ-ತಂದೆ ಬೇರೆಯವರಿಗೆ ಸಿಕ್ಕಿದ್ದಾರೋ ಇಲ್ಲವೋ ಅದು ನನಗೆ ಗೊತ್ತಿಲ್ಲ, ಆದರೆ ನನಗೆ ಅವರು ತುಂಬ ಪ್ರಿಯವಾದಂತಹ ಪೋಷಕರು.

ನನ್ನ ಕೈಯಿಂದ ಯಾವ ಕೆಲಸ ಸಹಾ ಮಾಡಿಸುತ್ತಿರಲಿಲ್ಲ. ಮನೆಯಲ್ಲಿ ನನ್ನ ಕೆಲಸ ಅಂದರೆ ಅಪ್ಪನ ಜೊತೆಯಲ್ಲೇ ಇರಬೇಕು. ಚೆನ್ನಾಗಿ ಓದಬೇಕು, ಅಷ್ಟೇ ಬೇರೇನೂ ಗೊತ್ತಿಲ್ಲ, ಬೇರೇನೂ ಬರಲ್ಲ. ನಾನು ಕೆಲಸ ಮಾಡದೇ

ಯಾವಾಗಲೂ ಹೊರಗಡೆ ಆಟವಾಡುತ್ತಿದ್ದ ಕಾರಣ ಆಗಾಗ ತಂದೆ-ತಾಯಿ ಜಗಳವಾಡುತ್ತಿದ್ದರು. ತಾಯಿ ಹೇಳುವ ಮಾತನ್ನು ನಾನು ಸರಿಯಾಗಿ ಕೇಳುತ್ತಿರಲಿಲ್ಲ. ಆದರೂ ಪ್ರೀತಿಯಿಂದ ಹೇಳುವಾಗ ನಾನು ಸ್ವಲ್ಪ-ಸ್ವಲ್ಪ ಕೆಲಸ ಮಾಡುತ್ತಿದ್ದೆ. ಅದು ಕಷ್ಟವಾದ ಕೆಲಸ ಅಲ್ಲಾ; ಸುಲಭವಾದ ಕೆಲಸಗಳು ಮಾಡುತ್ತಿದ್ದೆ.

ಮನೆಯಲ್ಲಿ ಹಸು ಇತ್ತು ತಾಯಿ ಹಾಲು ಕರೆದು ಮೊಸರು ಮಾಡಿ ಅದನ್ನು ಮಾರಲು ಕಳುಹಿಸುತ್ತದ್ದರು. ಆ ಮೊಸರು ಮಾರಿ ಬಂದರೆ ನನಗೆ 5:00 ರೂ ಕೊಡತ್ತಿದ್ದರು. ಅದಕ್ಕೆ ನಾನು ಮೊಸರು ಮಾರಲು ಹೋಗುತ್ತಿದ್ದೆ. ಮತ್ತೇ ಬಾಡಿಗೆ ವಸೂಲಿ ಮಾಡಲು ಗಾಡಿಯಲ್ಲಿ ಕಳುಹಿಸುತ್ತಿದ್ದರು. ನನಗಂತೂ ದ್ವಿಚಕ್ರ ವಾಹನವನ್ನು ಓಡಿಸುವುದಕ್ಕೆ ತುಂಬ ಇಷ್ಟ ಮನೆಯ ಹತ್ತಿರದಲ್ಲೇ ಅಂಗಡಿಯಿದ್ದರೂ ನಡೆದುಕೊಂಡು ಹೋಗುತ್ತಿರಲಿಲ್ಲ, ಆ ಕೆಲಸಕ್ಕಾಗಿ ವಾಹನವನ್ನು ತೆಗೆದುಕೊಂಡು ಹೋಗಿ ಬರುತ್ತಿದ್ದೆ. ನಂತರ ಎಸ್.ಟಿ.ಡಿ ಭೂತನ್ನು ಹಾಕಿದ್ದರು ಅದನ್ನು ನೋಡಿಕೊಳ್ಳುತ್ತಿದ್ದೆ. ನನಗೆ ಕ್ರಿಕೇಟ್, ಗೋಲಿ, ಜಿಲ್ಲಿದಾಂಡ್ ಆಟಗಳೆಂದರೆ ತುಂಬ ಇಷ್ಟ ಆದ ಕಾರಣ ಮನೆಯಲ್ಲಿ ಹೆಚ್ಚು ಇರುತ್ತಿರಲಿಲ್ಲ, ಹುಡುಗರೊಟ್ಟಿಗೆ ಆಟವಾಡಲು ಹೋಗುತ್ತಿದ್ದೆ. ಆಗ ನನ್ನ ತಂದೆ ನನ್ನನ್ನು ಬೈಯದೇ ಪ್ರೀತಿಯಿಂದಲೇ ಎಲ್ಲಾ ಕಡೆ ಕಳುಹಿಸಿಕೊಡುತ್ತಿದ್ದರು. ಹೆಣ್ಣು ಮಕ್ಕಳ ಆಟವಾಗಲಿ, ಹೆಣ್ಣು ಮಕ್ಕಳ ಕೆಲಸವಾಗಲಿ, ನನಗೆ ಯಾವುದೂ ಬರುತ್ತಿರಲಿಲ್ಲ. ಆ ರೀತಿಯಾಗಿ ತಂದೆಯವರು ನನ್ನ ಇಷ್ಟದ ಪ್ರಕಾರವಾಗಿಯೂ, ಅವರ ಇಷ್ಟದ ಪ್ರಕಾರವಾಗಿಯೂ ನನ್ನನ್ನು ಬೆಳೆಸುತ್ತಿದ್ದರು.

ನನ್ನ ತಂದೆಗೆ ನಾನು ಹುಟ್ಟಿದ ಮೇಲೆ ಎಲ್ಲಾ ಆಸ್ತಿ-ಪಾಸ್ತಿಗಳನ್ನು ಅವರು ಮಾಡಿಕೊಳ್ಳಲು ಸಾಧ್ಯವಾಯಿತೆಂದು ಅವರು ನನಗೆ ಹೆಚ್ಚು ಕಾಳಜಿಯನ್ನು ಕೊಡುತ್ತಿದ್ದರು.

## 4. ನನ್ನ ಸ್ನೇಹ

"ಭಾಗ್ಯವಂತನಿಗೆ ಬಹು ಮಂದಿ ಸ್ನೇಹಿತರು;" (ಜ್ಞಾನೋ 19:14)

ನಾನು 7ನೇ ತರಗತಿಯವರೆಗೂ ಯಾರ ಸ್ನೇಹ ಬೆಳೆಸಲಿಲ್ಲ. ಸ್ಕೂಲಿನಲ್ಲಿರುವ ಸ್ನೇಹಿತೆಯರ ಜೊತೆ ಮಾತನಾಡುತ್ತಿದ್ದೆ ಅಷ್ಟೇ, ಅಪಾರವಾದ ಸ್ನೇಹವು ಯಾರ ಮೇಲೂ ನನಗೆ ಬೆಳೆದಿರಲಿಲ್ಲ, ಕಾರಣ ನನ್ನ ತಂದೆ ಅಷ್ಟು ಪ್ರೀತಿಯಿಂದ ನನ್ನನ್ನು ನೋಡಿಕೊಳ್ಳುತ್ತಿದ್ದರು. ನಾನು ಇಷ್ಟಪಡುವ ವಸ್ತು ಬಟ್ಟೆ

ತಿಂಡಿ ಎಲ್ಲಾ ಕೊಡಿಸುತ್ತಿದ್ದರು, ಕೈಗೆ ಹಣ ಕೊಡುತ್ತಿದ್ದರು, ನನಗೆ ಯಾವ ಕೊರತೆಯೂ ಇರಲಿಲ್ಲ, ಹೆಚ್ಚಿನದಾಗಿ ತಂದೆ ಪ್ರೀತಿ ಬಹಳವಾಗಿತ್ತು ಆಗ ಯಾರ ಸ್ನೇಹವೂ ನನಗೆ ಬೇಡವಾಗಿತ್ತು. ಯಾವಾಗಲೂ ತಂದೆಯೊಟ್ಟಿಗೆ ಸಂತೋಷವಾಗಿ ಇರುತ್ತಿದ್ದೆ.

ಕಷ್ಟ ದುಃಖ ಅನ್ನುವುದೇ ನನಗೆ ಗೊತ್ತಿರಲಿಲ್ಲ, ಮನೆಯಲ್ಲಿ ಕೆಲಸ ಮಾಡದೇ ಸುಮ್ಮನೇ ಅಲ್ಲಿ ಇಲ್ಲಿ ನಾನು ತಿರುಗಾಡುತ್ತಿದ್ದ ಕಾರಣದಿಂದ ನನ್ನ ತಾಯಿ ನನ್ನನ್ನು ಬೈಯುತ್ತಿದ್ದರು. ಮನೆಯಲ್ಲಿ ಎಲ್ಲರೂ ನನ್ನ ಮೇಲೆ ಕೋಪದಿಂದ ಇರುತ್ತಿದ್ದರು. ನಾನಂತೂ ತಂದೆಯ ಪ್ರೀತಿಯಲ್ಲಿಯೇ ಬೆಳೆಯುತ್ತಿದ್ದ ಕಾರಣ, ಯಾರು ಏನೇ ಅಂದರೂ ಕಿವಿಗೆ ಹಾಕಿಕೊಳ್ಳುತ್ತಿರಲಿಲ್ಲ. ನನ್ನಿಷ್ಟದ ಪ್ರಕಾರ ನಾನು ನಡೆದುಕೊಳ್ಳುತ್ತಿದ್ದೆ.

ಒಂದು ದಿನ ನನ್ನ ತಾಯಿ ನನ್ನನ್ನು ಕಠಿಣವಾಗಿ ಬೈದರೂ ಏನೆಂದರೆ - ನಿನ್ನ ಹಾಗೆ ನಮ್ಮ ಹೊಲದಲ್ಲಿ ಬಾಡಿಗೆ ಮನೆಯಲ್ಲಿ ಮೂರು ಹೆಣ್ಣುಮಕ್ಕಳು ತಂದೆ-ತಾಯಿ ಇದ್ದಾರೆ ಹೋಗಿ ನೋಡು, ಆ ಮಕ್ಕಳು ಮನೆ ಕೆಲಸ ಮಾಡಿಕೊಂಡು ಎಷ್ಟು ಚೆನ್ನಾಗಿ ನಿನ್ನ ಹಾಗೆಯೇ ಓದುತ್ತಾರೆ ನೀನು ಇದ್ದೀಯಾ! ಏನೂ ಕೆಲಸ ಮಾಡಲ್ಲ; ಊರೆಲ್ಲಾ ತಿರುಗಾಡುತ್ತೀಯಾ ಎಂದು ಹೇಳಿ ಬೈದು ಹೊಡೆದರು. ನನಗೆ ತುಂಬ ದುಃಖವಾಗಿ ಆ ಕುಟುಂಬ ಯಾವುದು ಎಂದು ನೋಡಲು ಹೋದೆ, ಬಡತನದಲ್ಲಿ ಜೀವನ ಸಾಗುತ್ತಿದ್ದಂತಹ ಕುಟುಂಬ, ನನ್ನ ತಾಯಿ ಹೇಳಿದ್ದು ನಿಜ ಅಂದುಕೊಂಡು ಅವರೊಟ್ಟಿಗೆ ಸ್ನೇಹ ಬೆಳೆಸಲು ಆರಂಭಿಸಿದೆ.

ಇವರ ಸ್ನೇಹ ನನ್ನಲ್ಲಿ ಬೆಳೆದು ಬಂದಾಗ ಮೊದಲು ನನ್ನಲ್ಲಿ ಬಿದ್ದ ಗಾಯ ವಿದ್ಯಾಭ್ಯಾಸ; ಮೂರು ಹೆಣ್ಣು ಮಕ್ಕಳೊಟ್ಟಿಗೆ ಸೇರಿಕೊಂಡು ಆಟ ಆಡುವುದರಲ್ಲಿ ಹೆಚ್ಚು ಸಮಯ ಕಳೆಯುತ್ತಿದ್ದೆ, ಅವರ ಮನೆಯಲ್ಲೇ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಜೊತೆಯಲ್ಲೇ ಇರುತ್ತಿದ್ದೆ. ಓದುವುದಕ್ಕೆ ಇಷ್ಟ ಆಗುತ್ತಿರಲಿಲ್ಲ ನನ್ನ ತಂದೆಗೆ ಸುಳ್ಳು ಹೇಳಿ ತಪ್ಪಿಸಿಕೊಳ್ಳುತ್ತಿದ್ದೆ. ನಾನು ಏನೇ ಸುಳ್ಳು ಹೇಳಿದರೂ ತಂದೆಗೆ ಅರ್ಥವಾಗುತ್ತಿತ್ತು ಆದರೆ ನನ್ನನ್ನು ಬೈಯುತ್ತಿರಲಿಲ್ಲಾ, ಹೊಡೆಯುತ್ತಿರಲಿಲ್ಲ, ಮನೆಯಲ್ಲಿ ಎಲ್ಲರೊಟ್ಟಿಗೆ ಸಲಿಗೆಯಿಂದ ಬೆರೆತು ಇರುತ್ತಿದ್ದೆ.

ಆದರೆ ದೊಡ್ಡಣ್ಣ ಅಂದರೆ ಮೈಯಲ್ಲಾ ನಡಕ ಆಗುತ್ತದೆ. ಯಾಕೆಂದರೆ ಓದದೇ ಇರುವಾಗಲೆಲ್ಲಾ, ಅವನು ಹೇಳಿದ ಮಾತು ಕೇಳದೆ ಇರುವಾಗಲೆಲ್ಲಾ, ದಾರಿಯಲ್ಲಿ ಹುಡುಗಿಯರೊಟ್ಟಿಗೆ ಕಾಣುವಾಗಲೆಲ್ಲಾ ಸರಿಯಾಗಿ

ಹೊಡೆಯುತ್ತಿದ್ದರು. ಆ ಹೊಡೆತಕ್ಕೆ ಹೆಚ್ಚು ಭಯಪಡುತ್ತಿದ್ದೆ. ಅವರ ಮುಂದೆ ನಿಂತು ಮಾತಾಡುವುದಕ್ಕೆ ಹೆದರುತ್ತಿದ್ದೆ. ಅಷ್ಟು ಬಿಟ್ಟರೇ ಮನೆಯಲ್ಲಿ ಎಲ್ಲರೊಟ್ಟಿಗೆ ಆನಂದವಾಗಿ ಇರುತ್ತಿದ್ದೆ.

## 5. ನನ್ನ ತಾಯಿ

"ತನಗೆ ಬೇಕಾದದ್ದನ್ನು ಮಾಡುತ್ತಾನೆ." (ಕೀರ್ತ 135:6)

ತಾಯಿಯವರು ಎಲೆ ಅಡಿಕೆ ಹಾಕುತ್ತಿದ್ದ ಕಾರಣ ಬಾಯಲ್ಲಿ ಕ್ಯಾನ್ಸರ್ ಬಂದಿತು. ಆದುದರಿಂದ ಅವರು ಎರಡು ವರುಷ ಬಹಳಷ್ಟು ವೇದನೆಯನ್ನು ನೋವನ್ನು ಅನುಭವಿಸಿದರು. ಎಷ್ಟೇ ಚಿಕಿತ್ಸೆ ಪಡೆದರೂ ಪ್ರಯೋಜನ ಆಗಿರಲಿಲ್ಲ. ಎಲ್ಲಾ ದೇವರುಗಳಿಗೆ ಹರಿಕೆಮಾಡಿ ಪೂಜೆಗಳನ್ನು ಮಾಡಿಸುತ್ತಿದ್ದರು ಪ್ರಯೋಜನವಾಗಲಿಲ್ಲ.. ನಾನು ಸಹಾ ಮಂಗಳವಾರ ಶುಕ್ರವಾರ ಪೂಜೆಮಾಡಿಕೊಂಡು ತಂದೆ ಹೇಳಿದ ರೀತಿ ಮಾಡುತ್ತಿದ್ದೆ.

ನಾನು ವಯಸ್ಸಿಗೆ ಬಂದ ಮೇಲೆ ನನಗೆ ತುಂಬಾ ಹೊಟ್ಟೆನೋವು ಬರುವುದಕ್ಕೆ ಪ್ರಾರಂಭವಾಯಿತು. ಅದು ಕಡಿಮೆ ಆಗುತ್ತಲೇ ಇರಲಿಲ್ಲ. ಪ್ರತಿ ತಿಂಗಳು ಹೆಚ್ಚಾಗುತ್ತಿತ್ತು, ನಾನು ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆಯುವುದಾದರೆ ಮಾತ್ರ ವಾಸಿ ಆಗುತ್ತಿತ್ತು. ಇಲ್ಲದಿದ್ದರೆ ತುಂಬಾ ಕಷ್ಟವಾಗುತ್ತಿತ್ತು. ನನ್ನ ತಾಯಿಯವರು ಆರೋಗ್ಯವಾಗಿರಬೇಕಾದ ಸಮಯದಲ್ಲಿ ನನ್ನನ್ನು ನೋಡಿಕೊಳ್ಳುತ್ತಿದ್ದರು. ಅವರು ಹಾಸಿಗೆ ಹಿಡಿದ ಮೇಲೆ ನನ್ನನ್ನು ನೋಡಿಕೊಂಡಿದ್ದು ತಂದೆ ಆಗಿದ್ದರು. ಆದರೆ ನನ್ನ ಪರಿಸ್ಥಿತಿಯನ್ನು ನನ್ನ ತಂದೆ ಅರ್ಥಮಾಡಿಕೊಳ್ಳಲಾಗುತ್ತಿರಲಿಲ್ಲ.

ತಾಯಿಯವರು ಎರಡು ವರ್ಷ ಆದ ಮೇಲೆ ತುಂಬ ಹೀನಸ್ಥಿತಿಗೆ ಬಂದರು, ಆಗ ಯೇಸು ಕ್ರಿಸ್ತನನ್ನು ಹಿಂಬಾಲಿಸುತ್ತಿದ್ದಂತಹ ಐದು ಮಂದಿ ಸಹೋದರಿಯರು ಬಂದು ನನ್ನ ತಾಯಿಯವರಿಗಾಗಿ ಅಳುತ್ತಾ ಪ್ರಾರ್ಥಿಸಿದರು. ಅವರು ಅಳುತ್ತಾ ಪ್ರಾರ್ಥಿಸುತ್ತಿದ್ದುದ್ದನ್ನು ನೋಡಿ ನನಗೆ ತುಂಬಾ ಆಶ್ಚರ್ಯವಾಯಿತು, ನನ್ನ ತಾಯಿಗಾಗಿ ಇವರು ಯಾಕೆ ಅಳುತ್ತಾರೆ ಎನ್ನುವ ಸಂಶಯವಾಯಿತು. ಆದರೆ ನಾನು ಕರ್ತನನ್ನು ನನ್ನ ಸ್ವಂತ ರಕ್ಷಕನಾಗಿ ಅಂಗೀಕರಿಸಿಕೊಳ್ಳುವವರೆಗೂ ಈ ಸಂಶಯವು ನನ್ನ ಬಿಟ್ಟು ಹೋಗಲೇ ಇಲ್ಲ

ಸ್ವಲ್ಪ ದಿನಗಳು ಆದ ಮೇಲೆ ಕ್ರಿ.ಶ.1994ರಲ್ಲಿ ನನ್ನ ತಾಯಿಯವರು

ಈ ಲೋಕ ಯಾತ್ರೆಯನ್ನು ಮುಗಿಸಿ ನನ್ನನ್ನು ನನ್ನ ಕುಟುಂಬವನ್ನು ಬಿಟ್ಟು ಅಗಲಿ ಹೋದರು. ನಂತರ ನನ್ನ ತಂದೆಯವರು ನನ್ನನ್ನು ತಾಯಿಲ್ಲದ ಮಗು ಎಂದು ಮೊದಲಿಗಿಂತ ಇನ್ನೂ ಹೆಚ್ಚಾಗಿ ಪ್ರೀತಿ ಮಾಡಲು ಆರಂಭಿಸಿದರು.

## 7. ನನ್ನ ಬೆಳವಣಿಗೆ

"ಶರೀರಭಾವವು ಅಭಿಲಾಷಿಸುವದು ಆತ್ಮನಿಗೆ ವಿರುದ್ಧವಾಗಿದೆ,
ಆತ್ಮನು ಅಭಿಲಾಷಿಸುವದು ಶರೀರಭಾವಕ್ಕೆ ವಿರುದ್ಧವಾಗಿದೆ." (ಗಲಾ 5:17)

ನನ್ನ ತಂದೆಗೆ ನನ್ನ ಮೇಲೆ ತುಂಬಾ ನಂಬಿಕೆಯಿತ್ತು. ಆ ನಂಬಿಕೆಯಲ್ಲಿ ಎಲ್ಲಾ ರೀತಿಯಲ್ಲೂ ನನ್ನನ್ನು ಸ್ವತಂತ್ರವಾಗಿ ಜೀವಿಸಲು ಬಿಡುತ್ತಿದ್ದರು. ನಾನು ಎಲ್ಲೇ ಹೋಗಿ ಬಂದರೂ ಸುಮ್ಮನಾಗುತ್ತಿದ್ದರು. ನಾನು ಬೆಳಿಗ್ಗೆ 9 ಅಥವಾ 10 ಕ್ಕೆ ಮನೆ ಬಿಟ್ಟರೆ ಸಂಜೆ 6 ಅಥವಾ 7 ಘಂಟೆಗೆ ಮನೆ ಸೇರುತ್ತಿದ್ದೆ. ಆದರೂ ಒಂದೊಂದು ಭಾರಿ ನನ್ನ ತಂದೆಯವರು ಬೈದು ಎಚ್ಚರ ಕೊಡುತ್ತಿದ್ದದ್ದು ಉಂಟು. ಆದರೆ ನನ್ನ ಅಣ್ಣನು ನನ್ನನ್ನು ದಾರಿಯಲ್ಲಿ ಎಲ್ಲಾದರು ಆಟವಾಡುತ್ತಾ ಕಾಣಿಸಿದರೆ ಮನೆಗೆ ಬಂದು - 'ಬೀದಿ ನಾಯಿ ರೀತಿಯಲ್ಲಿ ಸುತ್ತುತ್ತೀಯಾ' ಎಂದು ಹೇಳಿ ಬಹಳವಾಗಿ ಹೊಡೆಯುತ್ತಿದ್ದರು. ಅವರು ಹೊಡೆದಾಗ ಮಾತ್ರ, ಒಂದೆರಡು ದಿವಸ ಎಲ್ಲೂ ಹೋಗುತ್ತಿರಲಿಲ್ಲ ಆಮೇಲೆ ಮತ್ತೇ ಹೊರಗಡೆ ಹೋಗುವುದು ಆಟ ಆಡುವುದೆಲ್ಲಾ ಶುರು ಆಗುತ್ತಿತ್ತು. ಹೀಗೆಯೇ ಆಟ-ಪಾಟಗಳಿಂದ ಸಿನಿಮಾ ನೋಡವುದರಿಂದ ನನ್ನ ವಿದ್ಯಾಭ್ಯಾಸ ಅಷ್ಟಕ್ಕೆ ಅಷ್ಟೇ ಇತ್ತು.

ಆ ದಿನಗಳಲ್ಲಿ ನನಗೆ 'ಮಾಲಾಶ್ರೀ' ಅಂದರೆ ತುಂಬ ಇಷ್ಟ ಅವಳು ಐ.ಎ.ಎಸ್ ಪಾತ್ರ ಮಾಡಿ ಫೈಟ್ ಮಾಡುವಂತಹದ್ದು ನನಗೆ ತುಂಬ ಇಷ್ಟವಿದ್ದ ಕಾರಣ ಟೆಂಟ್‌ಗೆ ಹೋಗಿ ಆಕೆಯ ಸಿನಿಮಾಗಳನ್ನು ವೀಕ್ಷಿಸುತ್ತಿದ್ದೆ. ಇದೂ ಸಹ ನನ್ನ ವಿದ್ಯಾಭ್ಯಾಸಕ್ಕೆ ತುಂಬಾ ಅಡೆ-ತಡೆಯಾಯಿತು.

ನನ್ನ ತಂದೆಯವರು ನನ್ನನ್ನು ಮತ್ತು ಅಣ್ಣನ ಮಕ್ಕಳನ್ನು 'ಕರಾಟೆ' ಕಲಿಯಲು ಕಳುಹಿಸುತ್ತಿದ್ದರು. ನಾವು ಅದನ್ನು ಕಲಿಯಲು ಹೋಗುತ್ತಿದ್ದೆವು. ಅಪ್ಪನಿಗೆ 'ಕೋಲು ವರಸೆ' ಗೊತ್ತಿತ್ತು ಮನೆಯಲ್ಲಿ ನನಗೆ ಅದನ್ನು ಸಹ ಅಲ್ಪ-ಸ್ವಲ್ಪ ಕಲಿಸಿಕೊಟ್ಟಿದ್ದರು. ತಂದೆಯವರಿಗೆ ನನ್ನನ್ನು 'ಇನ್ಸ್‌ಪೆಕ್ಟರ್' ಆಗಿ ಮಾಡಬೇಕೆಂಬ ಹಂಬಲದಿಂದ ನನ್ನನ್ನು ಓದಲು ಬಲವಂತಹ ಮಾಡುತ್ತಿದ್ದರು. ಆದರೆ ನಾನು ಅವರ ಮಾತಿಗೆ ಕಿವಿಗೊಡದೆ ಸುಮ್ಮನೆ ಸುಳ್ಳು-ಸುಳ್ಳಾಗಿ

ನೆಪವಾಗಿ ಚನ್ನಾಗಿ ಓದುತ್ತಿದ್ದೇನೆ ಎಂದು ಹೇಳುತ್ತಾ, ಅವರಿಂದ ಹಣವನ್ನು ತೆಗೆದುಕೊಂಡು ಹೋಗಿ ಸಿನಿಮಾ ನೋಡುತ್ತಾ ಗೆಳತಿಯರೊಟ್ಟಿಗೆ ನಾನು ಜಾಲಿಯಾಗಿ ಇರುತ್ತಿದ್ದೆ. ಇದು ನನ್ನ ಅಣ್ಣನಿಗೆ ಇಷ್ಟವಾಗದೇ ಯಾವಾಗಲೂ ಕೋಪದಿಂದಲೇ ನನ್ನ ಬಳಿಯಲ್ಲಿ ಮಾತಾಡುತ್ತಿದ್ದರು, ನನ್ನ ಹೆಸರು ಹಿಡಿದು ಕರೆಯದೇ 'ನಾಯಿ' ಅಂತ ಎಲ್ಲರ ಮುಂದೆ ಕರೆಯುತ್ತಿದ್ದರು. ಇದರಿಂದ ಅಣ್ಣನ ಪ್ರೀತಿ ನನಗೆ ಸಿಗಲಿಲ್ಲ.

ಮನೆಗೆ ಬಂದ ಅತ್ತಿಗೆಯೂ ಸಹಾ ನನ್ನನ್ನು ಅರ್ಥ ಮಾಡಿಕೊಳ್ಳಲಿಲ್ಲ. ಕಾರಣ ತಂದೆಯೊಟ್ಟಿಗೆ ಸುಳ್ಳು ಹೇಳಿ ನಾನು ಹೊರಗಡೆ ಹೋಗುತ್ತಿದ್ದುದರಿಂದಲೇ, ಮನೆಯಲ್ಲಿ ಯಾವ ಕೆಲಸವನ್ನೂ ಮಾಡುತ್ತಿರಲಿಲ್ಲ; ಇದರಿಂದ ಅವರಿಗೆ ನನ್ನ ಮೇಲೆ ಕೋಪವಿತ್ತು. ನಾನು ಸಹಾ ಅವರು ಹೇಳಿದ ಕೆಲಸ ಮಾಡದೇ ಇದ್ದುದರಿಂದ ನಮ್ಮಿಬ್ಬರ ಮಧ್ಯದಲ್ಲಿ ಜಗಳ ಆಗಿಂದಾಗ್ಗೆ ನಡೆಯುತ್ತಲೇ ಇತ್ತು. ಆದರೆ ನನ್ನ ತಂದೆಯವರು ಅಣ್ಣ-ಅತ್ತಿಗೆಯನ್ನು ಬೈಯುತ್ತಿದ್ದರು. ನನ್ನನ್ನು ಏನೂ ಬೈಯುತ್ತಿರಲಿಲ್ಲ.

ನನಗೆ ಒಳ್ಳೇ ವಿಧ್ಯಾಭ್ಯಾಸ ಕೊಡಿಸಬೇಕು ಎನ್ನುವ ಪ್ರಯಾಸದಲ್ಲಿ ತಂದೆಯವರು ಮುಂದಾಗಿದ್ದರು ಸಲಹೆ ಕೊಡುತ್ತಿದ್ದರು ನನಗೆ ಬೇಕಾಗಿರುವುದನ್ನು ತೆಗೆದುಕೊಡುತ್ತಿದ್ದರು. ಆರು ಜನ ಅಕ್ಕಂದಿರಲ್ಲಿ ನನಗೆ ಇಬ್ಬರು ಮಾತ್ರ ತುಂಬ ಇಷ್ಟ. ನನ್ನ ಆರನೇ ಅಕ್ಕನ ಹೆಸರು 'ಸ್ವರ್ಣಾಕ್ಷಿ' ಎಂದು. ಈಕೆಯು ನಾನು ಜೊತೆ- ಜೊತೆಯಾಗಿ ಓದುತ್ತಿದ್ದೆವು. ಆದರೆ ಅವಳಿಗೆ ಬೇಗನೆ ಮದುವೆ ಮಾಡಿದರು ಹೆಚ್ಚು ಓದಲಿಲ್ಲ ಈ ಅಕ್ಕನ ಮೇಲೆ ನನಗೆ ತುಂಬಾ ಪ್ರೀತಿ. ಆಕೆ ಮದುವೆಯಾದ ಮೇಲೆ ತನ್ನ ಗಂಡನ ಮನೆಯಲ್ಲಿ ಎರಡು ಮಕ್ಕಳನ್ನು ಹಡೆದ ಮೇಲೆ ಸ್ವಲ್ಪ ದಿನಗಳಲ್ಲೇ ಮರಣ ಹೊಂದಿದಳು.

ಅವರ ನಂತರ ನಾಲ್ಕನೇ ಅಕ್ಕ 'ಕೌಶಲ್ಯ' ಇವರೇ ನನ್ನ ಮತ್ತೊಂದು ಪ್ರೀತಿಯ ಅಕ್ಕ. ಈ ಅಕ್ಕನಿಗೆ ನಾನು ಎಲ್ಲಾ ವಿಷಯ ಹೇಳುತ್ತಿದ್ದೆ. ಹೆಚ್ಚು ಇವರ ಮನೆಯಲ್ಲಿ ಇರುತ್ತಿದ್ದೆ. ನನ್ನನ್ನು ಅರ್ಥ ಮಾಡಿಕೊಂಡು ನನಗೆ ಸಹಾಯಕವಾಗಿ ನನ್ನ ಅಕ್ಕ ಈಗಲೂ ನೆರವಾಗಿ ಇದ್ದಾರೆ. ಅಪ್ಪ ಮತ್ತು ಈ 4ನೇ ಅಕ್ಕ ಮಾತ್ರ ನನ್ನನ್ನು ಪ್ರೀತಿಸಿದ ನಿಜವಾದ ವ್ಯಕ್ತಿಗಳು. ಸ್ನೇಹಿತರನ್ನು ಮಾಡಿಕೊಂಡು ನನ್ನಿಂದ ಹಣ ಹೋಯಿತು, ಮನೆಯವರ ಪ್ರೀತಿ ಕಳೆದುಕೊಂಡೆ, ವಿಧ್ಯಾಭ್ಯಾಸ ನಿಂತುಹೋಯಿತು. ಸ್ನೇಹಿತರಿಂದ ಸಮಯ ಕಳೆಯುವಂತಹ ದಿನಗಳೇ ಹೊರತು ಕಲಿಯುವಂತ ಪಾಠ ಏನೂ ಇಲ್ಲ. ಆದರೆ ಈ ಸ್ನೇಹಿತರಿಂದ ಉತ್ತಮವಾಗಿರುವಂತಹ ಅಮೂಲ್ಯವಾದ ಒಂದು ಉಡುಗೊರೆ ಸಿಕ್ಕಿತು, ಅದು

ಬಿಟ್ಟರೇ ಸ್ನೇಹಿತರ ಪ್ರೀತಿ ಕೆಲವೊಂದಕ್ಕೆ ಸರಿ ಇರುತ್ತೇ; ಎಲ್ಲಾ ಸಮಯದಲ್ಲಿ ಸರಿಯಾಗಿ ಇರುವುದಿಲ್ಲ ಎಂದು ಹೇಳಬಹುದು.

ಸ್ನೇಹಿತರಲ್ಲಿ ಒಬ್ಬರೇ ಇಷ್ಟವಾಗಿದ್ದು ಆಕೆಯ ಹೆಸರು 'ರಾಧ'. ಈಕೆಯನ್ನು ಬಿಟ್ಟರೇ ಬೇರೆ ಯಾರನ್ನು ಅಷ್ಟಾಗಿ ನಾನು ಸ್ನೇಹ ಮಾಡಿಕೊಳ್ಳಲಿಲ್ಲ. ತಂದೆಯೊಟ್ಟಿಗೆ ಸುಳ್ಳು ಹೇಳಿ ಯಾವಾಗಲೂ ಈಕೆಯೊಟ್ಟಿಗೆ ಮಾತ್ರ ಇರುತ್ತಿದ್ದೆ.

## ೮.ಸುವಾರ್ತೆ ತಲುಪಿತು

"ಆಕಾಶದ ಕೆಳಗೆ ನಡೆಯುವ ಒಂದೊಂದು ಕೆಲಸಕ್ಕೂ ತಕ್ಕ ಸಮಯವುಂಟು."

(ಪ್ರಸಂಗಿ 3:1)

ತಂದೆ ಜೇಬಿನಲ್ಲಿ ಹಣ ಕದ್ದು ರಾಧಳ ಮನೆಗೆ ಕೊಡುತ್ತಿದ್ದೆ. ಇದರಿಂದ ತಂದೆಗೂ ಸಹಾ ಕೋಪ ಬಂದು ಬೈದು ಹೊಡೆಯುತ್ತಿದ್ದರು. ನಂತರ ಬೇಸರದಿಂದ ಸುಮ್ಮನೇ ಆಗುತ್ತಿದ್ದರು. ಹೀಗೇಯೇ ಒಂದು ದಿನ ರಾಧಳ ಮನೆಯಲ್ಲಿ ಸುವಾರ್ತೆ ಸಾರಲು ಕೆಲವೊಬ್ಬರು ಬಂದಿದ್ದರು. ನಾನು ರಾಧಳನ್ನು ಕಾಣಲು ಆಕೆಯ ಮನೆಗೆ ಹೋಗಿದ್ದೆನು ಆಕೆಯಾದರೋ ನನಗೆ ಹೇಳಿದಳು 'ಸುವಾರ್ತೆ ಸಾರಲು ಮನೆಯಲ್ಲಿ ಕೆಲವರು ಬಂದಿದ್ದಾರೆ ನೀನು ಬಂದು ಅವರು ಹೇಳುವುದನ್ನು ಕೇಳು' ಎಂದು ಹೇಳ ತೊಡಗಿದಳು. ನಾನಾದರೋ ಆ ಮಾತಿಗೆ ವಿರುದ್ಧವಾಗಿ ವಾದಿಸಿದೆನು, ಆದರೂ ಅವಳು ಹಟ ಮಾಡಿ ನನ್ನನ್ನು ಬಲವಂತವಾಗಿ ಒಳಗೆ ಕರೆದುಕೊಂಡು ಹೋದಳು. ನಾನು ಹೋಗಿ ಆ ವ್ಯಕ್ತಿಯ ಮುಂದೆ ಕುಳಿತುಕೊಂಡೆ.

ಅವರ ಮುಖವನ್ನು ನೋಡಿದಾಗ ಹಳೇ ಮುಖ ನಾನು ನೋಡಿದಂತಹ ವ್ಯಕ್ತಿಯಾಗಿದ್ದರು. ತತ್‌ಕ್ಷಣ ಜ್ಞಾಪಕಕ್ಕೆ ಬಂತು, ನನ್ನ ತಾಯಿಯು ಕ್ಯಾನ್ಸರ್ ಕಾಯಿಲೆಯಲ್ಲಿ ಇರುವಾಗ ಇವರು ಸಹಾ ಬಂದು ಕಣ್ಣೀರಿನಿಂದ ಪ್ರಾರ್ಥಿಸಿದ್ದರು. ನಂತರ ನಾನು ಇವರು ಏನು ಹೇಳುತ್ತಾರೋ ಎಂದು ಅವರನ್ನೇ ದೃಷ್ಟಿಸಿ ನೋಡುತ್ತಿದ್ದೆನು.

"ನೀವು ಪಾಪಪರಿಹಾರಕ್ಕಾಗಿ ದೇವರ ಕಡೆಗೆ ತಿರುಗಿಕೊಂಡು ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಸಾರಿ ಹೇಳಿರಿ" (ಮಾರ್ಕ 1:4) ಎನ್ನುವ ಪ್ರಕಾರ ನನಗೆ ಅವರು 'ಸುವಾರ್ತೆ' ಸಾರಲು ಪ್ರಾರಂಭಿಸಿದರು. ಒಂದು ಘಂಟೆ

ಕಾಲ ದೀರ್ಘಶಾಂತಿಯಿಂದ ನನ್ನೊಟ್ಟಿಗೆ ವಾಕ್ಯದ ಮುಖಾಂತರ ಮಾತಾಡಿದರು. ನಾನು ಎರಡು ಮನಸ್ಸುಳ್ಳವಳಾಗಿ ಕೇಳುತ್ತಾ, ರಾಧಳ ಬಲವಂತಕ್ಕಾಗಿ ನಾನು ಕುಳಿತುಕೊಂಡಿದ್ದೆ ಹೊರತು ಯಾವುದೇ ರೀತಿಯಲ್ಲೂ ಪೂರ್ಣ ಮನಸ್ಸಿನಿಂದ ಆಸೆಯಿಂದ ಅಲ್ಲಿ ನಾನು ಕುಳಿತುಕೊಳ್ಳಲಿಲ್ಲ. ಆದರೆ ದೇವರ ಆಲೋಚನೆಗೂ ನನ್ನ ಆಲೋಚನೆಗೂ ತುಂಬಾ ಅಂತರವಿತ್ತು. ಅದು ಕರ್ತನ ಸಮಯ ನನ್ನನ್ನು ಆರಿಸಿಕೊಳ್ಳುವ ಸಮಯವೆಂದು ನನಗೆ ಆಗ ಅರ್ಥವಾಗಲೇ ಇಲ್ಲ. ಅವರು ಸುವಾರ್ತೆಯಲ್ಲಿ ಹೇಳಿದ ಒಂದು ವಾಕ್ಯ ಮಾತ್ರ ನನ್ನ ಹೃದಯ ಮುಟ್ಟಿತು. ಅದೇನೆಂದರೆ "ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿಕೊಂಡರೆ ಅದನ್ನು ನೆರವೇರಿಸುವೆನು" (ಯೋಹಾ 14:14) ಎಂದು ಹೇಳಿದರು. ಮತ್ತು ಆ ವಾಕ್ಯದ ಅರ್ಥವನ್ನು ಸ್ಪಷ್ಟವಾಗಿ ತಿಳಿಸಿದರು, ನಂತರ ನನ್ನ ತಲೆಯ ಮೇಲೆ ಕೈಯಿಟ್ಟು ಪ್ರಾರ್ಥಿಸಿದರು. ಸುವಾರ್ತೆ ಹೇಳುವುದು ಮುಗಿದ ಮೇಲೆ ಅವರ ಹೆಸರು- 'ಮೇರಿಕುಟ್ಟಿ' ಎಂದು ತಿಳಿಸಿ ಪರಿಚಯ ಮಾಡಿ ಫೋನ್ ನಂಬರ್ ಕೊಟ್ಟು ಹೋದರು.

## ೯. ಮೊಟ್ಟ ಮೊದಲ ಅದ್ಭುತ

ನಾನು ಮನೆಗೆ ಹೋದ ನಂತರ ಸುವಾರ್ತೆಯನ್ನು ಮತ್ತು ಯೇಸುಕ್ರಿಸ್ತನ ಬಗ್ಗೆ ತಿಳಿಸಿದ್ದನ್ನು ಮರೆತುಬಿಟ್ಟೆ, ನನ್ನ ತಂದೆಯೊಟ್ಟಿಗೆ ದೇವಸ್ಥಾನಗಳಿಗೆ ಹೋಗುತ್ತಾ ಪೂಜೆಗಳನ್ನು ಮಾಡುತ್ತಾ ಕಾಲಗಳನ್ನು ಕಳೆಯುತ್ತಿದ್ದೆ. ನನ್ನ ತಂದೆ ಹೇಳಿದ ಹಾಗೆ ಕೇಳುವುದಾದರೆ ಮಾತ್ರ ಅವರ ಇಷ್ಟದ ರೀತಿಯಲ್ಲಿ ನಡೆದುಕೊಳ್ಳುವುದಾದರೆ ಮಾತ್ರ ನಾನು ಕೇಳಿದಷ್ಟು ಹಣ ನನಗೆ ಕೊಡುತ್ತಿದ್ದರು, ಇಲ್ಲದಿದ್ದರೆ ಏನೂ ಕೊಡುತ್ತಿರಲಿಲ್ಲ. ಹಾಗಾಗಿ ನಾನು ಅವರು ಹೇಳಿದ ಹಾಗೆಯೇ ನಡೆಯುತ್ತಿದ್ದೆ. ನನಗೆ ಡೈರಿಮಿಲ್ಕ್ ಚಾಕ್ಲೇಟ್ ಮತ್ತು ಫಿಶ್‌ಫ್ರೈ ಅಂದರೆ ತುಂಬಾ ಇಷ್ಟ. ಇವನ್ನೇ ನನ್ನ ತಂದೆ ನನಗೆ ಯಾವಾಗಲೂ ಕೊಡಿಸುತ್ತಿದ್ದರು. ಸಿನಿಮಾಗೆ ಹೋಗಲು ಹಣ ಕೇಳಿದಾಗಲೆಲ್ಲಾ ಕೊಡುತ್ತಿದ್ದರು, ಎಲ್ಲಿಗೆ ಹೋದರೂ ಏನೂ ಮಾತಾಡುತ್ತಿರಲಿಲ್ಲ; ಅವರು ನನ್ನನ್ನು ತುಂಬಾ ಮುದ್ದಿನಿಂದ ಸಾಕುತ್ತಿದ್ದರು. ಅವರಿಗೆ ವಿರುದ್ಧವಾಗಿ ನಡೆದರೆ ಅವರ ಪ್ರೀತಿಯನ್ನೇ ನಾನು ಕಳೆದುಕೊಳ್ಳುತ್ತಿದೆ. ಆದರೆ ನಾನು ಸ್ನೇಹಿತರನ್ನ ಮಾಡಿಕೊಂಡ ಮೇಲೆ ಯಾವಾಗಲೂ ಸುಳ್ಳು ಹೇಳಿ ಅವರಿಗೆ ಮೋಸಮಾಡುತ್ತಿದ್ದೆ. ಅವರ ಮನಸ್ಸಿಗೆ ನೋವು ಮಾಡುತ್ತಿದ್ದೆ, ಆದರೂ ನನ್ನ ತಂದೆ ನನ್ನನ್ನು ಪ್ರಾಣಕ್ಕೆ-ಪ್ರಾಣವಾಗಿ ಪ್ರೀತಿಮಾಡುತ್ತಿದ್ದರು. ಆದರೆ ಸ್ನೇಹಿತರ

ಪ್ರೀತಿಯು ನನ್ನ ಹಣದ ಮೇಲಿರುವ ಪ್ರೀತಿಯಾಗಿತ್ತು ಎನ್ನುವ ಅರಿವು ನನಗೆ ಆಗ ಇರಲೇ ಇಲ್ಲ.

ಕೆಲವು ದಿನಗಳು ಕಳೆದವು ಸುವಾರ್ತೆ ನನಗೆ ಜ್ಞಾಪಕ ಬಂತು. ವಾಕ್ಯ ನೆನಪಾಯಿತು. ನಾನು ಕೇಳಿದೆ "ಯೇಸುವೇ, ನನ್ನ ಹೆಸರಿನಲ್ಲಿ ಏನು ಬೇಕಾದರೂ ಕೇಳಿಕೊಂಡರೆ ನಾನು ಅದನ್ನು ನಿಮಗೆ ಕೊಡುತ್ತೇನೆ" ಎಂದು ಹೇಳಿರುವೆ. ಅದೇ ಪ್ರಕಾರ ನನಗೆ ಪ್ರತಿ ತಿಂಗಳು ಬರುತ್ತಿರುವ ಈ ಹೊಟ್ಟೆನೋವನ್ನು ವಾಸಿಮಾಡು, ಆರೋಗ್ಯವನ್ನು ಕೊಡು, ಆಗ ನೀನು ನಿಜವಾದ ದೇವರೆಂದು ನಾನು ನಂಬುತ್ತೇನೆ. ಹೊಟ್ಟೆನೋವು ವಾಸಿಯಾದರೆ ನಾನು ನಿನ್ನ ಮಗಳಾಗಿ ಜೀವಿಸುತ್ತೇನೆ. ಇದರಿಂದ ಎಷ್ಟೇ ಕಷ್ಟ ಬಂದರೂ ಯಾರೆಲ್ಲಾ ದೂರವಾದರೂ ನಾನು ನಿನಗಾಗಿ ಜೀವಿಸುವೆ ಯೇಸಪ್ಪಾ ನನಗೆ ವಾಸಿಮಾಡು" ಎಂದು ಹೇಳಿ ಕೇಳಿಕೊಂಡೆ. ನಂತರ ನನ್ನ ಕೈಯಲ್ಲಿ ಕೊಟ್ಟಂತಹ 'ಹೊಸ ಒಡಂಬಡಿಕೆ'ಯನ್ನು ಓದಲು ಪ್ರಾರಂಭಿಸಿದೆ. ಪುಸ್ತಕವನ್ನು ಓದುವಾಗ ಅರ್ಥವಾಗುತ್ತಿರಲಿಲ್ಲ ನಿದ್ರೆ ತುಂಬ ಬರುತ್ತಿತ್ತು. ತುಂಬಾ ಬೋರು ಆಗುತ್ತಿತ್ತು. ಆದರೂ ನಂಬಿಕೆಯಿಂದ ನನಗೆ ಗೊತ್ತಿರುವ ರೀತಿಯಲ್ಲಿ ಯೇಸಪ್ಪನಿಗೆ ಕೇಳುತ್ತಿದ್ದೆ ಅದರಿಂದ ಸ್ವಲ್ಪ ಬದಲಾವಣೆ ಗೊತ್ತಾಗುತ್ತಿತ್ತು. ಆಗ ಇದರ ಬಗ್ಗೆ ಇನ್ನು ಹೆಚ್ಚಾಗಿ ತಿಳಿದುಕೊಳ್ಳಬೇಕು ಎನ್ನುವ ಆಸೆ ನನಗೆ ಬಂತು. ಯಾಕೆಂದರೆ ಯೇಸಪ್ಪನ ಬಳಿಯಲ್ಲಿ ನಾನು ಕೇಳಿಕೊಳ್ಳುವಾಗಲೆಲ್ಲಾ ಸ್ವಲ್ಪ-ಸ್ವಲ್ಪ ಹೊಟ್ಟೆನೋವು ಬಿಟ್ಟುಹೋಗುತ್ತಿತ್ತು ಅದರಿಂದ ನನಗೆ ಹೆಚ್ಚು ಆಸಕ್ತಿ ಬಂದಿತು. ವಿಗ್ರಹಗಳ ಮೇಲೆ ನನಗೆ ಆಸಕ್ತಿ ಕಡಿಮೆಯಾಗಿ ಹೋಯಿತು. ಎಷ್ಟೇ ಪೂಜೆ ಪುನಸ್ಕಾರಗಳು ಮಾಡಿ ಭಯಭಕ್ತಿಯಿಂದ ನಡೆದುಕೊಂಡರೂ ಯಾವುದೇ ಪ್ರಯೋಜನ ನನ್ನಲ್ಲಿ ಆಗಲಿಲ್ಲ, ಆದರೆ ಸುಮ್ಮನೆ ಒಂದು ಕೋಣೆಯಲ್ಲಿ ಕುಳಿತು ಪ್ರಾರ್ಥಿಸಿ ಯೇಸಪ್ಪನಿಗೆ ಹೊಟ್ಟೆನೋವಿನಿಂದ ಬಿಡುಗಡೆ ಕೊಡು ಎಂದು ಕೇಳಿದಾಗಲೆಲ್ಲಾ ನನ್ನಲ್ಲಿ ಒಂದು ಬದಲಾವಣೆ ಆಗುತ್ತಿತ್ತು. ಅದೇ ನನಗೆ ತುಂಬಾ ಆಶ್ಚರ್ಯವಾಗಿ ಯೇಸಪ್ಪನ ಬಗ್ಗೆ ಇನ್ನು ಹೆಚ್ಚಾಗಿ ತಿಳಿದುಕೊಳ್ಳಬೇಕು ಎನ್ನುವ ಆಸೆ ನನ್ನಲ್ಲಿ ಉಕ್ಕಿತು.

ಸತ್ಯವೇದ ಹೇಳುತ್ತದೆ - "ನೀನು ಪ್ರಾರ್ಥನೆ ಮಾಡಬೇಕಾದರೆ ನಿನ್ನ ಏಕಾಂತವಾದ ಕೋಣೆಯೊಳಗೆ ಹೋಗಿ ಬಾಗಲನ್ನು ಮುಚ್ಚಿಕೊಂಡು ಅಂತರಂಗದಲ್ಲಿಯೂ ಇರುವ ನಿನ್ನ ತಂದೆಗೆ ಪ್ರಾರ್ಥನೆ ಮಾಡು; ಅಂತರಂಗದಲ್ಲಿ ನಡೆಯುವುದನ್ನು ನೋಡುವ ನಿನ್ನ ತಂದೆಯು ನಿನಗೆ ಫಲಕೊಡುವನು." (ಮತ್ತಾಯ 6:6) ಎಂದು. ಈ ವಾಕ್ಯದ ಪ್ರಕಾರ ನನಗೆ

ಗೊತ್ತಿಲ್ಲದೆ ನನ್ನ ಕರ್ತನು ನನ್ನ ಪ್ರಾರ್ಥನೆಯನ್ನು ಕೇಳಿ ಅದಕ್ಕೆ ಉತ್ತರ ದಯಪಾಲಿಸಿದರು, ಬಹು ದೊಡ್ಡ ಅದ್ಭುತವಾಯಿತು, 8 ವರ್ಷದಿಂದ ನನ್ನನ್ನು ಕಾಡಿದ ಹೊಟ್ಟೆನೋವು ಎನ್ನುವ ಭಯಂಕರ ಖಾಯಿಲೆಯು ಆಶ್ಚರ್ಯಕರವಾಗಿ ಸಂಪೂರ್ಣ ನನ್ನನ್ನು ಬಿಟ್ಟು ಹೋಯಿತು, ನನಗೆ ಪೂರ್ಣವಾಗಿ ವಾಸಿಯಾಯಿತು. ದೇವರ ನಾಮಕ್ಕೆ ಎಷ್ಟು ಸ್ತೋತ್ರಗಳನ್ನು ಸಲ್ಲಿಸಿದರೂ ಸಾಲುವುದಿಲ್ಲ. ನನ್ನ ಯೇಸುರಾಜನಿಗೆ ಕೋಟಿ-ಕೋಟಿ ಸ್ತೋತ್ರ.

## 10. ರಕ್ಷಣೆ ಹೊಂದಿದ್ದು

ಯೇಸಪ್ಪನನ್ನು ನಂಬಿರುವ ನನಗೆ ಹೊಸ-ಹೊಸ ಅನುಭವ ಆಗುತ್ತಿತ್ತು. ಆಗ ಸುವಾರ್ತೆ ಸಾರಿದ ಆಂಟಿಯ ಬಳಿಯಲ್ಲಿ ಯೇಸಪ್ಪನ ಬಗ್ಗೆ ಇನ್ನು ಹೆಚ್ಚಾಗಿ ತಿಳಿದುಕೊಳ್ಳುವ ಆಸೆ ಬಂದಿತು. ನನ್ನ ಸ್ನೇಹಿತೆ ಮನೆಗೆ ಹೋಗಿ ಆ ಆಂಟಿಯನ್ನು ಕರೆಸು ಎಂದು ಕೇಳಿದೆ. ಆಗ ಆಕೆಯು ಆಂಟಿಗೆ ಫೋನ್ ಮಾಡಿದರು. ಅವರು ಎರಡು ದಿನ ಆದ ಮೇಲೆ ಬರುತ್ತೇನೆ ಎಂದು ಹೇಳಿದರು. ನನಗೆ ತುಂಬ ಆತುರವಾಗುತ್ತಿತ್ತು, ಮತ್ತೇ ನನ್ನಲ್ಲಿ ಗೊತ್ತಿಲ್ಲದೆ ಆ ಆಂಟಿಯ ರೀತಿಯಲ್ಲೇ ನಾನು ಆಗಬೇಕು ಎನ್ನುವ ಆಸೆ ಬರುತ್ತಿತ್ತು. ಅದು ಯಾಕೆ ಆ ರೀತಿ ಎಂದು ಗೊತ್ತಾಗಲಿಲ್ಲ.

ಸ್ನೇಹಿತೆ ಮನೆಗೆ ಆಂಟಿ ಬಂದರು. ನಾನು ಸಹಾ ತಂದೆಯವರಿಗೆ ಸುಳ್ಳು ಹೇಳಿ ಬೆಳಗ್ಗೆ 11;00 ಘಂಟೆಗೆ ರಾಧಳ ಮನೆಗೆ ಹೋದೆನು. ಆಂಟಿಯವರು ನನಗೆ ಯೇಸುವಿನ ಬಗ್ಗೆ ವಿವರಣೆಯಾಗಿ ಹೇಳಲು ಆರಂಭಿಸಿದರು. ನೀನು ಯೇಸಪ್ಪನನ್ನು ನಿಜವಾಗಿ ಪ್ರೀತಿಮಾಡುವುದಾದರೆ, ಯೇಸಪ್ಪನಿಗೆ ಇಷ್ಟವಿಲ್ಲದ ಕೆಲಸಕಾರ್ಯಗಳು ಮಾಡಬಾರದು ಆಗ ನೀನು ಯೇಸುವನ್ನು ಪ್ರೀತಿಸುತ್ತೀಯಾ ಎಂದರ್ಥ ಅಂದರು. ನಾನು ಸರಿ ಎಂದು ಹೇಳಿದೆ. ಮೊದಲು ವಾಕ್ಯದ ಪ್ರಕಾರ "ಯಾವನೂ ಇಬ್ಬರು ಯಜಮಾನರಿಗೆ ಸೇವೆಮಾಡಲಾರನು. ಅವನು ಒಬ್ಬನನ್ನು ದ್ವೇಷಿಸಿ ಮತ್ತೊಬ್ಬನನ್ನು ಪ್ರೀತಿಸುವನು" ಮತ್ತಾ 6:24 ಅಂದರು. ನಿನ್ನೊಳಗೆ ಅಂದರೆ ಹೃದಯದಲ್ಲಿ ಯೇಸಪ್ಪಾ ಹೊರತು ಬೇರೆ ಯಾರಿಗೂ ಮೊದಲ ಸ್ಥಾನವಿರಬಾರದು. ಆ ರೀತಿಯಲ್ಲಿ ಬೇರೆ ಯಾರಿಗಾದರೂ ಸ್ಥಾನಕೊಟ್ಟಿದ್ದರೆ ಅದನ್ನು ನೀನು ಮೊದಲು ದೂರಮಾಡಬೇಕು ಅಂದರು. ಮತ್ತೇ ಆತನು ನಮಗೆ ಹತ್ತು ಆಜ್ಞೆಗಳನ್ನು ಕೊಟ್ಟಿದ್ದಾನೆ ಹಳೇ ಒಡಂಬಡಿಕೆಯಲ್ಲಿ ವಿಮೋ 20:1-17 ನೇ ವಾಕ್ಯದಲ್ಲಿ ತಿಳಿಸಿರುವುದನ್ನು ನನಗೆ

ತಾಳ್ಮೆಯಿಂದ ತಿಳಿಸಿದರು. ಅದನ್ನು ಸರಿಯಾದ ರೀತಿಯಲ್ಲಿ ಅನುಸರಿಸಬೇಕು ಅಂದರು. ಆಗ ನನ್ನಲ್ಲಿ ಸ್ವಲ್ಪ ಭಯವಾಯಿತು, ಆದರೂ ಮೊದಲು ಕೇಳೋಣ ಆಮೇಲೆ ನೋಡೋಣ ಎಂದು ಯೋಚಿಸಿಕೊಂಡೆನು, ನಂತರ ಮೊದಲು ನನಗೆ ಆರೋಗ್ಯ ಮುಖ್ಯ ಎಂದು ಮನಸ್ಸಿನಲ್ಲಿ ತೀರ್ಮಾನಿಸಿಕೊಂಡೆನು, ನನ್ನನ್ನು ನೋಡುತ್ತಿದ್ದ ಆಂಟಿಗೆ, ಹೇಳಿ ಆಂಟಿ ಮುಂದೆ ಹೇಳಿ ಎಂದೆನು. ಆಗ ಆಂಟಿ ಹೇಳಿದರು.

1) ನಿನ್ನ ದೇವರು ನಾನೇ. ನಾನಲ್ಲದೆ ನಿನಗೆ ಬೇರೆ ದೇವರುಗಳು ಇರಬಾರದು ಅಂದರು. ಅದಕ್ಕೆ ನಾನು ಸರಿ ಎಂದು ಹೇಳಿದೆ.

2) ಯಾವ ಮೂರ್ತಿಯನ್ನು ಮಾಡಿಕೊಳ್ಳಬಾರದು ಅವುಗಳಿಗೆ ಅಡ್ಡಬೀಳಲೂ ಬಾರದು ಪೂಜೆಮಾಡಲೂಬಾರದು. ಎಂದು ಹೇಳಿದರು.

   ನಾನು ಇದನ್ನು ಕೇಳುವಾಗ ಸ್ವಲ್ಪ ಹೃದಯದಲ್ಲಿ ಭಯವಾಯಿತು, ಕಾರಣ ನನ್ನ ತಂದೆ ನನ್ನನ್ನು 'ಧರ್ಮಸ್ಥಳ, ತಿರುಪತಿ, ಘಾಟಿ, ಧರ್ಗಕ್ಕೆ' ಆಗಾಗ ಕರೆದುಕೊಂಡು ಹೋಗುತ್ತಿದ್ದರು, ತಲೆ ಕೂದಲನ್ನು ಮುಡುಪಾಗಿ ಹರಿಕೆ ಮಾಡಿಕೊಂಡು ಗುಂಡು ಒಡೆಸುತ್ತಿದ್ದರು, ಪೂಜೆ ಮಾಡಿಸುತ್ತಿದ್ದರು ಅವರು ಹೇಳಿದ ರೀತಿ ಕೇಳುವುದಿಲ್ಲ ಅಂದರೆ ತುಂಬಾ ಕೋಪ ಈ ಭಯ ನನ್ನಲ್ಲಿದ್ದರೂ ಮನಸ್ಸು ಧೈರ್ಯ ಮಾಡಿಕೊಂಡು ಸರಿ ಎಂದು ಹೇಳಿದೆ.

3) ನಿನ್ನ ದೇವರಾದ ಯೆಹೋವನ ಹೆಸರನ್ನು ಅಯೋಗ್ಯಕಾರ್ಯಕ್ಕಾಗಿ ಎತ್ತಬಾರದು ಅಂದರು. ಸರಿ ಎಂದು ಹೇಳಿ. ಮುಂದೆ ಹೇಳಿ ಆಂಟಿ ಎಂದೆನು.

4) ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವುದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು, ಅಂದರು. ಆಗ ನಾನು 'ಸಬ್ಬತ್' ಎಂದರೆ ಏನು ಅದರ ಅರ್ಥ ಎಂದು ಕೇಳಿದೆ, ಆಗ ಆಂಟಿ ಸತ್ಯವೇದದಲ್ಲಿ ಆದಿಕಾಂಡ 2:1-3 ವಾಕ್ಯ ಈ ರೀತಿ ಹೇಳುತ್ತೇ "ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿಬಿಟ್ಟು ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡನು. ದೇವರು ತನ್ನ ಸೃಷ್ಟಿಕಾರ್ಯವನ್ನು ಮುಗಿಸಿ ಆ ಏಳನೆಯ ದಿನದಲ್ಲಿ ವಿಶ್ರಮಿಸಿಕೊಂಡದ್ದರಿಂದ ಆ ದಿನವನ್ನು ಪರಿಶುದ್ಧದಿನವಾಗಿರಲಿ ಎಂದು ಆಶೀರ್ವದಿಸಿದನು." ಎಂದು ಹೇಳಿ ಮತ್ತೊಂದು ವಾಕ್ಯ ಹೇಳಿದರು. "ಯೇಸುಕ್ರಿಸ್ತನು ಸಬ್ಬತ್ ದಿನಕ್ಕೆ

ಒಡೆಯನಾಗಿದ್ದಾನೆ" ಎಂದು ಹೇಳಿ ಸಬ್ಬತ್ ಅಂದರೆ 6 ದಿನ ನಾವು ಕೆಲಸ ಮಾಡಲು ನಮಗೆ ಅನುಮತಿ ಇದೆ. ಆದರೆ ದೇವರು ಏಳನೆಯ ದಿನ ವಿಶ್ರಮಿಸಿಕೊಂಡ ಪ್ರಕಾರ ನಾವು ಯಾವ ಕೆಲಸವನ್ನೂ ಮಾಡದೆ ಆ ದಿನವನ್ನು ದೇವರಿಗೆ ಮೀಸಲಾಗಿ ಇಡಬೇಕು. ಸಮಯವನ್ನು ಸ್ವಂತ ಕಾರ್ಯಕ್ಕೆ ಉಪಯೋಗಿಸದೇ ದೇವರ ಪಾದದಲ್ಲಿ ಇರುವುದಾದರೆ ಎಷ್ಟೋ ಚೆನ್ನಾಗಿರುತ್ತೇ. ಯೇಸಪ್ಪಾ ನಮಗೆ ಆ ದಿನ ಬಿಡುಗಡೆಯ ದಿನವಾಗಿಯೂ ಆಶೀರ್ವಾದದ ದಿನವಾಗಿಯೂ ಇಟ್ಟಿದ್ದಾರೆ. ಎಂದು ವಿವರಿಸಿ ಹೇಳಿದರು

5) ನಿನ್ನ ತಂದೆ-ತಾಯಿಗಳನ್ನು ಸನ್ಮಾನಿಸಬೇಕು.

6) ನರಹತ್ಯ ಮಾಡಬಾರದು.

7) ವ್ಯಭಿಚಾರ ಮಾಡಬಾರದು

8) ಕದಿಯಬಾರದು - ಎಂದು ಹೇಳುವಾಗ ನನ್ನ ಮನಸ್ಸಿನಲ್ಲಿ ತಂದೆಯ ಜೇಬಿನಲ್ಲಿ ಹಣ ಕದಿಯುವುದು ತಪ್ಪಾ! ಹಾಗಾದರೆ ಏನು ಮಾಡೋದು ಎಂದು ಸ್ವಲ್ಪ ಚಿಂತೆಯಾಯಿತು.

9) ಮತ್ತೊಬ್ಬನ ಮೇಲೆ ಸುಳ್ಳು ಸಾಕ್ಷಿ ಹೇಳಬಾರದು.

10) ಮತ್ತೊಬ್ಬನ ಮನೆ, ಹೆಂಡತಿ, ಗಂಡಾಳು, ಹೆಣ್ಣಾಳು, ಎತ್ತು ಕತ್ತೆ ಮುಂತಾದ ಯಾವದನ್ನು ಆಶಿಸಬಾರದು.

ಇವೆಲ್ಲದರಲ್ಲಿಯೂ ನೀನು ಸರಿಯಾಗಿ ನಡೆದುಕೊಂಡು ಬಂದರೆ ಯೇಸಪ್ಪಾ ನಿನ್ನಲ್ಲಿ ವಾಸವಾಗುತ್ತಾರೆ ಎಂದು ಹೇಳಿದರು. ಆಗ ನಾನು ಅವರೊಟ್ಟಿಗೆ - ಆಂಟಿ ನನ್ನ ತಂದೆಯವರು ಪೂಜೆಮಾಡು ಪದಾರ್ಥ ತಿನ್ನು, ಆ ದೇವಸ್ಥಾನ, ಈ ದೇವಸ್ಥಾನ ಎಂದು ಕರೆದುಕೊಂಡು ಹೋಗುತ್ತಾರೆ ಆಗ ಅದರ ಮುಂದೆ ಅಡ್ಡ ಬೀಳಬೇಕು, ಕೈಮುಗಿಯಬೇಕು ನಾನು ಏನು ಮಾಡುವುದು, ಎಂದು ಕೇಳಿದೆ. ಆಗ ಆಂಟಿ ಹೇಳಿದರು  "ಅವರ ವಿಗ್ರಹಗಳೋ ಬೆಳ್ಳಿಬಂಗಾರದವುಗಳೇ; ಅವು ಮನುಷ್ಯರ ಕೈಕೆಲಸವಷ್ಟೇ, ಅವು ಬಾಯಿದ್ದರೂ ಮಾತಾಡುವುದಿಲ್ಲ; ಕಣ್ಣಿದ್ದರೂ ನೋಡುವುದಿಲ್ಲ; ಕಿವಿಯಿದ್ದರೂ ಕೇಳುವುದಿಲ್ಲ, ಮೂಗಿದ್ದರೂ ಮೂಸುವುದಿಲ್ಲ. ಕೈಯುಂಟು, ಮುಟ್ಟುವುದಿಲ್ಲ ಕಾಲುಂಟು, ನಡೆಯುವುದಿಲ್ಲ; ಅವುಗಳ ಗಂಟಲಿನಲ್ಲಿ ಶಬ್ಧವೇ ಇಲ್ಲ, ಅವುಗಳನ್ನು ಮಾಡುವವರೂ ಅವುಗಳಲ್ಲಿ ಭರವಸವಿಡುವವರೂ ಅವುಗಳಂತೆಯೇ" (ಕೀರ್ತನೆ 115:4-8) ಎಂದು ಹೇಳಿದರು.

ಇದೆಲ್ಲಾ ತಿಳಿಸಿದ ಮೇಲೆ, ಯಾವುದು ಬೇಕೋ ನೀನೇ ತೀರ್ಮಾನ ಮಾಡು ಎಂದು ನನಗೆ ತೀರ್ಮಾನವನ್ನು ತೆಗೆದುಕೊಳ್ಳುವುದಕ್ಕೆ ಬಿಟ್ಟು ಬಿಟ್ಟರು. ದೇವರು ಕೊಟ್ಟಿರುವ ಜ್ಞಾನವನ್ನು ಉಪಯೋಗಿಸಿ ಸತ್ಯ ಅಸತ್ಯ ಯಾವುದು ಎಂದು ತಿಳಿದುಕೊಂಡು ನಂತರ ಮುಂದೆ ಹೆಜ್ಜೆಯಿಡು ಅಂದರು. ನನಗೆ ಇದನ್ನೆಲ್ಲಾ ಕೇಳಿ ತುಂಬಾ ಭಯವಾಯಿತು. ತಂದೆಯವರ ಮಾತನ್ನ ಮೀರಿ ನಡೆಯೋದಕ್ಕೆ ಆಗುವುದೇ ಇಲ್ಲ; ಯೇಸಪ್ಪಾನನ್ನು ಅನುಸರಿಸದೇ ಇದ್ದರೇ ಆರೋಗ್ಯ ಸಿಗಲ್ಲ. ಏನು ಮಾಡುವುದು? ಓಹೋ! ಆಂಟಿ ನನಗೆ ಅದಕ್ಕೆ ಮೊದಲೇ ಹೇಳಿದ್ದು- "ಯಾರೂ ಇಬ್ಬರು ಯಜಮಾನರನ್ನ ಸೇವಿಸಲಾರರು ಎಂದು . . .!" ಹೂಂ... ಸರಿ ಈಗ ನಾನು ಯೇಸಪ್ಪಾ ಬೇಕು ಅಂದರೆ ಇದೆಲ್ಲಾ ನಿಲ್ಲಿಸಬೇಕು. ಇಲ್ಲ ಅಂದರೆ ರೋಗದಲ್ಲಿ ನರಳುತ್ತಾ ಇದೇ ರೀತಿ ಹೋಗಬೇಕು. ಎಂದು ತುಂಬ ಸಮಯ ಯೋಚಿಸಿ ನಾನು ದೃಢವಾದ ತೀರ್ಮಾನಕ್ಕೆ ಬಂದೆನು. ನಾನು ಆಂಟಿಗೆ ಹೇಳಿದೆ ಸರಿ ಇದಕ್ಕೆಲ್ಲಾ ಒಪ್ಪಿಕೊಳ್ಳುತ್ತೇನೆ, ಮತ್ತೇ ನಾನು ಇನ್ನೇನು ಮಾಡಬೇಕು ಎಂದು ಕೇಳಿದೆ? ಅದಕ್ಕೆ ಅವರು ಸಮಯ ಸಿಕ್ಕಿದಾಗಲೆಲ್ಲಾ ಸಭೆಗೆ ಹೋಗು ಎಂದರು.

ಅದಕ್ಕೆಲ್ಲಾ ನಾನು ಮನಃಪೂರ್ವಕವಾಗಿ ಒಪ್ಪಿಕೊಂಡು ಹೇಳಿದೆ, ಸರಿ ಆಂಟಿ ನಾನು ಇನ್ನು ಮೇಲೆ ಸಮಯ ಸಿಕ್ಕಿದಾಗಲೆಲ್ಲಾ ಸಭೆಗೆ ಹೋಗುತ್ತೇನೆ. ಬೈಬಲ್ ಸಾಧ್ಯವಾದಷ್ಟು ಓದುತ್ತೇನೆ. ಇನ್ನೇನು ಮಾಡಬೇಕು ಹೇಳಿ ಎಲ್ಲವನ್ನು ನಾನು ಮಾಡಲು ಸಿದ್ಧವಾಗಿದ್ದೇನೆ ಎಂದು ತಿಳಿಸಿದೆ.

ಆಗ ಆಂಟಿ ಒಂದು ಪ್ರಶ್ನೆ ಕೇಳಿದರು- ನಿನಗೆ ಯೇಸಪ್ಪಾ ತಾತ್ಕಾಲಿಕವಾಗಿ ಬೇಕಾ? ಶಾಶ್ವತವಾಗಿ ಬೇಕಾ? ಎಂದು ಕೇಳಿದರು ಆಗ ನನಗೆ ಆಶ್ಚರ್ಯವಾಯಿತು ಇದೆಂತಹ ಪ್ರಶ್ನೆ ಶಾಶ್ವತವಾಗಿಯೂ ಯೇಸಪ್ಪ ಸಿಗುತ್ತಾರಾ! ತಾತ್ಕಾಲಿಕವಾಗಿಯೂ ಸಿಗುತ್ತಾರಾ! ಎಂದು ಯೋಚಿಸಿ! ನನಗೆ 'ಶಾಶ್ವತವಾಗಿಯೇ ಬೇಕು' ಎಂದು ಉತ್ತರವನ್ನು ಕೊಟ್ಟೆ.

ಆಗ ಅವರು ಸತ್ಯವೇದವನ್ನು ತೆಗೆದು ಈ ವಾಕ್ಯ ವಿವರಿಸಿದರು- "ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವೂ ನನಗೆ ಕೊಡಲ್ಪಟ್ಟಿದೆ ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ, ಪವಿತ್ರಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಾಪಾಡಿಕೊಳ್ಳುವುದಕ್ಕೆ ಅವರಿಗೆ ಉಪದೇಶ ಮಾಡಿರಿ. ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ"

(ಮತ್ತಾಯ 28:19,20) ಎಂದು ಹೇಳಿದ್ದಾರೆ, ಮತ್ತು "ನಂಬಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವವನು ರಕ್ಷಣೆ ಹೊಂದುವನು ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು" (ಮಾರ್ಕ 16:16) ಎಂದು ತಿಳಿಸಿದರು. ಮತ್ತು "ದೇವರಿಂದಾಗುವ ನೀತಿಯು ಯಾವದೆಂದರೆ ಯೇಸುಕ್ರಿಸ್ತನನ್ನು ನಂಬುವದರಿಂದಲೇ ನಂಬುವರೆಲ್ಲರಿಗೆ ದೊರಕುವಂಥದು. ಹೆಚ್ಚುಕಡಿಮೆ ಏನೂ ಇಲ್ಲ, ಎಲ್ಲರೂ ಪಾಪಮಾಡಿ ದೇವರ ಮಹಿಮೆಯನ್ನು ಹೊಂದದೆ ಹೋಗಿದ್ದಾರೆ, ಅವರು ನೀತಿವಂತರೆಂದು ನಿರ್ಣಯ ಹೊಂದುವುದು ದೇವರ ಉಚಿತಾರ್ಥವಾದ ಕೃಪೆಯಿಂದಲೇ ಕ್ರಿಸ್ತಯೇಸುವಿನಿಂದಾದ ಪಾಪ ವಿಮೋಚನೆಯ ಮೂಲಕವಾಗಿ ಆಗುವದು, ಈತನು ತನ್ನ ರಕ್ತವನ್ನು ಸುರಿಸಿ ನಂಬಿಕೆಯಿದ್ದವರಿಗಾಗಿ ಕೃಪಾಧಾರವಾಗಬೇಕೆಂದು ದೇವರು ಈತನನ್ನು ಮುಂದಿಟ್ಟನು." (ರೋಮಾ 3:22-25) ನೀನು ನಂಬಿರುವುದಾದರೆ ನಿನ್ನ ಎಲ್ಲಾ ಪಾಪ ಪರಿಹಾರವಾಗಬೇಕಾದರೆ ಆತನು ನಿನ್ನ ಜೊತೆಯಲ್ಲಿ ಶಾಶ್ವತವಾಗಿ ಇರಬೇಕು ಎಂದು ನೀನು ಹೃದಯಪೂರ್ವಕವಾಗಿ ಆಸೆಪಡುತ್ತಿರುವುದು ನಿಜವಾದರೆ ನೀನು ದೇವರ ಆಜ್ಞೆಯ ಮೇರೆಗೆ 'ದೀಕ್ಷಾಸ್ನಾನ' ಮಾಡಿಸಿಕೊಳ್ಳಬೇಕು. ಆಗ ದೇವರು ನಿನ್ನ ಸಕಲ ಪಾಪವನ್ನೂ ಪರಿಹರಿಸಿ ನಿನ್ನನ್ನು ತನ್ನ ಪರಿಶುದ್ಧ ರಕ್ತದಿಂದ ತೊಳೆದು ನಿನ್ನ ಆತ್ಮಕ್ಕೆ ಮಹಿಮಾ ವಸ್ತ್ರವನ್ನು ಕೊಟ್ಟು, ನಿನ್ನ ಹೃದಯದೊಳಗೆ ಬಂದು ನಿರಂತರವಾಗಿ ನಿನ್ನ ಜೊತೆಯಲ್ಲಿ ಜೀವಿಸುತ್ತಾರೆ, ಎಂದು ಹೇಳಿದರು. ಇದನ್ನು ಹೇಳುವಾಗ ನಾನು ತುಂಬಾ ಸಂತೋಷವಾಗಿ ಒಪ್ಪಿಕೊಂಡೆನು.

ನಾನು ಮೊದಲು ಸುವಾರ್ತೆ ಕೇಳಿದೆ, ನಂತರ ಮನೆಗಳಲ್ಲಿ ನಡೆಯುವಂತಹ ಕೂಟಗಳಲ್ಲಿ ಭಾಗವಹಿಸಿದೆ. ನಂತರ ಒಂದು ಭಾರಿ ಚರ್ಚ್‌ಗೆ ಹೋದೆ. ನಂತರ ದೀಕ್ಷಾಸ್ನಾನ ತೆಗೆದುಕೊಳ್ಳ ಬೇಕೆಂದು ತೀರ್ಮಾನ ಮಾಡಿಕೊಂಡೆನು.

ನಾನು ಮನೆಯಿಂದ ಭಾನುವಾರ ಹೊರಗೆ ಹೋಗಬೇಕು ಅಂದರೆ ಕಷ್ಟ, ಆಗ ಮನೆಯಲ್ಲಿ ಎಲ್ಲರೂ ಇರುತ್ತಾರೆ ತಂದೆ-ಅಣ್ಣ ಎಲ್ಲಿಗೂ ಹೋಗುವುದಿಲ್ಲ ಆಗ ಏನು ಮಾಡುವುದೆಂದು ಗೊತ್ತಿಲ್ಲದೆ ಒದ್ದಾಡುತ್ತಿದ್ದೆನು, ಆ ಸಮಯದಲ್ಲಿ ಒಂದು ಆಲೋಚನೆ ಬಂದಿತು, ಹೇಗೋ ಬೆಳಿಗ್ಗೆ ಹೊತ್ತು 'ಕರಾಟೆ ಕ್ಲಾಸ್'ಗೆ ಹೋಗುತ್ತೇವೆ, ಅಣ್ಣನ ಮಕ್ಕಳಿಗೆ ತಿಂಡಿ ತೆಗೆದುಕೊಟ್ಟರೆ ನಾನು ಹೇಳಿದ ಹಾಗೆಯೇ ಅಪ್ಪನ ಬಳಿಯಲ್ಲಿ ಸುಳ್ಳು ಹೇಳುತ್ತಾರೆ, ಅದಕ್ಕೆ ಅಪ್ಪ ಒಪ್ಪಿಕೊಂಡು ಸರಿ ಅನ್ನುತ್ತಾರೆ ಎಂದು ತಿಳಿದುಕೊಂಡು ಒಳ್ಳೆಯ

ಅವಕಾಶಕ್ಕಾಗಿ ನಾನು ಎದುರು ನೋಡುತ್ತಿದ್ದೆ.

ಒಂದು ದಿನ ಸಮಯ ಬಂತು ಅದು ಏನೆಂದರೆ 'ಆನೇಕಲ್ಲಿನಲ್ಲಿ' ಕರಾಟೆ ಕಾಂಪಿಟೀಶನ್' ಇತ್ತು ಅದಕ್ಕೆ ನಾನು ಇದೇ ಸರಿಯಾದ ಸಮಯ ಎಂದು ಹೇಳಿ, ಒಂದು ಆಲೋಚನೆ ಮಾಡಿಕೊಂಡೆನು. ಕರಾಟೆ ಕಾಂಪಿಟೇಷನ್ ಇರುವ ದಿನಕ್ಕೆ ಹಿಂದಿನ ದಿನವೇ ಕರಾಟೆಯಿದೆ ಎಂದು ನನ್ನ ತಂದೆಗೆ ಸುಳ್ಳು ಹೇಳಿದೆನು. ಅದಕ್ಕೆ ನನ್ನ ತಂದೆ ಒಪ್ಪಿಕೊಂಡರು ಅಣ್ಣನ ಮಕ್ಕಳಿಗೆ ಚಾಕ್ಲೆಟ್ ಎಲ್ಲಾ ಕೊಡಿಸಿ ನಾನು ಹೇಳುವುದೆಲ್ಲಾ ಅಪ್ಪನಿಗೆ ಹೌದು ನಿಜ ಎಂದು ಹೇಳಿ ಎಂದು ಹೇಳಿಕೊಟ್ಟಿದ್ದೆ. ಅವರು ನನ್ನನ್ನು ಹೆಚ್ಚಾಗಿ ಪ್ರೀತಿಸುತ್ತಾರೆ ಅದಕ್ಕಾಗಿ ಅವರು ನನಗೆ ಆ ದಿನದಂದು ಅವರಿಗೆ ತಿಳಿಯದೇ ಸಹಾಯಮಾಡಿದರು. ಆದರೆ ನನಗೆ ಈಗ ಅರ್ಥವಾಗುತ್ತೆ ಅದು ಕರ್ತನ ಸಮಯ, ನನ್ನನ್ನು ತನ್ನ ಸ್ವಂತ ಮಗಳಾಗಿ ಅಂಗೀಕರಿಸಿಕೊಳ್ಳಲು ಕರ್ತನು ಪರಲೋಕದಿಂದ ತೀರ್ಮಾನಿಸಿದ ಸಮಯವಾಗಿತ್ತು. ಅದಕ್ಕಾಗಿಯೇ ನನಗೆ ದೇವರು ಸಕಲ ಅನುಕೂಲವನ್ನು ಒದಗಿಸಿಕೊಟ್ಟನು ಎಂದು ನಾನು ಮನಃಪೂರ್ವಕವಾಗಿ ನಂಬುತ್ತೇನೆ.

ನಾನು ಸಹಾ ಅವರನ್ನು ಅಷ್ಟೇ ಪ್ರೀತಿ ಮಾಡುತ್ತಾ, ಆಟವಾಡಿಸುತ್ತಾ ನೋಡಿಕೊಳ್ಳುತ್ತಿದ್ದೆ. ಆ ಪ್ರೀತಿಯನ್ನು ನಾನು ಮರೆಯುವುದಕ್ಕೆ ಸಾಧ್ಯವೇ ಇಲ್ಲ, ತಂದೆಗೆ ಕರಾಟೆಗೆ ಹೋಗುತ್ತೇನೆ ಅಂಥ ಸುಳ್ಳು ಹೇಳಿ ಹೆಬ್ಬಾಳದಲ್ಲಿರುವ ಎ.ಜಿ.ಬೆಥೆಲ್ ಸಭೆಗೆ ಹೋದೆನು. ಅವರಿಗೆ ತಿಳಿಯದೇ ದೀಕ್ಷಾಸ್ನಾನವನ್ನು ತೆಗೆದುಕೊಳ್ಳಲೆಂದು ಚರ್ಚ್‌ಗೆ ಹೋದೆನು. ಅಲ್ಲಿ ನನಗೆ ಗೊತ್ತಿರುವ ವ್ಯಕ್ತಿಗಳು ಯಾರೂ ಇರಲಿಲ್ಲ, ನನ್ನ ಸ್ನೇಹಿತೆ ಒಬ್ಬಳಿಗೆ ನಾನು ನನ್ನ ಬಟ್ಟೆಗಳನ್ನು ಕೊಟ್ಟು ನಾನು ಸಭೆಗೆ ಹೋಗುವುದಕ್ಕಿಂತ ಮುಂಚಿತವಾಗಿ ಅವಳು ನನಗೆ ಸಹಾಯ ಮಾಡಲೆಂದು ಅಪೇಕ್ಷಿಸಿದ್ದೆ ಆದರೆ ನಾನು ಬರುವುದು ತಡವಾದ ಕಾರಣ ಅವಳು ನನ್ನ ಬಟ್ಟೆಗಳನ್ನು ತೆಗೆದುಕೊಂಡು ಬಂದು ನನಗಾಗಿ ಕಾದಿದ್ದು ನಾನು ಬರುವುದಿಲ್ಲವೆಂದು ತಪ್ಪಾಗಿ ತಿಳಿದುಕೊಂಡು ಹಿಂದಿರುಗಿ ವಾಪಸ್ಸ್ ಮನೆಗೆ ಹೋಗಿಬಿಟ್ಟಿದ್ದಳು. ನಾನು ಸಭೆಯ ಬಳಿ ಬಾಗಿಲ ಹತ್ತಿರ ನಿಂತುಕೊಂಡು "ಯೇಸಪ್ಪಾ ಈ ಸಮಯ ಬಿಟ್ಟರೆ, ಬೇರೆ ಇನ್ನ್ಯಾವ ಸಮಯ ಮತ್ತೇ ಸಿಗುತ್ತದೋ ನನಗೆ ಗೊತ್ತಿಲ್ಲ, ನಾನು ಎಷ್ಟು ಪ್ರಯಾಸ ಪಟ್ಟು ಬಂದಿದ್ದೇನೆ ನೀನೇ ನೋಡಿದ್ದೀಯಾ, ಯೇಸಪ್ಪಾ ನೀನು ನನ್ನನ್ನು ನೋಡಲಿಲ್ಲವಾ? ದಯವಿಟ್ಟು ಸಹಾಯ ಮಾಡು ನಿನ್ನ ಮಗಳಾಗಿ ನನ್ನನ್ನು ಸೇರಿಸಿಕೋ! ಯೇಸಪ್ಪಾ ದಯವಿಟ್ಟು. . . .!" ಎಂದು ಕಣ್ಣೀರಿನಿಂದ ಪ್ರಾರ್ಥಿಸಿಕೊಂಡು ಸ್ತೋತ್ರ ಎಂದು

ಹೇಳುತ್ತಿರುವಾಗಲೇ ಇಬ್ಬರು ಆಂಟಿಯವರು ಬಂದರು ಅವರ ಹೆಸರು 'ಸುಗಂಧಿ' ಮತ್ತು 'ಅಲ್ಲಿ' ಎಂದು. ಅವರು ನನ್ನನ್ನು ಯಾಕೆ ಅಳುತ್ತೀಯಾ? ಎಂದು ಕೇಳಿದರು, ಆಗ ನಾನು ದೀಕ್ಷಾಸ್ನಾನ ತೆಗೆದುಕೊಳ್ಳುವ ಸಲುವಾಗಿ ನನ್ನ ತಂದೆಯ ಬಳಿ ಎಷ್ಟೋ ಸುಳ್ಳು ಹೇಳಿ ಪ್ರಯಾಸದಿಂದ ಬಂದಿರುವುದಾಗಿಯೂ ನನ್ನ ಸ್ನೇಹಿತೆಗೆ ಕೊಟ್ಟ ಬಟ್ಟೆಗಳನ್ನು ಆಕೆ ನಾನು ಬರುವುದಿಲ್ಲವೆಂದು ತಿಳಿದು ವಾಪಸ್ಸ್ ಮನೆಗೆ ಹೋಗಿಬಿಟ್ಟಿರುವುದಾಗಿಯೂ ಮತ್ತೇ ಇಂತಹ ಸಮಯ ನನಗೆ ಸಿಕ್ಕುವುದು ಬಹಳ ಕಷ್ಟವೆಂಬುದಾಗಿಯೂ ಅಳುತ್ತಾ ಎಲ್ಲಾ ವಿಷಯವನ್ನು ಅವರಿಗೆ ವಿವರವಾಗಿ ತಿಳಿಸಿದೆ. ಆಗ ಅವರಿಬ್ಬರೂ ನನ್ನನ್ನು ಸಂತೈಸಿ ತಾವು ಮುಂದೆ ನಿಂತು ನನಗೆ ಸಹಾಯಮಾಡಲು ನೆರವಾದರು. ಅವರು ಕೆಲವು ಭೋದಕರೊಟ್ಟಿಗೆ ಮಾತಾಡಿದರು. ಆದರೆ ಯಾರಿಗೂ ಸಮಯವಿರಲಿಲ್ಲ ಕಾರಣ ಬೇರೆ ಕಡೆ ಸೇವೆಗೆ ಹೋಗಲು ಸಿದ್ಧವಾಗಿದ್ದರು ಆಗ ಏನು ಮಾಡುವುದು ಅಂಥ ಯೋಚಿಸುವಾಗ "ಪಾಷ್ಟರ್ ಜಾನ್‌ಸನ್ ವರ್ಗೀಸ್ (ಸಂತೋಷ್)" ರವರು ನನಗೆ ದೀಕ್ಷಾಸ್ನಾನ ಕೊಡಲು ಒಪ್ಪಿಕೊಂಡರು. ಆಗ ಆಂಟಿಯರು ದೀಕ್ಷಾಸ್ನಾನಕ್ಕೆ ಬೇಕಾದ ಬಟ್ಟೆಯನ್ನು ನನಗೆ ಒದಗಿಸಿಕೊಟ್ಟರು. ಅವರಿಬ್ಬರು ನನಗೆ ತುಂಬಾ ಸಹಾಯ ಮಾಡಿದರು. ಆಗ ನನಗೆ ಪಾಷ್ಟರ್‌ರವರು 16-3-1997 ರಲ್ಲಿ ತಂದೆಯ, ಮಗನ, ಪರಿಶುದ್ಧಾತ್ಮನ ನಾಮದಲ್ಲಿ "ದೀಕ್ಷಾಸ್ನಾನ' ನೀಡಿದರು, ಆಗ ನನ್ನಲ್ಲಿ ಏನೋ ಸಂತೋಷ ಮನಸ್ಸಿನಲ್ಲಿ ನಾನು ಗೆದ್ದೆನೆಂಬ ಆನಂದ, ನನ್ನಲ್ಲೇ ಉತ್ತಮವಾದ ಬದಲಾವಣೆ ಉಂಟಾಯಿತು. ಅಲ್ಲಿ ಎಲ್ಲರು ನನ್ನನ್ನು ಪ್ರೀತಿಯಿಂದ ಆದರಿಸಿದರು ಮತ್ತೇ ಪ್ರಾರ್ಥಿಸಿ ಕಳುಹಿಸಿ ಕೊಟ್ಟರು. ದೇವರು ನಿಯಮಿಸಿದ ದಿನದಲ್ಲಿ ನಾನು ಆತನ ಮಗಳಾಗಲು ದೇವರು ಕೊಟ್ಟ ಕೃಪೆಗಾಗಿ ನಾನು ದೇವರಿಗೆ ಸ್ತೋತ್ರ ಮಾಡುತ್ತೇನೆ.

## 11. ಹೊಸ ಹೆಸರು. ಹೊಸ ಅಮ್ಮ

ನನಗೆ ಸುವಾರ್ತೆ ಹೇಳಿದ ಆಂಟಿಯವರಿಗೆ ನನ್ನ ಬಗ್ಗೆ ದೇವರು ಒಂದು ದರ್ಶನ ತೋರಿಸಿದರು, 'ತೇಜಸ್ಸ್' ಎನ್ನುವ ಅಕ್ಷರ ಅಲೆ-ಅಲೆಯಾಗಿ ಬಂದು ನಿಂತಿತು, ಹಾಗಾಗಿ ಆಕೆಯನ್ನು ಈ ದಿನದಿಂದ 'ತೇಜಸ್ಸ್' ಎಂದು ಕರೆ ನಾನು ಆಕೆಯನ್ನು ಆ ಹೆಸರಿಗೆ ತಕ್ಕ ರೀತಿಯಲ್ಲಿ ಬೆಳೆಸುತ್ತೇನೆ' ಎಂದು ಕರ್ತನು ತಿಳಿಸಿದರು. ಈ ಉತ್ತಮವಾದ ಹೆಸರು ನನಗೆ ಬಹಳ ಆಶೀರ್ವದಕರವಾಗಿ ಮಾರ್ಪಟ್ಟಿತು. ಅಂದಿನಿಂದ ನಾನು ಎಲ್ಲರ ಮುಖಾಂತರ 'ತೇಜಸ್ಸ್' ಎಂದು ಕರೆಯಲ್ಪಡುತ್ತಿದ್ದೇನೆ. ದೇವರು ನನಗೆ ನಾನು ಊಹಿಸಲಾರದ ಹಾಗೆ ಈ

ಉತ್ತಮವಾದ ಹೆಸರನ್ನು ಕೊಟ್ಟಿದ್ದಕ್ಕಾಗಿ ದೇವರಿಗೆ ಸ್ತೋತ್ರ ಸಲ್ಲಿಸುತ್ತೇನೆ.

ನನ್ನನ್ನು ಎಷ್ಟೋ ಆಸಕ್ತಿಯಿಂದ ಆತ್ಮೀಕದಲ್ಲಿ ಬೆಳೆಸಿದ ಮೇರಿಕುಟ್ಟಿ ಆಂಟಿಯನ್ನು ನಾನು 'ಅಮ್ಮ' ಎಂದು ಕರೆಯಲು ಪ್ರಾರಂಭಿಸಿದೆ ಅವರು ನನ್ನನ್ನು ಮಗಳಾಗಿ ಅಂಗೀಕರಿಸಿಕೊಂಡು ಆತ್ಮೀಕದಲ್ಲಿ ಬೆಳೆಸುವುದಕ್ಕೆ ಪ್ರಾರಂಭಿಸಿದರು. ನಾನು ಯಾಕೆ ಅವರನ್ನು 'ಅಮ್ಮ' ಎಂದು ಕರೆಯಲು ಇಷ್ಟ ಪಟ್ಟೆ ಅಂದರೆ-ಮೊದಲನೆದಾಗಿ ನನಗೆ ಅಮ್ಮ ಇರಲಿಲ್ಲ; ಎರಡನೇದಾಗಿ ಸತ್ಯವೇದ ವಾಕ್ಯ ಹೇಳುತ್ತದೆ "ಇಗೋ ನನ್ನ ತಾಯಿ, ನನ್ನ ಸಹೋದರರು, ಪರಲೋಕದಲ್ಲಿರುವ ನನ್ನ ತಂದೆಯ ಚಿತ್ತದಂತೆ ನಡೆಯುವವನೇ ನನ್ನ ತಮ್ಮನೂ ತಂಗಿಯೂ ತಾಯಿಯೂ ಆಗಬೇಕು" ಎಂದು ಮತ್ತಾಯ 12:50 ತಿಳಿಸುತ್ತದೆ. ಕ್ರಿಸ್ತನನ್ನು ಅನುಸರಿಸುವವರೇ ನನಗೆ ನಿಜವಾದ ಸಂಬಂದಿಕರೆಂದು ನಾನು ಗ್ರಹಿಸಿ ಈ ವಾಕ್ಯವನ್ನು ನನ್ನ ಜೀವನದಲ್ಲಿ ಅಳವಡಿಸಿಕೊಂಡೆ. ಮತ್ತು ದೇವರ ವಾಕ್ಯವನ್ನು ನಮಗೆ ಪರಿಚಯಪಡಿಸಿ ದೇವರಲ್ಲಿ ನನ್ನನ್ನು ಬೆಳೆಸುವವರು ನನಗೆ ತಾಯಿ, 'ಆತ್ಮೀಕ ತಾಯಿ' ಎಂದು ತಿಳಿದುಕೊಂಡು ಈ ಎಲ್ಲಾ ವಾಕ್ಯದ ಆಧಾರದ ಮೇಲೆ ಆಕೆಯನ್ನು ನನ್ನ ತಾಯಿಯೆಂದು ಸ್ವೀಕರಿಸಿದೆನು. ಅವರು ಇಂದಿನವರೆಗೂ ನನ್ನನ್ನು ತನ್ನ ಸ್ವಂತ ಮಗಳು ಎಂದು ಪ್ರೀತಿಮಾಡುತ್ತಿದ್ದಾರೆ.

'ಮೇರಿಕೊಟ್ಟಿ' ತಾಯಿಯವರು ತುಂಬ ಪ್ರೀತಿಯಿಂದ ನನ್ನನ್ನು ನೋಡಿಕೊಳ್ಳುತ್ತಿದ್ದರು. ನಾನು ಯಾವಾಗಲೂ ಅವರ ಮನೆಗೆ ಹೋಗಿ. ಆಗಾಗ್ಗೆ ಮನೆಯಲ್ಲಿ ತಂದೆಯವರಿಗೆ ಸುಳ್ಳು ಹೇಳಿ ಅವರೊಟ್ಟಿಗೆ ಇರುತ್ತಿದ್ದೆ. ಇದೇ ರೀತಿ ಸುಮಾರು ತಿಂಗಳುಗಳು ಮಾಡಿದೆ. ತಂದೆಯವರಿಗೆ ಇದು ತಿಳಿದಿರಲಿಲ್ಲ ಆದರೆ ನಾನು ಏನೇ ಹೇಳಿದರೂ ನಂಬುತ್ತಿದ್ದರು. ಇದಕ್ಕೆ ಅಣ್ಣ ತುಂಬ ಸಿಟ್ಟು ಮಾಡಿಕೊಂಡು ಒಂದೊಂದು ಭಾರಿ ಬೈಯುತ್ತಿದ್ದರು, ಹೊಡೆಯುತ್ತಿದ್ದರು. ಆದರೂ ನಾನು ಬಿಡದೇ ಅವರ ಮನೆಗೆ ಹೋಗುತ್ತಿದ್ದೆ, ಓದುವುದರಲ್ಲಿ ನನಗೆ ಆಸಕ್ತಿ ಅನ್ನುವುದೇ ಇರುತ್ತಿರಲಿಲ್ಲ. ಸ್ನೇಹಿತೆಯ ಮನೆಯಲ್ಲಿ ಓದುತ್ತಿದ್ದೇನೆ ಎನ್ನುವ ನೆಪ ಹೇಳಿಕೊಂಡು ನಾನು ತಂದೆಯೊಟ್ಟಿಗೆ ಯಾವುದಾದರೂ ಒಂದು ಸುಳ್ಳು ಹೇಳಿ ಅವರ ಮನೆಗೆ ಹೋಗುತ್ತಿದ್ದೆನು.

ನನ್ನ ತಂದೆಯಾದರೋ ನಾನು ಕೇಳಿದುದನ್ನೆಲ್ಲಾ ಕೊಡಿಸುತ್ತಾ ನನ್ನನ್ನು ಎಷ್ಟೋ ಹೆಚ್ಚಾಗಿ ಪ್ರೀತಿ ಮಾಡುತ್ತಾ ಇದ್ದರು. ನಾನು ಎಲ್ಲಿಗೆ ಹೋಗುತ್ತೇನೆ ಏನು ಮಾಡುತ್ತೇನೆ ಇದೆಲ್ಲಾ ಅವರಿಗೆ ಏನೂ ತಿಳಿದಿರಲಿಲ್ಲ.

# 12. ಆತ್ಮೀಕ ಬೆಳವಣಿಗೆ

ನನ್ನ ತಂದೆಯವರಿಗೆ ತಿಳಿಯದೆ. 21 ದಿನ ಉಪವಾಸವನ್ನು ಮಾಡಲು ತೀರ್ಮಾನಿಸಿದೆ. 21 ದಿನವೂ ಸಭೆಯಲ್ಲಿ ಪ್ರಾರ್ಥನೆ ನಡೆಯುತ್ತಿತ್ತು. ಸಭೆಗೆ ಪ್ರತಿದಿನ ನಾನು ಉಪವಾಸದಲ್ಲಿ ಇದ್ದು ಹೋಗಿ ಬರುತ್ತಿದ್ದೆ. ತಂದೆ ಹತ್ತಿರ 'ಟ್ಯೂಶನ್'ಗೆ ಹೋಗುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೆ; 16 ದಿವಸ ಆದ ಮೇಲೆ ತಂದೆಗೆ ಅನುಮಾನ ಬಂತು, ಇವಳು ಎಲ್ಲಿಗೆ ಹೋಗುತ್ತಾಳೆ ನೋಡಬೇಕು ಎಂದು ಅವರು ತೀರ್ಮಾನಿಸಿದರು. ಮತ್ತು ಅವರು ನನ್ನನ್ನೂ ನಿನ್ನ ಟ್ಯೂಶನ್‌ಗೆ ಕರೆದುಕೊಂಡು ಹೋಗು ಅಂದರು. ನನ್ನಲ್ಲಿ ನಡುಕ ಪ್ರಾರಂಭವಾಯಿತು. ಆದರೂ ಸಹ ಆಯಿತು ನಾಳೆ ನನ್ನೊಟ್ಟಿಗೆ ಬಾ ಎಂದು ಹೇಳಿದೆ.

ನನ್ನ ಆತ್ಮೀಕ ತಾಯಿಗೆ ಫೋನ್ ಮಾಡಿ ವಿಷಯ ತಿಳಿಸಿದೆ, ಅವರು ನಿನ್ನ ತಂದೆಯನ್ನು ಕರೆದುಕೊಂಡು ಬಾ ಅಂದರು, ನಾನು ಮನಸ್ಸಿನಲ್ಲಿ ಪ್ರಾರ್ಥಿಸಿದಕೊಂಡು ಕರೆದುಕೊಂಡು ಹೋದೆನು. ನನ್ನ ತಂದೆ ದಾರಿ ಮಧ್ಯದಲ್ಲಿ ಹೇಳಿದರೂ ನೀನು ಏನಾದರೂ ತಪ್ಪು ಮಾಡುತ್ತಿದ್ರೆ, ಅಥವಾ ಏನಾದರೂ ಹೆಚ್ಚು ಕಡಿಮೆ ಆದ್ರೆ ನಿನ್ನ ಸುಮ್ಮನೇ ಬಿಡಲ್ಲಾ. ನಿನ್ನನ್ನು ಅಲ್ಲೇ ಸಾಯಿಸಿ ಬಿಡುತ್ತೇನೆ ಅಂಥಾ ತುಂಬಾ ಬೈದು ಎಚ್ಚರಿಕೆ ಕೊಡುತ್ತಿದ್ದರು. ಎ.ಜಿ.ಬೆಥೆಲ್ ಸಭೆ ಬಂತು. ಆಟೋ ಇಳಿದು-ಇದೇನಾ 'ಟೂಶೆನ್' ಅಂದರು, ಹೂಂ ಅಂದೆ, ಇಲ್ಲಿ ಎಲ್ಲಾರು ಬರಬಹುದಾ? ಅಂಥ ಪ್ರಶ್ನೇ ಹಾಕಿದರು. ಹೌದು ಎಂದು ಹೇಳಿದೆ, ಒಳಗಡೆ ಕರೆದುಕೊಂಡು ಹೋಗಿ ಖುರ್ಚಿ ಮೇಲೆ ಕುಳಿತುಕೊಳ್ಳಿ ಎಂದು ಹೇಳಿ ನಾನು ಹೋಗಿ ಸಹೋದರಿಯರೊಟ್ಟಿಗೆ ಕುಳಿತುಕೊಂಡೆ. ಅಲ್ಲಿ ನಡೆಯುವಂತಹ ಎಲ್ಲಾ ಕಾರ್ಯಕ್ರಮಗಳನ್ನು ನೋಡಿದರು. ಅವರಿಗೆ ಅರ್ಥವಾಯಿತು ಇದು ಚರ್ಚ್ ಎಂದು. ನಾನಾದರೋ ಭಯದಿಂದಲೇ ಪ್ರಾರ್ಥಿಸುತ್ತಿದ್ದೆ. ಕರ್ತನೇ ನನ್ನ ತಂದೆಯನ್ನು ಮುಟ್ಟು ಅವರೂ ನಿನ್ನನ್ನು ಅಂಗೀಕರಿಸಿಕೊಳ್ಳಲಿ ಎಂದು ಬೇಡುತ್ತಲೇ ಇದ್ದೆ. ಆದರೆ ಅಲ್ಲಿ ನಡೆದ ಆಶ್ಚರ್ಯವೆಂದರೆ ನನ್ನ ತಂದೆಯವರಿಗೆ ಒಂದು ಪಾಸ್ಟರ್ ಬಳಿ ಪ್ರಾರ್ಥನೆಗೆ ಕರೆದುಕೊಂಡು ಹೋದೆನು ಅವರು ಬಂದು ನನ್ನ ತಂದೆಗೆ ಪ್ರಾರ್ಥಿಸಿದರು. ನನ್ನ ತಂದೆಯವರು ಈ ಪ್ರಾರ್ಥನೆಯು ಇನ್ನು ಎಷ್ಟು ದಿನ ನಡೆಯುತ್ತದೆ ಎಂದು ಕೇಳಿದರು. ಇನ್ನು 4 ದಿವಸಗಳು ಎಂದು ಹೇಳಿದೆ. ಆಗ ನನ್ನ ತಂದೆಯವರು - ನೀನು 4 ದಿವಸವು ಹೋಗಿ ಬಾ ಆಮೇಲೆ ನನಗೆ ಎಣ್ಣೆ ಪ್ರಾರ್ಥಿಸಿ ತೆಗೆದುಕೊಂಡು ಬಾ ಎಂದು ಹೇಳಿದರು ಕಾರಣ ಅವರಿಗೆ 'ಲಕ್ವಾಯಿ' ಬಿಪಿ ಶುಗರ್ ಇತ್ತು ಈ ಖಾಯಿಲೆ ಬಿಡುಗಡೆ ಆಗಬಹುದು ಎನ್ನುವ ಆಸೆ ಅವರಲ್ಲಿ ಮೂಡಿತ್ತು ನನಗೆ ಬಹಳ ಆಶ್ಚರ್ಯವಾಯಿತು. ದೇವರ

ಕೃಪೆಯಿಂದ ಮೊದಲನೇ ಭಾರಿ ಮಾಡಿದ 21 ದಿವಸ ಉಪವಾಸವನ್ನು ಕರ್ತನು ಉತ್ತಮವಾಗಿ ಮುಗಿಸಲು ಸಹಾಯಮಾಡಿದರು. ನಾನು ಎಣ್ಣೆಯನ್ನು ತೆಗೆದುಕೊಂಡು ಹೋಗಿ ಪ್ರಾರ್ಥನೆ ಮಾಡಿಸಿಕೊಂಡು ಬಂದು ಉಳಿದ 4 ದಿನವೂ ಬೆಳಗ್ಗೆ ಮತ್ತು ಸಾಯಂಕಾಲ ಅದನ್ನು ಹಚ್ಚುತ್ತಿದ್ದೆ; ಮತ್ತು ಅವರಿಗೆ ಗುಣವಾಗುವವರೆಗೂ ಆ ಎಣ್ಣೆಯನ್ನು ಹಚ್ಚುತ್ತಾ ಬಂದೆ. ದೇವರು ದಿನೇ-ದಿನೇ ಅವರಿಗೆ ಸ್ವಸ್ಥಮಾಡುತ್ತಾ ಬಂದರು; ಇದನ್ನು ಗ್ರಹಿಸಿದ ನನ್ನ ತಂದೆ 1001ರೂ ಅನ್ನು ನನಗೆ ಕೊಟ್ಟು "ಈ ಹಣವನ್ನು ಚರ್ಚ್‌ಗೆ ಹಾಕಿ ಕೈ ಮುಗಿದುಕೊಂಡು ಬಂದು ಬಿಡು, ಮತ್ತೇ ಇನ್ಯಾವ ಕಾರಣಕ್ಕೂ ನೀನು ಚರ್ಚ್‌ಗೆ ಹೋಗಬೇಡ ನಮ್ಮ ದೇವರೇ ನಮಗೆ ಸಾಕು" ಅಂದುಬಿಟ್ಟರು. ಆದರೆ ನನಗೆ ತುಂಬಾ ಬೇಸರವಾಯಿತು. ಇವರು ಈ ಘಟನೆಯಿಂದ ದೇವರನ್ನು ಕಂಡುಕೊಳ್ಳುತ್ತಾರೆಂದು ನಾನು ತುಂಬಾ ವಿಶ್ವಾಸಿಸಿದೆ. ಆದರೆ ನಾನು ನೆನೆಸಿದ ರೀತಿಯಲ್ಲಿ ಏನೂ ಆಗಲಿಲ್ಲ. ನಾನು ಸಭೆಗೆ ಹೋಗಿ ನನ್ನ ತಂದೆ ಕೊಟ್ಟ ಕಾಣಿಕೆಯನ್ನು ಹಾಕಿ ಬಂದೆನು. ಅಂದಿನಿಂದ ನನ್ನ ತಂದೆಗೆ ನಾನು ಎಲ್ಲಿಗಾದರು ಹೋದರು ಬಂದರು ನಾನು ಚರ್ಚ್‌ಗೆ ಹೋಗಿ ಬರುತ್ತೇನೆಂಬ ಅನುಮಾನ ಉಂಟಾಗುತ್ತಿತ್ತು.

ನಾನು ಆತ್ಮೀಕ ತಾಯಿಯ ಮನೆಗೆ ಆಗಾಗ್ಗೆ ಹೋಗಿ ಪ್ರಾರ್ಥನೆಯಲ್ಲಿ ಭಾಗವಹಿಸುತ್ತಿದ್ದೆ. ನನ್ನ ಮನೆಯಲ್ಲಿ ನನ್ನನ್ನು ನನ್ನ ತಂದೆ ಬಿಟ್ಟು ಬೇರೆ ಯಾರೂ ಇಷ್ಟ ಪಡುತ್ತಿರಲಿಲ್ಲ. ಆದರೆ ಅಣ್ಣನ ಮಕ್ಕಳು ಮನೆಯಲ್ಲಿ ನಡೆಯುವಂತ ಸಂಗತಿಗಳನ್ನು ನನ್ನೊಟ್ಟಿಗೆ ಹೇಳಿ ಹಂಚಿಕೊಳ್ಳುತ್ತಿದ್ದರು. ಮಕ್ಕಳೊಟ್ಟಿಗೆ ಕಳೆಯುವ ಸಂದರ್ಭವು ಒಂದೇ ನನ್ನ ಮನೆಯಲ್ಲಿ ನನಗೆ ತುಂಬಾ ಸಂತೋಷವನ್ನು ಕೊಡುತ್ತಿದ್ದ ಸಂಗತಿ. ಮಕ್ಕಳ ಬಳಿಯಲ್ಲಿ ನಾನು ಎಲ್ಲನ್ನೂ ಹಂಚುಕೊಳ್ಳುತ್ತಿದ್ದೆ ಅದಕ್ಕಾಗಿ ಅವರಿಗೆ ನನ್ನ ಬಗ್ಗೆ ಎಲ್ಲಾ ಗೊತ್ತಿರುತ್ತಿತ್ತು, ಆದರೆ ಅವರು ಯಾರೊಟ್ಟಿಗೂ ಹೇಳುತ್ತಿರಲಿಲ್ಲ, ಅದೇ ದೇವರು ನನಗೆ ಕೊಟ್ಟ ಒಳ್ಳೆಯ ಅದೃಷ್ಟ.

## 13. ಶೋಧನೆ ಸಮಯ

ಒಂದು ಭಾರಿ ನನ್ನ ತಂದೆಗೆ ಮತ್ತೇ ನಾನು ಚರ್ಚ್‌ಗೆ ಹೋಗುತ್ತಿದ್ದೇನೆ ಎಂದು ಗೊತ್ತಾಗಿ ನನ್ನನ್ನು ಕರೆದು - "ನನ್ನ ತಲೆ ಮೇಲೆ ಕೈಯಿಟ್ಟು ಹೇಳು - ನಾನು ಚರ್ಚ್‌ಗೆ ಇನ್ನು ಮೇಲೆ ಹೋಗಲ್ಲ - ಎಂದು ಹೇಳಿ ಪ್ರಮಾಣ ಮಾಡು"

ಎಂದು ಬಲವಂತ ಮಾಡಿದರು. ಅವರು ಈ ರೀತಿ ಹೇಳುವಾಗ ನಾನು ಹಿಂದು-ಮುಂದು ನೋಡದೆ ಅವರಿಗೆ ಕೋಪ ಬಂದು ಮೂಲೆಯಲ್ಲಿ ಇದ್ದ ಕೋಲನ್ನು ತೆಗೆದುಕೊಂಡು ಸರಿಯಾಗಿ ಹೊಡೆದರು ನೋವು ತಡೆಯಲಾಗದೆ, ವಾಕ್ಯವನ್ನು ನೆನಸಿಕೊಂಡೆ "ನಿನ್ನ ತಲೆಯ ಮೇಲೆ ಕೂಡ ಆಣೆ ಇಡಬೇಡ, ನೀನು ಒಂದು ಕೂದಲನ್ನಾದರೂ ಬೆಳ್ಳಗೆ ಅಥವಾ ಕಪ್ಪಗೆ ಮಾಡಲಾರೆ, ಆದರೆ ನಿನ್ನ ಮಾತು ಹೌದಾದರೆ ಹೌದು ಅಲ್ಲವಾದರೆ ಅಲ್ಲ ಎಂದಿರಲಿ, ಇದಕ್ಕಿಂತ ಹೆಚ್ಚಾದದ್ದು ಸೈತಾನನಿಂದ ಬಂದದ್ದು" (ಮತ್ತಾಯ 5:36,37) ಈ ವಾಕ್ಯದ ಮುಖಾಂತರ ಆಣೆಗೆ ದೇವರು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ ಎಂದು ತಿಳಿದು ನಾನು ನನ್ನ ತಂದೆ ತಲೆಯ ಮೇಲೆ ಕೈಯಿಟ್ಟು ಅವರ ಸಮಾಧಾನಕ್ಕಾಗಿ ಆಣೆ ಇಟ್ಟುಬಿಟ್ಟೆ, ಆಗ ನನ್ನ ತಂದೆಯು ಸುಮ್ಮನಾದರು.

ನಾನು ಒಂದು ವಾರದ ನಂತರ, ಅವರು ಪೇಟೆಗೆ ಹೋಗಿ ಸಂಜೆ ಬರುತ್ತಾರೆ ಎಂದು ತಿಳಿದು, ಇದು ಒಳ್ಳೇ ಅವಕಾಶ ಎಂದು ಅವರು ಮನೆಯಿಂದ ಹೊರಡುವುದೇ ಕಾದಿದ್ದು ನಾನೂ ಚರ್ಚ್‌ಗೆ ಹೋಗಿ ಸಂತೋಷವಾಗಿ ಆರಾಧನೆ ಮುಗಿಸಿಕೊಂಡು ಮನೆಗೆ ತಿರುಗಿ ಬಂದೆ. ಆದರೆ ನನ್ನ ತಂದೆ ನನ್ನನ್ನು ಪರೀಕ್ಷೆಮಾಡುತ್ತಿದ್ದಾರೆ ಎಂದು ನನಗೆ ಅರ್ಥವಾಗಲೇ ಇಲ್ಲ. ಅವರು ಇವಳು ಆಣೆಯಿಟ್ಟು ಅದರ ಪ್ರಕಾರ ನಡೆಯುತ್ತಿಲ್ಲವೆಂದು ಗಮನಿಸಿ. ತುಂಬಾ ಕೋಪದಿಂದ ಮನೆಯಲ್ಲಿ ಕಾಯುತ್ತಿದ್ದರು. ನಾನು ಮನೆಗೆ ಹೋಗುತ್ತಾ ಪಕ್ಕದ ಮನೆಯಲ್ಲಿ ಕೇಳಿದೆ ನಮ್ಮಪ್ಪ ಮನೆಯಲ್ಲಿ ಇದ್ದಾರಾ ಎಂದು ಅವರು ಹೂಂ! ಇದ್ದಾರೆ ದೊಣ್ಣೆ ನಿನಗಾಗಿ ಕಾಯುತ್ತಾ ಇದೆ, ಎಂದರು. ನಾನು ಓಹೋ ನನಗೆ ನನ್ನ ತಂದೆ ಹೊಡೆಯುವುದು ಇವರಿಗೂ ಗೊತ್ತಾಗಿದೆ ಎಂದು ತಿಳಿದು. ಸರಿ 'ಯೇಸಪ್ಪಾ ನಮ್ಮಪ್ಪಾ ಈಗ ಹೊಡೆಯುತ್ತಾರೆ ನನ್ನ ಶರೀರಕ್ಕೆ ಬಲಕೊಡಪ್ಪಾ' ಎಂದು ರಸ್ತೆಯಲ್ಲೇ ಪ್ರಾರ್ಥಿಸಿಕೊಂಡು ಮನೆಯ ಒಳಗಡೆ ಹೋದೆ, ನಾನು ಒಳಗೆ ಹೋಗುತ್ತಿರಬೇಕಾದರೆ ನನ್ನ ತಂದೆಯು ನನ್ನ ಬೆನ್ನಿಗೆ ಒಂದು ದೊಡ್ಡ ದೊಣ್ಣೆಯಿಂದ ಬಲವಾಗಿ ಹೊಡೆದರು, ಅಬ್ಬಾ! ನಾನು ನೆನೆಸಿದೆ ಅಷ್ಟೇ ನನ್ನ ಕಥೆ ಮುಗಿಯಿತು ನನ್ನ ಬೆನ್ನುಮೂಳೆಯೇ ಮುರಿಯಿತು ಎಂದು ಅಂದುಕೊಂಡೆ ಆದರೆ ನನ್ನ ಬೆನ್ನಿಗೆ ಕರ್ತನು ಬಲ ಕೊಟ್ಟಿದ್ದ ಕಾರಣ ನನಗೆ ನೋವಾಯಿತೇ ವಿನಃ ಏನೂ ಆಗಲಿಲ್ಲ. ಆದರೆ ನನ್ನ ತಂದೆಯು ಅಷ್ಟಕ್ಕೇ ಬಿಡದೆ ಬಹಳ ಉದ್ವೇಗದಿಂದ ಒಂದು ಕೋಣೆಗೆ ನನ್ನನ್ನು ಎಳೆದುಕೊಂಡು ಹೋಗಿ, ದೊಣ್ಣೆಯು ಮುರಿದು ಹೋಗುವವರೆಗೂ ನನ್ನನ್ನು ಅವರು ತೃಪ್ತಿಯಾಗುವವರೆಗೂ ಹೊಡೆದರು. ರಕ್ತ ಸಹಾ ತಲೆಯಲ್ಲಿ ಬಂದಿತು, ಅಷ್ಟಕ್ಕೂ ಅವರು ತೃಪ್ತಿಯಾಗದೆ ಕಾಲಿಗೆ ಎರಡು ಚೈನುಗಳನ್ನು ಹಾಕಿ, ಬೀಗ ಹಾಕಿದರು,

ಒಂದು ಮೂಲೆಯಲ್ಲಿ ಕುಳ್ಳರಿಸಿ ಸರಿಯಾಗಿ ಬೈದು 'ನೀನು ಕಾಲಿದ್ದರೆ ಅಲ್ವ ಚರ್ಚ್‌ಗೆ ಹೋಗುತ್ತೀಯಾ ಎಂದು ನನ್ನನ್ನು ಚೈನುಗಳಿಂದ ಬಂದಿಸಿ ಹೊರಗೆ ಹೊರಟುಹೋದರು.' ಅತ್ತಿಗೆನೂ ಬಂದು ಬೈದು ಹೋದರು, ಅಣ್ಣ 'ಛೀ ನಿನಗೆ ನಾಚಿಕೆ ಆಗಲ್ವಾ? ನೀನೊಂದು ಹೆಣ್ಣಾ? ಯಾಕೆ ಬದುಕಿದ್ದೀಯಾ! ಹೋಗಿ ಸಾಯಿ? ನಮಗ್ಯಾಕೆ ಈ ಗೋಳು ಕೊಡುತ್ತೀಯಾ?' ಎಂದು ಅವರೂ ಸಹ ಹೀಯಾಳಿಸಿದರು. ನನ್ನ ಬಳಿಯಲ್ಲಿ ಇದ್ದ 'ಹೊಸ ಒಡಂಬಡಿಕೆಯನ್ನು' ಕಿತ್ತುಕೊಂಡು ನನ್ನ ತಂದೆಯವರು ಸಾಕಿದ ಮಗನಾದ 'ವಿನೋದ'ನ ಕೈಯಲ್ಲಿ ಕೊಟ್ಟು ಇದನ್ನು ಸುಟ್ಟುಬಿಡು ಎಂದು ಹೇಳಿದರು ವಿನೋದನು ಬೈಬಲನ್ನು ಸುಟ್ಟು ಹಾಕಿದನು. ನನಗೆ ದೊಣ್ಣೆಯಿಂದ ಬಿದ್ದ ಒಡೆತವನ್ನು ತಾಳಲಾರದೇ ತುಂಬಾ ಅಳುತ್ತಿದ್ದೆ - ಆಗ ಯೇಸಪ್ಪ ನನಗೆ ದರ್ಶನದಲ್ಲಿ "ತಾನು ಶಿಲುಬೆಯಲ್ಲಿ ನನಗಾಗಿ ಬಲಿಯಾಗಿ ಸುರಿಸಲ್ಪಟ್ಟ ರಕ್ತ"ವನ್ನು ತೋರಿಸಿ, ನಿನಗೋಸ್ಕರ ನಾನು ಈ ರೀತಿ ಬಲಿಯಾದೆ; ನೀನು ನನಗೋಸ್ಕರ ಇದನ್ನು ಸಹಿಸಲಾರೆಯಾ!" ಎಂದು ಶಬ್ಧದಿಂದ ನನ್ನ ಬಳಿ ಮಾತನಾಡಿದ ಹಾಗೆ ನನ್ನ ಕಿವಿಗೆ ಕೇಳಿಸುತ್ತಿತ್ತು, ಆಗ ನಾನು ಸ್ತಬ್ಧಳಾದೆ. ಆಗ ದೇವರೇ ನಾನು ನಿನಗೋಸ್ಕರ ಇದನ್ನೆಲ್ಲಾ ಸಹಿಸುತ್ತೇನೆ ಎಂದು ಒಪ್ಪಿಸಿಕೊಟ್ಟೆ.

ಈ ರೀತಿ ಬಂದಿಸಲ್ಪಟ್ಟ ನನಗೆ ಮನೆಯವರಿಂದ ತುಂಬಾ ಅವಮಾನವಾಯಿತು. ಮನೆಗೆ ಯಾರೇ ಬಂದರು ಇವಳಿಗೆ ಹುಚ್ಚು ಹಿಡಿದಿದೆ, ಯಾರು ಅವಳ ಹತ್ತಿರ ಹೋಗಬೇಡಿ ಕಚ್ಚಿಬಿಡುತ್ತಾಳೆ, ಎಂದೆಲ್ಲಾ ನನಗೆ ಮನೆಗೆ ಬಂದಂತಹ ವ್ಯಕ್ತಿಗಳ ಬಳಿಯಲ್ಲೂ ಅವಮಾನ ಪಡಿಸಿದರು, ರಕ್ತ ಸೋರುತ್ತಿದ್ದರೂ ಯಾರೂ ಒರೆಸಲು ಬರಲಿಲ್ಲ. ಯಾರೂ ಊಟ-ನೀರು ಕೊಡಲಿಲ್ಲ, ನಾನು ಅಳುತ್ತಲೇ ಇದ್ದೆ. ನಂತರ ಅಣ್ಣನ ಮಗಳು ನನ್ನ ಹತ್ತಿರ ಬಂದು ಹೇಳಿದಳು, ಆಂಟಿ ನಾನು ನಿಮ್ಮ ಚೈನನ್ನು ಬಿಚ್ಚುತ್ತೇನೆ ನೀವೆಲ್ಲಿಗಾದರೂ ಓಡಿಹೋಗಿ ಎಂದು ಹೇಳಿ ಆ ಚೈನನ್ನು ಬಿಚ್ಚಿದಳು. ನಾನು ಮನೆ ಬಿಟ್ಟು 'ವಿಲ್ಸನ್ ಗಾರ್ಡನ್' ಎನ್ನುವ ಸ್ಥಳದಲ್ಲಿ ವಾಸವಾಗಿದ್ದ ನನ್ನ ಕಸಿನ್ ಅಕ್ಕಳ ಮನೆಗೆ ಹೋಗಿಬಿಟ್ಟೆ.

"ಭೂಲೋಕದ ಮೇಲೆ ಸಮಾಧಾನ ಹುಟ್ಟಿಸುವುದಕ್ಕೆ ಬಂದೆನೆಂದು ನೆನೆಸಬೇಡಿರಿ; ಸಮಾಧಾನವನ್ನು ಹುಟ್ಟಿಸುವದಕ್ಕೆ ನಾನು ಬಂದಿಲ್ಲ, ಖಡ್ಗವನ್ನು ಹಾಕುವುದಕ್ಕೆ ಬಂದೆನು, ಹೇಗೆಂದರೆ ಮಗನಿಗೂ ತಂದೆಗೂ, ಮಗಳಿಗೂ ತಾಯಿಗೂ, ಸೊಸೆಗೂ ಅತ್ತೆಗೂ ಭೇದ ಹುಟ್ಟಿಸುವದಕ್ಕೆ ಬಂದೆನು. ಹೀಗೆ ಒಬ್ಬ ಮನುಷ್ಯನಿಗೆ ಅವನ ಮನಯವರೇ ವೈರಿಗಳಾಗುವರು, ತಂದೆಯ ಮೇಲಾಗಲಿ

ತಾಯಿಯ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ; ಮಗನ ಮೇಲಾಗಲಿ ಮಗಳ ಮೇಲಾಗಲಿ ನನ್ನ ಮೇಲೆ ಇಡುವದಕ್ಕಿಂತ ಹೆಚ್ಚಾದ ಮಮತೆಯನ್ನಿಡುವವನು ನನಗೆ ಯೋಗ್ಯನಲ್ಲ. ಮತ್ತು ಯಾವನಾದರೂ ತನ್ನ ಶಿಲುಬೆಯನ್ನು ತೆಗೆದುಕೊಂಡು ನನ್ನ ಹಿಂದೆ ಬಂದ ಹೊರತು ನನಗೆ ಯೋಗ್ಯನಲ್ಲ. ತನ್ನ ಪ್ರಾಣವನ್ನು ಕಂಡುಕೊಂಡವನು ಅದನ್ನು ಕಳಕೊಳ್ಳುವನು; ನನ್ನ ನಿಮಿತ್ತವಾಗಿ ತನ್ನ ಪ್ರಾಣವನ್ನು ಕಳಕೊಂಡವನು ಅದನ್ನು ಕಂಡುಕೊಳ್ಳುವನು." (ಮತ್ತಾ 10:34-39) ದೇವರು ನಮಗೆ ಈ ಎಲ್ಲಾ ಕಷ್ಟಗಳು ಬರುತ್ತದೆ ಎಂದು ಚನ್ನಾಗಿ ಅರಿತವನಾಗಿದ್ದುದರಿಂದ ನನಗಾಗಿಯೇ ಈ ಎಲ್ಲಾ ವಾಕ್ಯಗಳನ್ನು ಬರೆದಿಟ್ಟಿದ್ದಾರೆ ಎನ್ನುವ ರೀತಿಯಲ್ಲಿ ನನಗೆ ತಿಳಿಯಿತು. ಏಕೆಂದರೆ ನಾನು ನನ್ನ ತಂದೆಯ ಮೇಲೆ ಅಪಾರವಾದ ಪ್ರೀತಿಯನ್ನು ಇಟ್ಟಿದ್ದೆನು. ಆದರೆ ನನ್ನ ಸೃಷ್ಟಿ ಕರ್ತನಾದರೋ ನನಗಿಂತ ನಿನ್ನ ತಂದೆಯನ್ನು ಹೆಚ್ಚಾಗಿ ಪ್ರೀತಿಮಾಡಬಾರದು ಎಂದು ಆಜ್ಞಾಪಿಸಿದ್ದಾರೆ. ದೇವರ ಮಾತಿನಂತೆ ನಾನು ನಡೆಯಲು ಪ್ರಾರಂಭಿಸಿದ ಸಲುವಾಗಿ ನನ್ನ ತಂದೆ ನನಗೆ ವಿರೋಧಿಯಾಗಿ ನಿಂತುಕೊಂಡು ನನ್ನನ್ನು ಹಿಂಸಿಸ ತೊಡಗಿದರು. ನಾನಾದರೋ ದಿನಾಲು ನನ್ನ ಶಿಲುಬೆಯನ್ನು ಹೊತ್ತು ನಡೆಯುವ ಹಾಗೆ ಕರ್ತನು ನನ್ನನ್ನು ಬಲ ಪಡಿಸಿದರು.

ನಂತರ ನನಗೋಸ್ಕರ ಸಭೆಯಲ್ಲಿ ಎಲ್ಲರು ಪ್ರಾರ್ಥಿಸಿದರು. ನಾನು ಯೇಸುಕ್ರಿಸ್ತನ ಮೇಲೆ ನಂಬಿಕೆಯನ್ನು ಬಿಡಲಿಲ್ಲ; ನಂತರ ನನ್ನ ತಂದೆಗೆ ಮೂರು ದಿನ ಆದ ಮೇಲೆ ನಾನು ಇದ್ದ ಸ್ಥಳ ತಿಳಿಯಿತು. ಆಗ ಅಪ್ಪ ಬಂದು ನನ್ನನ್ನು ಮನೆಗೆ ಕರೆದುಕೊಂಡು ಹೋದರು. ನೀನು ಎಲ್ಲಾದರೂ ಹೋಗು ನಿನ್ನ ನಾನು ಏನು ಬೈಯುವುದಿಲ್ಲ ಎಂದು ಹೇಳಿ ನನ್ನನ್ನು ಅಲ್ಲಿಂದ ಕರೆದುಕೊಂಡು ಹೋದರು.

ಆದರೆ ಸಣ್ಣ-ಸಣ್ಣ ವಿಷಯಗಳನ್ನು ಹೇಳಿಕೊಂಡು ಏನು ತಪ್ಪಿಲ್ಲದಿದ್ದರೂ, ಅಪ್ಪ ಅಣ್ಣ ನನ್ನನ್ನು ಹೊಡೆಯುವುದು ಬಿಡಲೇ ಇಲ್ಲ. ಇದು ಆಗಾಗ ಮನೆಯಲ್ಲಿ ನಡೆಯುತ್ತಲೇ ಇತ್ತು. ನನ್ನನ್ನು ಹೊಡೆದೂ ಹೊಡೆದೂ ಮನೆಯಲ್ಲಿದಂತಹ ಎಷ್ಟೋ ಕೋಲುಗಳೂ ಮುರಿದು ಹೋಯಿತು. ಅವರು ರಕ್ತ ಸುರಿಯುವಷ್ಟು ಪ್ರತಿಭಾರಿಯೂ ನನ್ನನ್ನು ಹೊಡೆಯುತ್ತಲೇ ಇದ್ದರು. ಅವರು ನನ್ನನ್ನು ಹೊಡೆಯುವಾಗಲೆಲ್ಲಾ ನನಗೆ ಯೇಸುಕ್ರಿಸ್ತನ ಪ್ರೀತಿಯು ಹೆಚ್ಚಾಗುತ್ತಿತ್ತೆ ವಿನಹ ಕಡಿಮೆ ಆಗಲೇ ಇಲ್ಲ. ಕಾರಣ ದೇವರ ವಾಕ್ಯ ಹೇಳುತ್ತದೆ "ನನ್ನ ನಿಮಿತ್ತವಾಗಿ ಜನರು ನಿಮ್ಮನ್ನು ನಿಂದಿಸಿ ಹಿಂಸೆಪಡಿಸಿ ನಿಮ್ಮ ಮೇಲೆ ಕೆಟ್ಟ-ಕೆಟ್ಟ ಮಾತುಗಳನ್ನು

ಸುಳ್ಳಾಗಿ ಹೊರಿಸಿದರೆ ನೀವು ಧನ್ಯರು. ಸಂತೋಷಪಡಿರಿ, ಉಲ್ಲಾಸಪಡಿರಿ; ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವದು;" (ಮತ್ತಾಯ 5:11,12) ಎಂದು. ಈ ವಾಕ್ಯದ ಮುಖಾಂತರ ನಾನು ಈ ಭಾದೆಯನ್ನು ಅನುಭವಿಸಲು ಧನ್ಯಳೆಂದು ಭಾವಿಸಿದೆನು.

ನಾನು ಕ್ರಿಸ್ತನನ್ನು ಹಿಂಬಾಲಿಸುತ್ತಿರುವುದು ಅಣ್ಣನ ಮಕ್ಕಳಿಗೂ ಮತ್ತು ನನ್ನ ನಾಲ್ಕನೇ ಅಕ್ಕನಿಗೆ ಮಾತ್ರ ಚೆನ್ನಾಗಿ ತಿಳಿದಿತ್ತು, ಮನೆಯಲ್ಲಿ ನಾನು ಸರಿಯಾಗಿ ಓದದೇ ಅಲ್ಲಲ್ಲಿ ಹೋಗಿ ಬರುತ್ತೇನೆ ಎಂದು ನನ್ನ ಮೇಲೆ ಅಪವಾದಗಳನ್ನು ಸುಮ್ಮ ಸುಮ್ಮನೆ ಹಾಕುತ್ತಿದ್ದರು. ಮನೆಯಲ್ಲೇ ಇರಲ್ಲಾ, ಯಾರ ಮಾತು ಕೇಳಲ್ಲಾ ಎಂದು ಹೇಳಿ ನನ್ನನ್ನು ಎಲ್ಲರು ಬೈಯುತ್ತಿದ್ದರು. ನಂತರ ಚರ್ಚ್‌ಗೆ ಹೋದರೆ ಮನೆಗೆ ಸೇರಿಸೋಲ್ಲ ಎನ್ನುವ ಬೆದರಿಕೆಯನ್ನು ನನಗೆ ಕೊಟ್ಟಿದ್ದರು. ನಾನು ಅವರ ಮಾತಿಗೆ ಏನೂ ಹೇಳುತ್ತಿರಲಿಲ್ಲ. ಆದರೆ ಯೇಸು ಕ್ರಿಸ್ತನ ಹೆಜ್ಜೆ ಜಾಡಿನಲ್ಲಿ ನಡೆಯುವುದನ್ನು ನಾನು ಎಂಥಹ ಶೋಧನೆಯಲ್ಲೂ ಬಿಡಲಿಲ್ಲ. ಸಭೆಗೆ ಹೋಗಿ ಆರಾಧನೆಯಲ್ಲಿ ಪಾಲ್ಗೊಳ್ಳುವ ಆಸೆ ನನಗೆ ಇದ್ದುದರಿಂದ ಮನೆಯಲ್ಲಿರುವವರೆಲ್ಲರ ಕಣ್ಣು ತಪ್ಪಿಸಿ ಹೋಗಿ ಬರುತ್ತಲೇ ಇದ್ದೆ. ಒಂದೊಂದು ಭಾರಿ ತಂದೆ ಕಂಡುಹಿಡಿದು ಚೆನ್ನಾಗಿ ಮತ್ತೆ-ಮತ್ತೆ ಹೊಡೆಯುತ್ತಲೇ ಇದ್ದರು. ಅವರು ಕೈಯಲ್ಲಿ ಹೊಡೆಯಲ್ಲಾ ದೊಣ್ಣೆಯಲ್ಲೇ ಹೊಡೆಯುವುದು. ಅವರ ಹೊಡೆತ ನನ್ನ ಸೃಷ್ಟಿ ಕರ್ತನಿಂದ ನನ್ನನ್ನು ಬೇರ್ಪಡಿಸಲು ಆಗಲೇ ಇಲ್ಲ.

ಒಂದು ಭಾರಿ ಸಭೆಯಲ್ಲಿರುವವರು ಹೇಳಿದರು - ಸ್ವಲ್ಪ ದಿವಸಗಳು ನಿಮ್ಮ ತಂದೆ ಹೇಳಿದ ರೀತಿ ಮನೆಯಲ್ಲೇ ಇದ್ದು ಪ್ರಾರ್ಥನೆ ಮಾಡಿಕೊಳ್ಳಿ; ಇದರಿಂದ ದೇವರು ತಂದೆ ಮನಸ್ಸನ್ನು ಬದಲಾವಣೆ ಮಾಡಬಹುದು ಅಂದರು. ನಾನು ಸಹಾ ಆ ಮಾತಿಗೆ ಒಪ್ಪಿಕೊಂಡು ಎಲ್ಲೂ ಹೋಗದೆ ತಂದೆಯೊಟ್ಟಿಗೆ ನಾನು ಇರುತ್ತಿದ್ದೆ. ಆಗ ಅವರು ಬೈಯಲಿಲ್ಲ, ಹೊಡೆಯಲಿಲ್ಲ, ಅಲ್ಲಲ್ಲಿ ಕರೆದುಕೊಂಡು ಹೋಗುತ್ತಿದ್ದರು, ಪೂಜೆಗಳನ್ನು ಮಾಡಿಸುತ್ತಿದ್ದರು, ಕೆಲಸ ಕಾರ್ಯಗಳನ್ನು ಮಾಡಿಸುತ್ತಿದ್ದರು. ಇದೇ ರೀತಿ 6-7 ತಿಂಗಳು ಅವರೊಟ್ಟಿಗೆ ಸಂತೋಷದಿಂದ ಇದ್ದೆನು. ನನ್ನ ತಂದೆಗಾದರೋ ನಾನು ಅವರ ಜೊತೆಯಲ್ಲೇ ಇರುವುದು ತುಂಬಾ ಸಂತೋಷ ಆಗುತ್ತಿತ್ತು. ಆ ಸಂತೋಷದಲ್ಲೇ ಅವರಿಗೆ ಯಾವ ಖಾಯಿಲೆ ಸಹಾ ಇರುತ್ತಿರಲಿಲ್ಲಾ ಚನ್ನಾಗಿ ಊಟ ಮಾಡುತ್ತಾ, ಕೆಲಸ ಕಾರ್ಯಗಳು ಮಾಡುತ್ತಾ ಇರುತ್ತಿದ್ದರು. ನಾನು ಪ್ರತಿ ರಾತ್ರಿ 11:00 ಘಂಟೆಗೆ ಎಲ್ಲರು ಮಲಗಿದಾಗ ಏಕಾಂತವಾಗಿ ಒಂದು ಕೋಣೆಯಲ್ಲಿ ಕುಳಿತು ಪ್ರಾರ್ಥನೆ ಮಾಡುತ್ತಿದ್ದೆ, ಬೈಬಲ್ ಓದಿಕೊಳ್ಳುತ್ತಿದ್ದೆ, ನಂತರ ಅನ್ಯಭಾಷೆಯಲ್ಲಿ

ಮಾತಾಡುತ್ತಿದ್ದೆ ಅದರಿಂದ ನನಗೆ ತುಂಬ ಸಂತೋಷ ಆಗುತ್ತಿತ್ತು.

ಆಗಾಗ ಆತ್ಮೀಕ ತಾಯಿಯು ನನ್ನ ತಂದೆಯವರಿಗೆ ತಿಳಿಯದೆ ನನ್ನ ಬಳಿ ಬಂದು ನನಗೆ ಆದರಣೆಯ ಮಾತುಗಳನ್ನು ಹೇಳಿ ಆತ್ಮೀಕವಾಗಿ ವಾಕ್ಯಗಳನ್ನು ಹೇಳುತ್ತಾ, ಅನೇಕ ಉತ್ತಮವಾದ ಸಾಕ್ಷಿಗಳಿಂದ ಬಲಪಡಿಸುತ್ತಿದ್ದರು. ಅದು ನನಗೆ ತುಂಬಾ ತುಂಬಾನೇ ಧೈರ್ಯ ಕೊಡುತ್ತಿತ್ತು. ಅವರು ನನಗಾಗಿ ಉಪವಾಸ ಮಾಡಿ ಪ್ರಾರ್ಥಿಸುತ್ತಿದ್ದರು. ವಯಕ್ತಿಕವಾಗಿ ನನಗಾಗಿ ಹೆಚ್ಚು ಪರಿಶ್ರಮ ಪಟ್ಟು ಪ್ರಾರ್ಥಿಸುತ್ತಿದ್ದರು. ನನ್ನ ಪಕ್ಷವಾಗಿ ಇದ್ದದ್ದು ಅವರು ಒಬ್ಬರೇ, ಅವರು ನನಗಾಗಿ ಆ ರೀತಿ ಪರಿಶ್ರಮ ಪಡದಿದ್ದರೆ ನಾನು ಈ ಹೊತ್ತಿಗೂ ಕರ್ತನ ಬಳಿಯಲ್ಲಿ ನಿಲ್ಲುವುದಕ್ಕೆ ನನಗೆ ಆಗುತ್ತಿರಲಿಲ್ಲವೆಂದು ನಾನು ಭಾವಿಸುತ್ತೇನೆ. ಆದರೂ ಇವರು ತೋರಿಸುತ್ತಿದ್ದ ಪ್ರೀತಿ ಅವರು ಮಾಡುತ್ತಿದ್ದ ಪ್ರಾರ್ಥನೆಗಳು ನನಗೆ ಆಶ್ಚರ್ಯವಾಗುತ್ತಿತ್ತು.

ನಾನು ಎಲ್ಲೂ ಹೋಗಬಾರದೆಂದು ನನ್ನ ತಂದೆ ನನಗೆ ಎಸ್.ಟಿ.ಡಿ. ಭೂತ್ ನೋಡಿಕೊಳ್ಳುವುದಕ್ಕೆ ಬಿಟ್ಟಿದ್ದರು. ನಾನು ಒಂದು ದಿನ ಎಸ್.ಟಿ.ಡಿ ಭೂತ್‌ನಲ್ಲಿ ಇದ್ದೆನು. ಆಗ ನನ್ನ ಆತ್ಮೀಕ ತಾಯಿಯವರು ನನಗೆ ಫೋನ್ ಮಾಡಿ ಕೇಳಿದರು ನಿಮ್ಮ ಅಪ್ಪ ಇಲ್ವಾ ಎಂದು, ಇಲ್ಲ ಎಲ್ಲೋ ಹೋಗಿದ್ದಾರೆ, ಬರೋದು ಸ್ವಲ್ಪ ತಡವಾಗುತ್ತದೆ ಎಂದು ಹೇಳಿದೆ, ಆಗ ಅವರು ನಾನು ಬರುತ್ತೇನೆ ನಿನ್ನನ್ನು ನೋಡಬೇಕು ಅಂದರು. ಸರಿ ಬನ್ನಿ ಎಂದು ಕರೆದೆನು. ಅವರು ಸುಮಾರು 11:30 ಅಥವಾ 12 ಘಂಟೆಗೆ ನಾನಿದ್ದಲ್ಲಿಗೆ ಬಂದರು. ಆಫೀಸ್‌ನಲ್ಲಿ ಕುಳಿತು ನನ್ನ ಬಳಿಯಲ್ಲಿ ಆತ್ಮೀಕವಾಗಿ ಮಾತಾಡುತ್ತಿದ್ದರು. ತತ್‌ಕ್ಷಣವೇ ನನ್ನ ತಂದೆ ದಾರಿಯಲ್ಲಿ ಬರುತ್ತಿರುವುದನ್ನು ನೋಡಿ ಪಕ್ಕದ ಅಂಗಡಿಯ ಅಂಕಲ್ ನಿನ್ನ ತಂದೆ ಬರುತ್ತಿದ್ದಾರೆ ಎಂದು ಹೇಳಿದರು. ನಾನು ನೋಡಿದೆ ಅವರು ಎಸ್.ಟಿ.ಡಿ. ಭೂತ್‌ಗೆ ತುಂಬಾ ಸಮೀಪವೇ ಇದ್ದಾರೆ, ಹೊರಗೆ ತಾಯಿಯನ್ನು ಕಳುಹಿಸಲು ಆಗುವುದೇ ಇಲ್ಲ. ಆಗ ಆಫೀಸ್ ಒಳಗೆ ಖುರ್ಚಿ ಹಿಂದೆ ತಾಯಿಗೆ ಬಚ್ಚಿಟ್ಟುಕೋ ಎಂದು ಹೇಳಿ ನಾನು ಹೊರಗೆ ಬಂದೆ. ತಂದೆಯವರು ಆಕೆ ಒಳಗೆ ಬಂದಿರುವುದು ತನಗೆ ಯಾರೋ ತಿಳಿಸಿರುವುದಾಗಿಯು ಎಲ್ಲಿ ಆಕೆ ಎಂದು ವಿಚಾರಿಸಿದರು - ಆಕೆಯೇ ನನಗೆ ಯೇಸು ಕ್ರಿಸ್ತನನ್ನು ಪರಿಚಯ ಮಾಡಿರುವುದು ಎಂದು ನನ್ನ ತಂದೆಗೆ ನನ್ನ ಆತ್ಮೀಕ ತಾಯಿಯ ಮೇಲೆ ಬಹಳ ಕೋಪವಿತ್ತು. ಎಲ್ಲಿ-ಎಲ್ಲಿ ಎಂದು ಎಲ್ಲಾ ಕಡೆ ಹುಡುಕಲು ಆರಂಭಿಸಿದರು. ನನಗೆ ನಡುಕ ಆರಂಭವಾಯಿತು. ಆಫೀಸ್ ಒಳಗೆ ಬಂದು ಖುರ್ಚಿಯಲ್ಲಿ ಕುಳಿತುಕೊಂಡರು. ಆದರೆ ಅವರ ಮುಂದೆ

ಅಗಲವಾಗಿ ಇರುವ ಟೇಬಲ್ ಬಳಿಯಿರುವ ಖುರ್ಚಿಯ ಹಿಂದೆಯೇ ನನ್ನ ಆತ್ಮೀಕ ತಾಯಿ ಬೊಗ್ಗಿಕೊಂಡು ಕುಳಿತಿದ್ದರು. ನನ್ನ ತಂದೆ ಬೊಗ್ಗಿ ನೋಡಿದರೆ ಕಾಣಿಸೇ ಕಾಣಿಸುತ್ತಾರೆ.. . . ಎಂತಹ ಸಂದಿಗ್ಧ ಪರಿಸ್ಥಿತಿ. ತಂದೆಯವರು 10 ನಿಮಿಷ ಅಲ್ಲಿ ಕುಳಿತು ನೋಡಿ, ಬೈದು ಹೊರಗೆ ಬಂದು ಖುರ್ಚಿಯಲ್ಲಿ ಕುಳಿತು ಹೊರಗೆ ಇದ್ದ ಅಂಕಲ್ ಬಳಿಯಲ್ಲೂ ಸಹ ಕೇಳಿದರು. ಅವರು ನನಗೆ ಗೊತ್ತಿಲ್ಲಪ್ಪಾ ಬಂದು ಹೋದ್ರು ಆದರೆ ಯಾರಂತ ಗೊತ್ತಾಗಲಿಲ್ಲ ಅಂದ್ರು.

ತಂದೆಯವರು ಮನೆಗೆ ಹೋಗದೆ ಮತ್ತೇ ನನ್ನ ಆತ್ಮೀಕ ತಾಯಿಯು ಬರಬಹುದೆಂದು ಅವರಿಗೆ ಸರಿಯಾಗಿ ಪಾಠ ಕಲಿಸುತ್ತೇನೆ ಎಂದು ಹೇಳುತ್ತಾ ಕೋಪದಿಂದ ಅಲ್ಲೇ ಕುಳಿತು ಕಾಯುತ್ತಿದ್ದರು. ನನ್ನ ಆತ್ಮೀಕ ತಾಯಿಯಾದರೋ ಒಳಗೆ ಬಚ್ಚಿಟ್ಟಿಕೊಂಡು ಕಷ್ಟ ಪಡುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ನಾನು ಭಯಪಟ್ಟುಕೊಂಡು ಮನಸ್ಸಿನಲ್ಲೇ ಪ್ರಾರ್ಥಿಸುತ್ತಿದ್ದೆ...

ಪ್ರಾರ್ಥಿಸುತ್ತಿದ್ದೇನೆ. ತಕ್ಷಣ ನನಗೆ ಆಲೋಚನೆ ಬಂತು. ಅಪ್ಪಾ ನಿನ್ನನ್ನು ಹುಡುಕಿಕೊಂಡರು ಈ ರೀತಿ ಬಂದಿದ್ದರು. ಮನೆ ಹತ್ತಿರ ಇರುತ್ತೇನೆ ಬಾ ಅಂತ ಹೇಳು ಅಂದರು. ಆಗ ತಂದೆಯವರು ಸರಿ ನಾನು ಹೋಗುತ್ತೇನೆ. ಮತ್ತೇ ಅವಳನ್ನ ಇಲ್ಲಿಗೆ ಸೇರಿಸಬೇಡಾ ಸರಿನಾ! ವೀರ ಕೈಯಲ್ಲಿ ಊಟ ಕಳುಹಿಸುತ್ತೇನೆ ಉಷಾರಾಗಿ ನೋಡಿಕೋ ಎಂದು ಹೇಳಿ ಹೋದರು ಮನೆಯಲ್ಲಿ ಕೆಲಸ ಮಾಡುತ್ತಿದ್ದ ವೀರಾ ಕೈಯಲ್ಲಿ ನನಗೆ ಊಟ ಕಳುಹಿಸಿದರು ಆಗ ನನಗೆ ಸಂತೋಷ ಆಯಿತು, ಅಪ್ಪ ಮನೆಯಲ್ಲಿದ್ದಾರೆ ಅಂತ! ನಾನು ಮತ್ತು ಆತ್ಮೀಕ ತಾಯಿ ಊಟ ಮಾಡಿದೆವು. ನಂತರ ಅವರು ಮನೆಗೆ ಹೋದರು. ಈ ಒಂದು ಗಂಡಾಂತರದಿಂದ ಯೇಸಪ್ಪಾ ನಮ್ಮನ್ನು ತಪ್ಪಿಸಿದರು ಇದೇ ರೀತಿಯಲ್ಲಿ ನನಗೆ ಎಷ್ಟೋ ತೊಂದರೆಗಳಿಂದ ನನ್ನನ್ನು ತಪ್ಪಿಸಿ ಕಾಪಾಡುತ್ತಿದ್ದರು. ನನ್ನ ಹೃದಯದಲ್ಲಿ ಯೇಸಪ್ಪನಿಗೆ ಮಾತ್ರ ಸ್ಥಾನಕೊಟ್ಟು; ಮೇಲಿನ ನೋಟಕ್ಕೆ ತಂದೆಯವರು ಹೇಳಿದ ರೀತಿ ಕೇಳಿಕೊಂಡು ನಡೆದುಕೊಳ್ಳುತ್ತಿದ್ದೆ.

ಒಂದು ದಿನ ತಕ್ಷಣವೇ ನನ್ನ ತಂದೆಯವರಿಗೆ ಹೃದಯದ ನೋವು ಬಂತು. ಆಗ ಅಣ್ಣ ನಾನು ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ತಂದೆಯವರಿಗೆ ಚಿಕಿತ್ಸೆ ಮಾಡಿದರು, ಯಾವ ಪ್ರಯೋಜನವಾಗಲಿಲ್ಲ ತಂದೆಯವರು ನನ್ನನ್ನು ಬಿಟ್ಟು ಈ ಲೋಕದ ಯಾತ್ರೆಯನ್ನು ಮುಗಿಸಿದರು. ಮನೆಯ್ಲಲಿ ನನ್ನವರೆಂದು ಇದ್ದ ಆ ಒಬ್ಬ ವ್ಯಕ್ತಿಯೂ ಸಹಾ ನನ್ನಿಂದ ದೂರವಾಯಿತು. ಅಂದಿನಿಂದ ನಿಜವಾದ ಪ್ರೀತಿ ನನಗೆ ಸಿಗಲೇ ಇಲ್ಲ ಆ ಮನೆಯಲ್ಲಿ. . . !

ತಂದೆ ಸತ್ತ 3ನೇ ದಿನದಲ್ಲಿ ನನಗೆ ಮನೆಯಲ್ಲಿ ಇರಲು ಆಗದೆ ಇರುವಾಗ ' 'ಗಾರೇ ಪಾಳ್ಯ'ದಲ್ಲಿ ಪ್ರರ್ಥನೆ ಕೂಟವಿತ್ತು. ಸರಿ ಅದಕ್ಕಾದರೂ ಹೋಗಿ ಬರೋಣ ಅಂತ ಆಲೋಚಿಸಿ ಬಸ್ಸ್‌ನಲ್ಲಿ ಹೋದೆ ಅಲ್ಲಿ ಇಳಿದು ದಾರಿಯನ್ನು ದಾಟುವಾಗ ವಾಗವಾಗಿ ಕಾರು ಬಂದು ಡಿಕ್ಕಿ ಹೊಡೆಯಿತು, ನಾನು ಸತ್ತೇ ಅಂದುಕೊಂಡು ಆದರೆ ಮುಖಕ್ಕೆ, ಕಾಲಿಗೆ ಏಟು ಬಿದ್ದಿತ್ತು. ಬೇರೆ ಏನೂ ಆಗಿರಲಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಪ್ರಾರ್ಥನೆಗೆ ಹೋಗಿ ಎಲ್ಲಾ ಮುಗಿಸಿಕೊಂಡು ಮನೆಗೆ ಹೋದೆನು. ಅಲ್ಲಿ 4ನೆ ಅಕ್ಕನಿಗೆ ಆಗಲೇ ವಿಷಯ ಗೊತ್ತಾಗಿ ಮನೆಗೆ ಬಂದಿದ್ದರು. ಅವರು ಗಾಭರಿಯಿಂದ ವಿಚಾರಿಸಿದರು. ನಾನು ಎಲ್ಲಾ ಹೇಳಿದೆ. ಆಗ ಅವರು ನೀನು ಸ್ವಲ್ಪ ದಿವಸಗಳು ಎಲ್ಲಿಗೂ ಹೋಗಬೇಡ. ನನ್ನ ಮಾತು ಕೇಳು; ಆ ಮೇಲೆ ಬೇಕಾದರೆ ನಿನ್ನಿಷ್ಟದ ಪ್ರಕಾರ ಚರ್ಚ್‌ಗೆ ಹೋಗಿವೆ ಎಂದು ಹೇಳಿದರು. ನಾನು ಅವರ ಮಾತಿಗೆ ಒಪ್ಪಿಕೊಂಡು ಎಲ್ಲಿಗೂ ಹೋಗದೆ ಮನೆಯಲ್ಲಿ ಹೇಳಿದ ಕೆಲಸಗಳನ್ನು ಮಾಡಿಕೊಳ್ಳುತ್ತಾ ಮಕ್ಕಳೊಂದಿಗೆ ಸಂತೋಷವಾಗಿ ಇರುತ್ತಿದ್ದೆ.

ನನ್ನ ತಂದೆಯವರು ಖರ್ಚಿಗೆ 1000 ರೂ ನನಗೆ ಬಾಡಿಗೆ ಹಣ ತಿಂಡಿಗೆ ಅಂತ ಹೇಳಿ ಕೊಡುತ್ತಿದ್ದರು. ಒಳ್ಳೊಳ್ಳೆ ಬಟ್ಟೆಗಳನ್ನು ತೆಗೆದುಕೊಡುತ್ತಿದ್ದರು. ಇದು ನನಗೆ ಅಭ್ಯಾಸ ತಂದೆ ನನ್ನ ಬಿಟ್ಟು ಹೋದ ಮೇಲೆ ಆ ರೀತಿಯಲ್ಲಿ ಇರಲು ಕಷ್ಟ ಅನ್ನಿಸಿತು. ಒಂದು ದಿನ ಬಾಡಿಗೆ ಹಣ ನಾನು ತೆಗೆದುಕೊಂಡು ಖರ್ಚು ಮಾಡಿದೆ. ಅದನ್ನು 4ನೇ ಅಕ್ಕನಿಗೆ ಹೇಳಿದೆ. ಅವರು ಪರವಾಗಿಲ್ಲ ಬಿಡು ಅಪ್ಪ ನಿನಗೆ ಬಿಟ್ಟಿರುವ ಬಾಡಿಗೆ ಹಂ ಅಲ್ವಾ ತೆಗೆದಿಕೋ ಏನೂ ಆಗಲ್ಲ ಎಂದು ಹೇಳಿದರು. ಸಂಜೆ ಆದಾಗ ಅಣ್ಣ ಮೆನೆಗೆ ಬಂದರು ಎಲ್ಲಾ ಬಾಡಿಗೆ ಬಂತಾ? ಎಂದು ಅತ್ತಿಗೆ ಅತ್ತಿರ ಕೇಳಿದರು ಆಗ ಅವರು ಎಲ್ಲಾ ಬಂತು. ಒಂದು ಅಂಗಡಿಯ ಬಾಡಿಗೆ ಮಾತ್ರ ಬಂದಿಲ್ಲ, ಅದು ಪದ್ಮ ತೆಗೆದುಕೊಂಡಿದ್ದಾಳೆ ಎಂದು ಹೇಳಿದರು. ಆಗ ನನ್ನನ್ನು ಅಣ್ಣ ಕರೆದರು. ಮನೆಯಲ್ಲಿ ಕೆಲಸದ ಆಳುಗಳು, ಮಕ್ಕಳು ಯಾರ್‍ಯಾರೋ ಇದ್ದಾರೆ, ಅವರ ಮುಂದೆ ಕರೆದು ಕೇಳಿದರು. ನಾನು ಹೌದು ತೆಗೆದುಕೊಂಡೆ ಖರ್ಚಾಯಿತು ಎಂದು ಹೇಳಿದೆ. ಆಗ ಅವರು ಇನ್ನು ಮುಂದೆ ಈ ರೀತಿ ಮಾಡಿದರೆ ಸಾಯಿಸಿಬಿಡುತ್ತೇನೆ. ನಿನ್ನ ಅಧಿಕಾರ ಇಲ್ಲಿ ನಡೆಯಲ್ಲಾ, ಅದು ಅಪ್ಪ ಮುಂದೆ ಮಾತ್ರ ಇತ್ತು. ಈಗ ನಾನು ಹೇಳಿದ ರೀತಿ ನೀನು ಕೇಳಬೇಕು ಅಷ್ಟೇ ಅಂತ ಹೇಳಿ ಕಪಾಳಕ್ಕೆ ಒಂದು ಏಟು ಹೊಡೆದು ಎಲ್ಲರ ಮುಂದೆ ಹೀನವಾಗಿ ಬೈದರು, ಆ ಸಮಯದಲ್ಲಿ ನನ್ನನ್ನು ಸಂತೈಸಲು ಯಾರೂ ಬರಲಿಲ್ಲ, ಆಗ ನಾನು ಪ್ರಾರ್ಥಿಸಿಕೊಂಡು ದೇವರ ಉತ್ತರ ತೆಗೆದುಕೊಂಡು ನಾನು ಮೆನೆಬಿಟ್ಟು ಹೊರಗೆ ಬರಲು ತೀರ್ಮಾನ ಮಾಡಿದೆ, ಮನೆ ಬಿಟ್ಟು

ಬರುವಾಗ ನಾಲ್ಕು ಮಕ್ಕಳು ನನ್ನ ಕೈ ಹಿಡಿದು ಗೋಳಾಡಿರು, ನೀವು ಮನೆಬಿಟ್ಟು ಹೋಗಬೇಡಿ ಅಂಟಿ, ನಾವು ನಿಮ್ಮನ್ನ ನೋಡಿಕೊಳ್ಳುತ್ತೇವೆ, ನಮ್ಮನ್ನು ಬಿಟ್ಟು ಹೋಗಬೇಡಿ ಎಂದು ಮಕ್ಕಳು ಅತ್ತುಕೊಂಡರು. ಆಗ ಅತ್ತಿಗೆ ಏನೂ ಮಾತಾಡಲಿಲ್ಲ. ಅಣ್ಣ ಬೆಳಗ್ಗೆ ಜಾಬಿಂಗ್‌ಗೆ ಹೋಗುತ್ತಿದ್ದರು. ಅವರು ಆಗ ಮನೆಯಲ್ಲಿ ಇರಲಿಲ್ಲ. ನಾನು ಎಲ್ಲವನ್ನೂ ಬಿಟ್ಟು ಬರಿಗೈಯಲ್ಲಿ ಅನಾಥಳಾಗಿ ಮನೆಯಿಂದ ಹೊರಗೆ ಬಂದೆನು. ನನಗೆ ಅಂತ ಹೇಳೋರು, ಕೇಳೋರು ಯಾರೂ ಇರಲಿಲ್ಲ. ಅಂತ ಸಮಯದಲ್ಲಿ ಯೇಸಪ್ಪಾ ನನಗೆ ಸರ್ವಸ್ವವಾಗಿ ಆತುಕೊಂಡರು. ಸ್ನೇಹಿತನಾಗಿ ಒಂದೊಂದು ಮಾರ್ಗವನ್ನು ತಿಳಿಸಲು ಆರಂಭಿಸಿದರು.

ನಾನು ಮನೆ ಬಿಟ್ಟ ಮೇಲೆ ನೇರವಾಗಿ 4ನೇ ಅಕ್ಕನ ಮನೆಗೆ ಹೋಗಿ ನಡೆದ ಸಂಗತಿಗಳನ್ನು ತಿಳಿಸಿದೆ. ಆಗ ಅವರು ಸರಿ ಎಲ್ಲೂ ಹೋಗಬೇಡ ಇಲ್ಲೇ ಇರು ಅವರು ಬಂದರೆ ನಾನು ಮಾತಾಡುತ್ತೇನೆ ಅಂತ ಹೇಳಿ ಮನೆಯಲ್ಲಿ ಇರಿಸಿಕೊಂಡರು. ನಾನು ಆ ಮನೆಯಲ್ಲಿರುವಾಗ ಅತ್ತಿಗೆ ಬಂದು - ಬಾ ಮನೆಗೆ ಎಂದು ಕರೆದರು. ಆಗ ನಾನು ಮನೆಗೆ ಬರಲ್ಲ; ಅಪ್ಪ ನನಗೆ ಕೊಟ್ಟಿರುವ ಮನೆ ಖಾಲಿ ಮಾಡಿಸಿಕೊಡಿ ಅಲ್ಲಿ ಇರುತ್ತೇನೆ. ನನಗೆ ಯಾರ ಸಹವಾಸ ಬೇಡ, ನನ್ನಿಂದ ಯಾರಿಗೂ ತೊಂದರೆ ಆಗೋದು ಬೇಡ ಅಂದು ಹೇಳಿದೆ. ಅದಕ್ಕೆ ಅವರು ಕೋಪ ಮಾಡಿಕೊಂಡು ಅದೇ ರೀತಿ ಅಣ್ಣ ಹತ್ತಿರ ಹೇಳಿದರಂತೆ ಅದಕ್ಕೆ ಬಂದ ಉತ್ತರ - ಅವಳಿಗೆ ಕೊಬ್ಬು ಇಳಿದು, ಹಸಿವು ಅನ್ನೋದು ಗೊತ್ತಾಗುವಾಗ ಅವಳೇ ಮನೆಗೆ ಬರುತ್ತಾಳೆ. ಅವಳು ಹೇಳೋ ರೀತಿ ಯಾವುದೂ ಆಗಲ್ಲ; ನಾನು ಹೇಳೋ ರೀತಿ ಕೇಳಿಕೊಂಡು ಇದ್ರೆ ಮಾತ್ರ, ಇಲ್ಲ ಅಂದ್ರೆ ಏನೂ ಇಲ್ಲ ಎಂದು ಹೇಳಿದರು. ನಂತರ ಯಾರೂ ಬರಲಿಲ್ಲ ಏನೂ ಕೇಳಲಿಲ್ಲ ಸುಮ್ಮನಾದರು. ನಾನು ಅಕ್ಕನ ಮನೆಯಲ್ಲಿ ಇದ್ದುಕೊಂಡು ಚರ್ಚ್‌ಗೆ ಹೋಗುತ್ತಾ ಬರುತ್ತಾ ಇದ್ದೆ. ಒಂದೊಂದು ದಿನ ಬೇರೆ ಅಕ್ಕನ ಮನೆಗೂ ಹೋಗುತ್ತಿದ್ದೆ ಆದರೆ ಅಲ್ಲಿ ಒಂದೊಂದು ರೀತಿಯಲ್ಲಿ ಚುಚ್ಚಿ ಮಾತಾಡುತ್ತಿದ್ದರು. ಆಸ್ತಿ ಬಗ್ಗೆ ವಿಚಾರಿಸುತ್ತಿದ್ದರು, ಮನೆ ಆಳು ರೀತಿಯಲ್ಲಿ ನೋಡುತ್ತಿದ್ದರು. ನನಗೆ ತುಂಬಾ ದುಃಖ ಆಗುತ್ತಿತ್ತು. ಅಕ್ಕನ ಮಕ್ಕಳು ಸರಿಯಾಗಿ ಪ್ರೀತಿ ಮಾಡುತ್ತಿರಲಿಲ್ಲ ಮೇಲು ಕೀಳು ಅನ್ನುವ ರೀತಿಯಲ್ಲಿ ನನ್ನನ್ನು ನೋಡುತ್ತಿದ್ದರು. ತಂದೆ ಇರುವಾಗ ಎಲ್ಲಾ ಮಕ್ಕಳು ಪ್ರೀತಿಯಿಂದನೇ ನೋಡುತ್ತಿದ್ದರು. ಆ ಮೇಲೆ ಅವರ ನಿಜ ಸ್ವಭಾವ ತೋರಿಸುತ್ತಿದ್ದರು. ಆದರೆ 4ನೇ ಅಕ್ಕನ ಮಗಳು ಮಾತ್ರ ನನ್ನನ್ನು ತುಂಬಾ ಚೆನ್ನಾಗಿ ನೋಡಿಕೊಳ್ಳುತ್ತಿದ್ದಳು, ಅದರಿಂದ ಅವರ ಮನೆಯಲ್ಲಿ ಮಾತ್ರ ಹೆಚ್ಚು ತಿಂಗಳು ಇರಲು ಸಾಧ್ಯವಾಯಿತು. ನಾನು ಮಾಡದೇ ಇರುವ ತಪ್ಪನ್ನು ನನ್ನ

ಎ ತತ್‌ಕ್ಷಣ ನನಗೆ ಜ್ಞಾಪಕಕ್ಕೆ ಬಂತು. ಅಪ್ಪನನ್ನು ನೋಡಲು ಬಂದಂತಹ ವ್ಯಕ್ತಿ ಅವರಿಗಾಗಿ ಕಾಯುತ್ತಿದ್ದೇನೆಂದು ಹೇಳಿದ್ದು. ನಾನು 'ಅಪ್ಪಾ ನಿನ್ನನ್ನು ಹುಡುಕಿಕೊಂಡು ನಿನಗೆ ಪ್ರಿಯವಾದ ಬಂಧುಗಳು ಬಂದಿದ್ದಾರೆಂದು ಅವರು ಇಲ್ಲೇ ಮನೆ ಹತ್ತಿರಲ್ಲಿ ಇರುತ್ತೇನೆ ನಿನ್ನ ತಂದೆ ಬಂದರೆ ಕಳುಹಿಸು ಎಂದು ಹೇಳಿದರೆಂದು' ಹೇಳಿದೆ. ಆಗ ತಂದೆಯವರು ಸರಿ ನಾನು ಹೋಗಿ ಅವರ ಬಳಿಯಲ್ಲಿ ಮಾತನಾಡುತ್ತೇನೆ, ಮತ್ತೇ ಮೇರಿಕುಟ್ಟಿಯನ್ನು ಇಲ್ಲಿಗೆ ಸೇರಿಸಬೇಡಾ ಸರಿನಾ! ವೀರನ ಕೈಯಲ್ಲಿ ಊಟ ಕಳುಹಿಸುತ್ತೇನೆ ಉಷಾರಾಗಿ ನೋಡಿಕೋ ಎಂದು ಹೇಳಿ ಅಲ್ಲಿಂದ ಹೊರಟು ಹೋದರು. ಅಬ್ಬಾ! ನನ್ನ ಯೇಸಪ್ಪಾ ಎಂಥ ದೊಡ್ಡ ಅದ್ಭುತವನ್ನು ಮಾಡಿದರೆಂದು ನಾವಿಬ್ಬರೂ ದೇವರಿಗೆ ಸ್ತೋತ್ರ ಮಾಡಿದೆವು.

ಮನೆಯಲ್ಲಿ ಕೆಲಸ ಮಾಡುತ್ತಿದ್ದ ವೀರಾ ಕೈಯಲ್ಲಿ ನನಗೆ ಊಟ ಕಳುಹಿಸಿದರು ಆಗ ನನಗೆ ಸಂತೋಷ ಆಯಿತು, ಅಪ್ಪ ಮನೆಗೆ ಹೋಗಿದ್ದಾರೆ ಎಂದು ತಿಳಿದು, ನಾನು ಮತ್ತು ಆತ್ಮೀಕ ತಾಯಿ ಊಟ ಮಾಡಿದೆವು. ನಂತರ ಅವರು ಮನೆಗೆಹೋದರು. ಈ ಒಂದು ಗಂಡಾಂತರದಿಂದ ಯೇಸಪ್ಪಾ ನಮ್ಮನ್ನು ತಪ್ಪಿಸಿದರು. ಇದೇ ರೀತಿಯಲ್ಲಿ ನನಗೆ ದೇವರು ಎಷ್ಟೋ ತೊಂದರೆಗಳಿಂದ ತಪ್ಪಿಸಿ ಕಾಪಾಡುತ್ತಿದ್ದರು.

ನನ್ನ ಹೃದಯದಲ್ಲಿ ಯೇಸಪ್ಪನನ್ನು ಆರಾಧಿಸುತ್ತಾ, ಮೇಲಿನ ನೋಟಕ್ಕೆ ತಂದೆಯವರು ಹೇಳಿದ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದೆ. ಯಾಕೆಂದರೆ ದೇವರು ದಶಾಜ್ಞೆಗಳಲ್ಲಿ -"ತಂದೆ-ತಾಯಿಯನ್ನು ಸನ್ಮಾನಿಸಬೇಕು" ಎಂದು ಬರೆದಿದ್ದಾರೆ. ಆ ವಾಕ್ಯಕ್ಕೆ ನಾನು ಮಣಿದು ಅವರು ಹೇಳಿದ ರೀತಿ ನಡೆದುಕೊಳ್ಳುತ್ತಿದ್ದೆ.

ಇದೇ ರೀತಿ ಇಕ್ಕಟ್ಟಿನಲ್ಲಿ ನಾನು ನಡೆಯುತ್ತಿದ್ದೆ. ಆದರೆ ಒಂದು ದಿನ ತತ್‌ಕ್ಷಣವೇ ನನ್ನ ತಂದೆಯವರಿಗೆ 'ಹೃದಯದ ನೋವು' ಬಂದಿತು. ಆಗ ಅಣ್ಣ ನಾನು ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋದೆವು. ಅಲ್ಲಿ ತಂದೆಯವರಿಗೆ ಚಿಕಿತ್ಸೆ ಮಾಡಿದರು. ಆದರೆ ಯಾವ ಪ್ರಯೋಜನವಾಗಲಿಲ್ಲ ತಂದೆಯವರು ನನ್ನನ್ನು ಬಿಟ್ಟು ಈ ಲೋಕದ ಯಾತ್ರೆಯನ್ನು ಮುಗಿಸಿದರು ಎಂದು ತಿಳಿಯಿತು. ಓಹೋ ನನ್ನಲ್ಲಿ ತಡೆಯಲಾರದ ದುಃಖ ಬಂದಿತು, ಈ ಅಗಲುವಿಕೆಯನ್ನು ನಾನು ಸಹಿಸಲಾಗಲೇ ಇಲ್ಲ. ನನ್ನ ಮನೆಯಲ್ಲಿ ನನ್ನವರೆಂದು ಇದ್ದದ್ದು ಒಂದೇ ಜೀವವೆಂದರೆ ಅದು ನನ್ನ ತಂದೆ. ನನ್ನ ತಂದೆಯನ್ನು ಕಳೆದುಕೊಂಡ ಕ್ಷಣ ನನಗೆ ಈ ಲೋಕವೇ ಶೂನ್ಯವಾಗಿ ಕಾಣಿಸಿತು. ಅಯ್ಯೋ ನನಗೆ ಇನ್ಯಾರಿದ್ದಾರೆಂದು ಗಟ್ಟಿಯಾಗಿ ಅಳತೊಡಗಿದೆ. ಓಹೋ! ಈ ದುಃಖ ಹೇಗೆ

ಸಹಿಸುವುದೋ ನನಗೆ ಗೊತ್ತಾಗಲೇ ಇಲ್ಲ. ಇದೆಂತಹ ಶೋಧನೆ. 3 ದಿನ ನಾನು ಎಡಬಿಡದೇ ಅಳುತ್ತಲೇ ಇದ್ದಂತಹ ಸಮಯದಲ್ಲಿ. ನನ್ನ ಪರಲೋಕದ ತಂದೆ ನನ್ನ ಬಳಿಯಲ್ಲಿ ಮಾತನಾಡಿದರು. "ಈ ಲೋಕದ ತಂದೆ ನಿನ್ನ ಬಿಟ್ಟು ಹೋಗಿದ್ದಾರೆ, ಆದರೆ ನಾನು ನಿನ್ನನ್ನು ಎಂದಿಗೂ ಬಿಟ್ಟು ಹೋಗುವುದೇ ಇಲ್ಲ, ನಿರಂತರವಾಗಿ ನಿನ್ನೊಂದಿಗೆ ಇರುತ್ತೇನೆ" ಎಂದು ಹೇಳಿ ನನ್ನ ಕರ್ತನು ನನ್ನನ್ನು ಬಹುವಾಗಿ ಸಂತೈಸಿ ಸಮಾಧಾನ ಪಡಿಸಿದರು. ಆ ಸಮಾಧಾನವೇ ಈ ಹೊತ್ತಿಗೂ ನನ್ನನ್ನು ಕರ್ತನ ಬಳಿಯಲ್ಲಿ ಬಲವಾಗಿ ನಡೆಸುತ್ತಿದೆ.

## 14. ಮನೆಯನ್ನು ತ್ಯಜಿಸಿದ ಸಂಧರ್ಭ

ನನ್ನ ತಂದೆ ಸತ್ತ 3ನೇ ದಿನದಲ್ಲೇ ನನಗೆ ಮನೆಯಲ್ಲಿ ಇರಲು ಆಗದೆ ಇರುವಾಗ 'ಗಾರೆ ಪಾಳ್ಯ'ದಲ್ಲಿ ಪ್ರಾರ್ಥನೆ ಕೂಟವಿತ್ತು. ಸರಿ ಅದಕ್ಕಾದರೂ ಹೋಗಿ ಬರೋಣ ಎಂದು ಆಲೋಚಿಸಿ ಬಸ್‌ನಲ್ಲಿ ಹೋದೆ. ಅಲ್ಲಿ ಇಳಿದು ದಾರಿಯನ್ನು ದಾಟುವಾಗ ವೇಗವಾಗಿ ಕಾರು ಬಂದು ಡಿಕ್ಕಿ ಹೊಡೆಯಿತು, ನಾನು ಸತ್ತೇ ಅಂದುಕೊಂಡೆ ಆದರೆ ಮುಖಕ್ಕೆ, ಕಾಲಿಗೆ ಏಟು ಬಿದ್ದಿತ್ತು. ಬೇರೆ ಏನೂ ಆಗಿರಲಿಲ್ಲ. ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದು, ಪ್ರಾರ್ಥನೆಗೆ ಹೋಗಿ ಎಲ್ಲಾ ಮುಗಿಸಿಕೊಂಡು ಮನೆಗೆ ಹೋದೆನು. ಅಲ್ಲಿ 4ನೇ ಅಕ್ಕನಿಗೆ ಆಗಲೇ ವಿಷಯ ಗೊತ್ತಾಗಿ ಮನೆಗೆ ಬಂದಿದ್ದರು. ಅವರು ಗಾಭರಿಯಿಂದ ವಿಚಾರಿಸಿದರು. ನಾನು ಎಲ್ಲಾ ಹೇಳಿದೆ. ಆಗ ಅವರು ನೀನು ಸ್ವಲ್ಪ ದಿವಸಗಳು ಎಲ್ಲಿಗೂ ಹೋಗಬೇಡ. ನನ್ನ ಮಾತು ಕೇಳು; ಆ ಮೇಲೆ ಬೇಕಾದರೆ ನಿನ್ನಿಷ್ಟದ ಪ್ರಕಾರ ಚರ್ಚ್‌ಗೆ ಹೋಗು ಎಂದು ಹೇಳಿದರು. ನಾನು ಅವರ ಮಾತಿಗೆ ಒಪ್ಪಿಕೊಂಡು ಎಲ್ಲಿಗೂ ಹೋಗದೆ ಮನೆಯಲ್ಲಿ ಹೇಳಿದ ಕೆಲಸಗಳನ್ನು ಮಾಡಿಕೊಳ್ಳುತ್ತಾ ಮಕ್ಕಳೊಂದಿಗೆ ಇರುತ್ತಿದ್ದೆ.

ನನ್ನ ತಂದೆಯವರು ಖರ್ಚಿಗೆ 1000ರೂ ನನಗೆ ಬಾಡಿಗೆ ಹಣವನ್ನು ನನ್ನ ತಿಂಡಿಗೋಸ್ಕರವಾಗಿಯೂ ನನಗಾಗಿ ಎಂದು ಹೇಳಿ ಕೊಡುತ್ತಿದ್ದರು. ನನಗೆ ಒಳ್ಳೊಳ್ಳೆ ಬಟ್ಟೆಗಳನ್ನು ಕೊಡಿಸುತ್ತಿದ್ದರು. ಇದು ನನಗೆ ಅಭ್ಯಾಸವಾಗಿತ್ತು. ತಂದೆ ನನ್ನನ್ನು ಬಿಟ್ಟು ಹೋದ ಮೇಲೆ, ಒಂದು ದಿನ ಬಾಡಿಗೆ ಹಣ 1000ರೂ ಅನ್ನು ಯಾವಾಗಲೂ ತೆಗೆದುಕೊಳ್ಳುವ ಹಾಗೆ ನಾನು ತೆಗೆದುಕೊಂಡು ಖರ್ಚು ಮಾಡಿದೆ. ಅದನ್ನು 4ನೇ ಅಕ್ಕನಿಗೆ ತಿಳಿಸಿದೆನು. ಅವರು ಪರವಾಗಿಲ್ಲ ಬಿಡು ಅಪ್ಪ ನಿನಗೆ ಬಿಟ್ಟಿರುವ ಬಾಡಿಗೆ ಹಣ ಅಲ್ವಾ ತೆಗೆದಿಕೋ ಏನೂ ಆಗಲ್ಲ ಎಂದು

ಹೇಳಿದರು. ಸಂಜೆ ಆದಾಗ ಅಣ್ಣ ಮನೆಗೆ ಬಂದರು. ಎಲ್ಲಾ ಬಾಡಿಗೆ ಬಂತಾ? ಎಂದು ಅತ್ತಿಗೆ ಬಳಿಯಲ್ಲಿ ಕೇಳಿದರು ಆಗ ಅವರು ಎಲ್ಲಾ ಬಂದಿತು. ಒಂದು ಅಂಗಡಿದು ಮಾತ್ರ ಬಂದಿಲ್ಲ. ಅದು ಪದ್ಮ ತೆಗೆದುಕೊಂಡಿದ್ದಾಳೆ ಎಂದು ಹೇಳಿದರು. ಆಗ ನನ್ನನ್ನು ಅಣ್ಣ ಕರೆದರು. ಮನೆಯಲ್ಲಿ ಕೆಲಸದ ಆಳುಗಳು, ಮಕ್ಕಳು ಯಾರ್‍ಯಾರೋ ಇದ್ದಾರೆ. ಅವರ ಮುಂದೆ ಕರೆದು ಬಾಡಿಗೆ ಹಣದ ವಿಚಾರವನ್ನು ಕೇಳಿದರು. ನಾನು ಹೌದು ತೆಗೆದುಕೊಂಡೆ ಖರ್ಚಾಯಿತು ಎಂದು ಹೇಳಿದೆ. ಆಗ ಅವರು ಇನ್ನು ಮುಂದೆ ಈ ರೀತಿ ಮಾಡಿದರೆ ಸಾಯಿಸಿಬಿಡುತ್ತೇನೆ ನಿನ್ನ ಅಧಿಕಾರ ಇಲ್ಲಿ ನಡೆಯಲ್ಲಾ, ಅದು ಅಪ್ಪ ಇದ್ದಾಗ ಮಾತ್ರ. ಈಗ ನಾನು ಹೇಳಿದ ರೀತಿ ನೀನು ಕೇಳಬೇಕು ಅಷ್ಟೇ ಅಂತ ಹೇಳಿ ಕೆನ್ನೆಗೆ ಬಲವಾಗಿ ಒಂದು ಏಟು ಹೊಡೆದು ಎಲ್ಲರ ಮುಂದೆ ಹೀನಾಯವಾಗಿ ಬೈದರು, ಆ ಸಮಯದಲ್ಲಿ ನನ್ನನ್ನು ಸಂತೈಸಲು ಯಾರೂ ಬರಲಿಲ್ಲ. ಈ ಘಟನೆ ನನ್ನ ಮನಸ್ಸಿನಲ್ಲಿ ತುಂಬಾ ವೇದನೆ ಉಂಟುಮಾಡಿತು.

ಇದೆಲ್ಲಾ ನಡೆದ ಮೇಲೆ ನಾನು ದೇವರ ಬಳಿ ಪ್ರಾರ್ಥಿಸಿದೆ ಆ ರಾತ್ರಿ ನಾನು ತುಂಬಾ ದೇವರ ಬಳಿ ಅಳುತ್ತಾ ಇದ್ದೆ, ಇಷ್ಟೆಲ್ಲಾ ಅವಮಾನವಾಯಿತಲ್ಲಾ ನಾನೇನು ಮಾಡಲಿ, ಈ ವ್ಯಕ್ತಿಗಳು ನನ್ನನ್ನು ನಿನ್ನ ಬಳಿಯಲ್ಲೂ ಇರಲು ಬಿಡುವುದಿಲ್ಲ, ಎಂದೆಲ್ಲಾ ನನ್ನ ದುಃಖವನ್ನು ದೇವರ ಬಳಿಯಲ್ಲಿ ಹೇಳಿಕೊಂಡೆನು. ದೇವರಿಂದ ಒಂದು ಶಬ್ಧ ಕೇಳಿಸಿತು. "ನಾನು ನಿನ್ನ ಜೊತೆಯಲ್ಲಿದ್ದೇನೆ ಎನ್ನುವ ನಂಬಿಕೆ ನಿನ್ನಲ್ಲಿದೆಯಾ, ಒಂಟಿಯಾದರೂ ಕಷ್ಟವಾದರೂ ನೀನು ನನಗೋಸ್ಕರ ಜೀವಿಸುತ್ತಾಯಾ" ಎಂದು ಪ್ರಶ್ನೆ ಕೇಳಿದರು. ನಾನು "ಹೌದು ಕರ್ತನೇ, ನಾನು ನಿನಗೋಸ್ಕರ ಜೀವಿಸುತ್ತೇನೆ ಎಷ್ಟೇ ಕಷ್ಟ ಆದ್ರೂ ಏನೇ ನಷ್ಟ ಆದ್ರೂ ನಾನು ನಿನ್ನ ಸೇವೆ ಮಾಡುತ್ತೇನೆ" ಎಂದು ಒಪ್ಪಿಸಿಕೊಟ್ಟೆನು ಕರ್ತನಾದರೋ ಹಾಗಾದರೆ "ನೀನು ಮನೆ ಬಿಟ್ಟು ಹೋಗು, ನಾನೇ ನಿನ್ನ ಜೊತೆ ಇದ್ದು ನಡೆಸುತ್ತೇನೆ" ಎಂದರು ನಾನು ತತ್‌ಕ್ಷಣವೇ ಗಟ್ಟಿಯಾದ ತೀರ್ಮಾನ ತೆಗೆದುಕೊಂಡು ಮಲಗಿದೆ. ಬೆಳಗ್ಗೆ ಬೇಗ ಎದ್ದು ಹೊರಹೋಗಲು ಸಿದ್ಧವಾದೆ ನನ್ನ ಅಣ್ಣನು ಜಾಗಿಂಗ್‌ಗೆ ಹೋದನು. ಆ ಸಮಯವೇ ನಾನು ಕಾಯ್ದುಕೊಂಡು ನಾನು ಮನೆಬಿಟ್ಟು ಹೊರಬರಲು ಹೊರಟೆನು, ಆದರೆ ನನ್ನ ಅಣ್ಣನ ಮಕ್ಕಳಿಗೆ ನಾನು ಹೋಗುತ್ತೇನೆಂದು ತಿಳಿಸಿದೆ ಆ ನಾಲ್ಕು ಮಕ್ಕಳು ನನ್ನ ಕೈ ಹಿಡಿದು ಗೋಳಾಡಿದರು, ನೀವು ಮನೆಬಿಟ್ಟು ಹೋಗಬೇಡಿ ಆಂಟಿ, ನಾವು ನಿಮ್ಮನ್ನು ನೋಡಿಕೊಳ್ಳುತ್ತೇವೆ, ನಮ್ಮನ್ನು ಬಿಟ್ಟು ಹೋಗಬೇಡಿ ಎಂದು ಮಕ್ಕಳು ಬಹಳವಾಗಿ ಅತ್ತರು. ಆಗ ಅತ್ತಿಗೆ ಇದೆಲ್ಲಾ ಅವರಿಗೆ ಕೇಳಿಸುತ್ತಿದ್ದರೂ ಏನೂ ಮಾತಾಡಲಿಲ್ಲ. ನಾನು ಎಲ್ಲವನ್ನೂ ಬಿಟ್ಟು ಬರಿಗೈಯಲ್ಲಿ ಒಂದು ಜೊತೆ

ಬಟ್ಟೆಯಾದರೂ ಸಹ ತೆಗೆದುಕೊಳ್ಳದೆ, ಅನಾಥಳಾಗಿ ದಿಕ್ಕರಿಸಲ್ಪಟ್ಟವಳಾಗಿ ಮನೆಯಿಂದ ಹೊರಗೆ ಬಂದೆನು. ನನಗೆ ಅಂತ ಹೇಳೋರು, ಕೇಳೋರು ಯಾರೂ ಇರಲಿಲ್ಲ. ಆ ಸಮಯದಲ್ಲಿ ಯೇಸಪ್ಪಾನೆ ನನಗೆ ಸರ್ವಸ್ವವಾಗಿ ನನ್ನನ್ನು ಆತುಕೊಂಡರು. ಸ್ನೇಹಿತನಾಗಿ ಒಂದೊಂದು ಮಾರ್ಗವನ್ನು ತಿಳಿಸಲು ಪ್ರಾರಂಭಿಸಿದರು.

"ನೀನು ಸ್ವದೇಶವನ್ನೂ ಬಂಧುಬಳಗವನ್ನೂ ತಂದೆಯ ಮನೆಯನ್ನೂ ಬಿಟ್ಟು ನಾನು ತೋರಿಸುವ ದೇಶಕ್ಕೆ ಹೊರಟು ಹೋಗು. ನಾನು ನಿನ್ನನ್ನು ದೊಡ್ಡ ಜನಾಂಗವಾಗುವಂತೆ ಮಾಡಿ ಆಶೀರ್ವದಿಸಿ ನಿನ್ನ ಹೆಸರನ್ನು ಪ್ರಖ್ಯಾತಿಗೆ ತರುವೆನು." (ಆದಿ 12:1) ಅಬ್ರಹಾಮನಿಗೆ ದೇವರು ಹೇಳಿದ ಪ್ರಕಾರ ಅವನನ್ನು ಮನೆಯಿಂದ ಹೊರತಂದ ರೀತಿಯಲ್ಲಿ ನನ್ನನ್ನು ಹೊರತಂದರು.

ನಾನು ಮನೆ ಬಿಟ್ಟ ಮೇಲೆ ನೇರವಾಗಿ 4ನೇ ಅಕ್ಕನ ಮನೆಗೆ ಹೋಗಿ ನಡೆದ ಸಂಗತಿಗಳನ್ನು ತಿಳಿಸಿದೆ. ಆಗ ಅವರು ಸರಿ ಎಲ್ಲೂ ಹೋಗಬೇಡ ಇಲ್ಲೇ ಇರು ಅವರು ಬಂದರೆ ನಾನು ಮಾತಾಡುತ್ತೇನೆ ಎಂದು ಹೇಳಿದರು ಮನೆಯಲ್ಲಿ ಇರಿಸಿಕೊಂಡರು. ನಾನು ಆ ಮನೆಯಲ್ಲಿರುವಾಗ ಅತ್ತಿಗೆ ಬಂದು-ಬಾ ಮನೆಗೆ ಎಂದು ಕರೆದರು. ಆಗ ನಾನು ಮನೆಗೆ ಬರಲ್ಲ; ಅಪ್ಪ ನನಗೆ ಕೊಟ್ಟಿರುವ ಮನೆ ಖಾಲಿ ಮಾಡಿಸಿಕೊಡಿ ಅಲ್ಲಿ ಇರುತ್ತೇನೆ. ನನಗೆ ಯಾರ ಸಹವಾಸ ಬೇಡ, ನನ್ನಿಂದ ಯಾರಿಗೂ ತೊಂದರೆ ಆಗೋದು ಬೇಡ ಅಂದು ಹೇಳಿದೆ. ಅದಕ್ಕೆ ಅವರು ಕೋಪ ಮಾಡಿಕೊಂಡು ಅದೇ ರೀತಿ ಅಣ್ಣ ಹತ್ತಿರ ಹೇಳಿದರಂತೆ ಅದಕ್ಕೆ ಬಂದ ಉತ್ತರ- ಅವಳಿಗೆ ಕೊಬ್ಬು ಇಳಿದು, ಹಸಿವು ಅನ್ನೋದು ಗೊತ್ತಾಗುವಾಗ ಅವಳೇ ಮನೆಗೆ ಬರುತ್ತಾಳೆ. ಅವಳು ಹೇಳೋ ರೀತಿ ಯಾವುದೂ ಆಗಲ್ಲ; ನಾನು ಹೇಳೋ ರೀತಿ ಕೇಳಿಕೊಂಡು ಇದ್ರೆ ಇರಲಿ, ಎಂದು ಹೇಳಿದರಂತೆ, ನಂತರ ಯಾರೂ ಬರಲಿಲ್ಲ. ಏನೂ ಕೇಳಲಿಲ್ಲ ಸುಮ್ಮನಾದರು. ನಾನು ಅಕ್ಕನ ಮನೆಯಲ್ಲಿ ಇದ್ದುಕೊಂಡು ಚರ್ಚ್‌ಗೆ ಹೋಗುತ್ತಾ ಬರುತ್ತಾ ಇದ್ದೆ. ಒಂದೊಂದು ದಿನ ಬೇರೆ ಅಕ್ಕಂದಿರ ಮನೆಗೂ ಹೋಗುತ್ತಿದ್ದೆ. ಆದರೆ ಎಲ್ಲಾ ಕಡೆಯಲ್ಲೂ ಒಂದೊಂದು ರೀತಿಯಲ್ಲಿ ಚುಚ್ಚಿ ಮಾತಾಡುತ್ತಿದ್ದರು. ಆಸ್ತಿ ಬಗ್ಗೆ ವಿಚಾರಿಸುತ್ತಿದ್ದರು. ಮನೆ ಆಳಿನ ರೀತಿಯಲ್ಲಿ ನೋಡುತ್ತಿದ್ದರು. ನನಗೆ ತುಂಬಾ ದುಃಖ ಆಗುತ್ತಿತ್ತು. ಅಕ್ಕನ ಮಕ್ಕಳು ಸರಿಯಾಗಿ ಪ್ರೀತಿ ಮಾಡುತ್ತಿರಲಿಲ್ಲ ಮೇಲು-ಕೀಳು ಅನ್ನುವ ರೀತಿಯಲ್ಲಿ ನನ್ನನ್ನು ನೋಡುತ್ತಿದ್ದರು. ತಂದೆ ಇರುವಾಗ ಎಲ್ಲಾ ಮಕ್ಕಳು ಪ್ರೀತಿಯಿಂದನೇ ನೋಡುತ್ತಿದ್ದರು. ಆದರೆ ತಂದೆ ಹೋದ ಮೇಲೆ ಅವರ ನಿಜ ಸ್ವಭಾವ ವೇನೆಂದು ನನಗೆ ಅರ್ಥವಾಯಿತು. ಆದರೆ 4ನೇ ಅಕ್ಕನ

ಮಗಳು ಮಾತ್ರ ನನ್ನನ್ನು ತುಂಬಾ ಚನ್ನಾಗಿ ನೋಡಿಕೊಳ್ಳುತ್ತಿದ್ದಳು. ಅದರಿಂದ ಅವರ ಮನೆಯಲ್ಲಿ ಮಾತ್ರ ಹೆಚ್ಚು ತಿಂಗಳು ಇರಲು ಸಾಧ್ಯವಾಯಿತು.

ಒಂದು ದಿನ ನಾನು ಮಾಡದೇ ಇರುವ ತಪ್ಪನ್ನು ನನ್ನ ಮೇಲೆ ಹಾಕಿ, ಇವಳಿಂದಲೇ ನನ್ನ ತಂಗಿ ಹಾಳಾಗಿದ್ದು ಎಂದು ಎಲ್ಲರ ಮುಂದೆ ನನ್ನ ಅಕ್ಕನ ಮಗ ಬೈಯುವಾಗ ತುಂಬಾ ನೋವಾಗಿ ನಾನು ಅಕ್ಕನಿಗೆ ತಿಳಿಸದೆ ಅವರ ಮನೆಯನ್ನೂ ಬಿಟ್ಟು ಹೊರ ಬಂದೆನು. ಅಂದಿನಿಂದ ನನಗೆ ಹೆತ್ತವರು ದೂರ ವಾದರು, ಅಣ್ಣ-ಅಕ್ಕಂದಿರೂ ಸಹ ನನ್ನ ಕೈ ಬಿಟ್ಟರು ಸ್ನೇಹಿತರೂ ತಳ್ಳಿಹಾಕಿದರು. ಈ ಲೋಕದಲ್ಲಿ ನನ್ನವರು ಎಂದು ಯಾರು ಇಲ್ಲದೆ ಅನಾಥಳಾಗಿ ದಾರಿ ಕಾಣದೆ ಅಲೆಯುತ್ತಿದ್ದೆ. ಮನೆಯಿಲ್ಲದೆ ಬಸ್ಸ್ ಸ್ಟಾಂಡನಲ್ಲಿ ಬೆಳಿಗ್ಗೆಯಿಂದ ಸಾಯಂಕಾಲ ದವರೆಗೂ ಅಲ್ಲೇ ಕುಳಿತುಕೊಂಡು ಜನರ ಮುಖಗಳನ್ನು ನೋಡುತ್ತಾ ಹಸಿವೆಯಿಂದ ನಾನು ಅಲೆಯುತ್ತಿದ್ದೆ, ಕಣ್ಣೀರಿನಿಂದ ಕರ್ತನನ್ನು ಕೂಗುತ್ತಿದ್ದೆನು.

## 15. ಕಾಲೇಜ್ ಸೇರಿದೆ

"ತನ್ನನ್ನು ಹೆಚ್ಚಿಸಿಕೊಳ್ಳುವ ಪ್ರತಿಯೊಬ್ಬನು ತಗ್ಗಿಸಲ್ಪಡುವನು; ತನ್ನನ್ನು ತಗ್ಗಿಸಿಕೊಳ್ಳುವವನು ಹೆಚ್ಚಿಸಲ್ಪಡುವನು" (ಮತ್ತಾ 14:11)

ಆತ್ಮೀಕದಲ್ಲಿ ನನ್ನನ್ನು ಬೆಳೆಸುತ್ತಿದ್ದ ತಾಯಿ ಮನೆಗೆ ಹೋಗೋಣ ಎಂದು ತೀರ್ಮಾನಿಸಿ ಅವರ ಮನೆಗೆ ಹೋದೆನು. ಅವರನ್ನು ನೋಡಿ ಎಲ್ಲಾ ವಿಷಯವನ್ನು ಬಿಡಿಸಿ ಹೇಳಿದೆನು. ಆಗ ಅವರು ಸರಿ ಎಂದು ಹೇಳಿ ಅವರ ಮನೆಯಲ್ಲಿ ಇರಲು ಒಪ್ಪಿಕೊಂಡರು. ಆದರೆ ನನ್ನ ಮನೆಯವರು ಬಂದು ಎಲ್ಲಿ ಜಗಳ ಮಾಡುತ್ತಾರೋ ಎನ್ನುವ ಭಯ ಸಹಾ ಅವರಲ್ಲಿತ್ತು. ಆದರೂ ಅವರು ಏನೂ ಹೇಳದೆ ನನ್ನನ್ನು ನೋಡಿಕೊಳ್ಳುತ್ತಿದ್ದರು. ನಾನು ನನ್ನನ್ನು ತಗ್ಗಿಸಿಕೊಂಡು ಅವರ ಮನೆಯಲ್ಲಿ ಎಲ್ಲಾ ರೀತಿ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಅವರು ಹೇಳಿದ ರೀತಿ ನಡೆದುಕೊಂಡು ಬರುತ್ತಿದ್ದೆ. ಆಗ ಒಂದು ದಿನ ನಾನು ಮಧ್ಯಾಹ್ನ ಮಲಗಿದ್ದಾಗ, ಅವರು ಮಾತಾಡುತ್ತಿದ್ದದ್ದನ್ನು ಕೇಳಿಸಿಕೊಂಡೆ - "ನಮ್ಮ ಮನೆಯಲ್ಲಿ ಮದುವೆ ಆಗದೇ ಇರುವ ಗಂಡು ಮಕ್ಕಳು ಇದ್ದಾರೆ, ಇವರ ಮಧ್ಯದಲ್ಲಿ ಇವಳು ಇದ್ದರೆ ನಾಳೆ ನಮ್ಮ ಮಕ್ಕಳ ಮದುವೆಗೆ ಏನಾದರೂ ತೊಂದರೆಯಾದರೆ ಏನು ಗತಿ, ಇದರಿಂದ ನಮ್ಮ ಮಾನ ಮರ್ಯಾದೆ ಹೋಗುತ್ತೆ; ಇವಳಿಗೆ ಏನಾದರೂ ದಾರಿ ಮಾಡಬೇಕು ಎಂದು ಮಾತಾಡಿಕೊಳ್ಳುತ್ತಿದ್ದರು." ನಾನು ಅದನ್ನು ಕೇಳಿದಾಗ ತುಂಬಾ ದುಃಖ ಆಗಿ

ಸಹಿಸಲಾರದ ರೀತಿಯಲ್ಲಿ ಅತ್ತೆನು. ನನಗೆ ಎಲ್ಲೂ ಆಶ್ರಯವಿಲ್ಲವೇ ಎಂದು ಮನಸ್ಸಿನಲ್ಲಿ ನಾನೆಲ್ಲಿಗೆ ಹೋಗಲಿ ಎಂದು ಯೋಚಿಸುತ್ತಾ ಇದ್ದೆ, ಆ ಮೇಲೆ ನಾನೇ ಅವರೊಟ್ಟಿಗೆ ಕೇಳಿದೆ- ನನ್ನನ್ನು ಅನಾಥ ಆಶ್ರಮಕ್ಕೆ ಸೇರಿಸಿ ನಾನು ಸ್ವಲ್ಪ ದಿನ ಅಲ್ಲೇ ಇರುತ್ತೇನೆ. ನಿಮಗೆ ನನ್ನಿಂದ ಯಾವ ತೊಂದರೆ ಆಗಬಾರದು ದಯವಿಟ್ಟು ಸಹಾಯ ಮಾಡಿ ಎಂದು ಕೇಳಿಕೊಂಡೆನು. ಅವರು ಅದಕ್ಕೆ ಮಂಗಳೂರಿನಲ್ಲಿ 'ಆತ್ಮೀಕ ಯಾತ್ರೆ' ಎನ್ನುವ ಬೈಬಲ್ ಕಾಲೇಜ್‌ನಲ್ಲಿ ನನ್ನನ್ನು ಸೇರಿಸಿ ಹೋದರು. ಅಲ್ಲಿಗೆ ಆತ್ಮೀಕ ತಾಯಿ ಮನೆ ನನಗೆ ಕೊನೆಗೊಂಡಿತು.

ಆ ಕಾಲೇಜ್‌ನಲ್ಲಿ 5-6 ತಿಂಗಳು ಮಾತ್ರ ಇದ್ದೆ, ಆದ್ರೆ ನನಗೆ ಅಲ್ಲಿ ಇರಲು ಆಗದೆ ಅಲ್ಲಿಂದ ಬೆಂಗಳೂರಿಗೆ ವಾಪಸ್ಸ್ ಬಂದುಬಿಟ್ಟೆನು. ಪರಿಚಯವಿದ್ದ ಕೆಲವು ವ್ಯಕ್ತಿಗಳ ಸಹಾಯದಿಂದ ನಾಗಶೆಟ್ಟಿಹಳ್ಳಿಯಲ್ಲಿರುವ ಬೈಬಲ್ ಕಾಲೆಜ್‌ಗೆ ಸೇರಿಕೊಂಡೆ ಅಲ್ಲಿ 11 ತಿಂಗಳು ಓದಿದೆ, ಅಲ್ಲಿ ಸ್ಮೀತಾ ಎನ್ನುವ ಗೆಳತಿ ಪರಿಚಯವಾದಳು. ಅವಳು ಪರಿಚಯವಾದ ಮೇಲೆ ಆತ್ಮೀಕ ತಾಯಿಯವರು ಅಮೇರಿಕಾಕ್ಕೆ ಹೊರಟು ಹೋದರು. ನಂತರ ನನ್ನ ಕಷ್ಟಕ್ಕೆ ಸ್ಪಂದಿಸುವ ವ್ಯಕ್ತಿ ಯಾರೂ ಇರಲಿಲ್ಲ. ಆ ಕಾಲೇಜ್‌ನಲ್ಲಿ ಫೀಜ್ ಕಟ್ಟಿಲ್ಲ ಎಂದು ನನ್ನನ್ನು ಹೊರಗೆ ಹಾಕಿದರು.

ಆಗ ಮನೆಯಿಲ್ಲದೆ ಇರುವಾಗ ಕಾಲೇಜ್‌ನಲ್ಲಿ ಪರಿಚಯವಾದಂತಹ ಜ್ಯೋತಿ ಎನ್ನುವವರು ನನ್ನನ್ನು ಮತ್ತು ಸ್ಮೀತಾಳನ್ನು ಮೈಸೂರಿಗೆ ಕರೆದುಕೊಂಡು ಹೋದರು. ಅಲ್ಲಿ 3-4 ದಿವಸ ಇದ್ದೆವು. ನಂತರ ಮಂಗಳೂರಿನಲ್ಲಿ 3-4 ದಿವಸಗಳು ಇದ್ದೆವು. ಅದು ಆದ ಮೇಲೆ ಕೇರಳದಲ್ಲಿ ವಿಶ್ವಾಸಿಗಳ ಮನೆಯಲ್ಲಿ ಸ್ವಲ್ಪ ದಿವಸಗಳು ಇದ್ದೆವು. ಹೀಗೇ ಅಲ್ಲಲ್ಲಿ ಪ್ರಾರ್ಥನೆಗಳು ನಡೆಸುತ್ತಾ ಬಂದೆವು. ಕಡೆಗೆ ಮತ್ತೇ ಹಿಂತಿರುಗಿ ಬೆಂಗಳೂರಿನಲ್ಲಿ ಸ್ಮೀತಾ ಮನೆಯಲ್ಲಿ ಉಳಿದುಕೊಂಡೆನು.

ಅವರ ಮನೆಯಿಂದ ಎಲ್ಲೆಲ್ಲಿ ಕೂಟಗಳು ನಡೆಯುತ್ತೋ ಅಲ್ಲಿಗೆ ಹೋಗಿ ಪ್ರಾರ್ಥನೆ ಮಾಡುತ್ತಾ ಇರುತ್ತಿದ್ದೆ. ಸ್ಮೀತಾ ಮನೆ ಚಿಕ್ಕದ್ದು ಮತ್ತೇ ಬಡತನ ಇದನ್ನು ನೋಡುವಾಗ ಅಲ್ಲಿ ಇರುವುದಕ್ಕೆ ನನಗೆ ಇಷ್ಟ ಆಗುತ್ತಿರಲಿಲ್ಲ ಏಕೆಂದರೆ ಅವರೇ ಎಷ್ಟೋ ಕಷ್ಟದಲ್ಲಿ ಇದ್ದಾರೆ ನಾನು ಯಾಕೆ ಅವರಿಗೆ ಕಷ್ಟ ಕೊಡುವುದು ಎಂದೆಲ್ಲಾ ಆಗಾಗ್ಗೆ ಚಿಂತಿಸುತ್ತಿದ್ದೆ. ಸಭೆಯಲ್ಲಿ 21 ದಿವಸ ಉಪವಾಸದ ಪ್ರಾರ್ಥನೆಗಳು ನಡೆಯುವಾಗ ಅಲ್ಲೇ 21 ದಿನಗಳನ್ನೂ ಕಳೆಯುತ್ತಿದ್ದೆ. ನಂತರ ಮತ್ತೊಂದು ಕಾಲೇಜ್ ಪರಿಚಯವಾಯಿತು ಅದು ಕೊರಿಯನ್ ದೇಶದವರು ನಡೆಸುತ್ತಿದ್ದ ಇಂಗ್ಲೀಷ್ ಕಾಲೇಜ್. ಅಪರಿಚಿತ ವ್ಯಕ್ತಿಯ ಮುಖಾಂತರ ಆ ಕಾಲೇಜ್‌ಗೆ

ನಾವಿಬ್ಬರೂ ಸೇರಿಕೊಂಡೆವು, ಅಲ್ಲಿ ಎಲ್ಲವೂ ಅನುಕೂಲವಾಗಿ ಇತ್ತು. ನಮ್ಮನ್ನು ಸೇರಿಸಿದವರು ಅಡ್ಮೀಷನ್ ಮಾತ್ರ ಕಟ್ಟಿದ್ದರು. ಫೀಜ್ ಕಟ್ಟಿರಲಿಲ್ಲ. ಅಲ್ಲಿ ನಮಗೆ ವಸಂತಬಾಬು ಎನ್ನುವ ಆಂಧ್ರಪ್ರದೇಶದಿಂದ ಬಂದಂತಹ ಒಂದು ಸಹೋದರ ಪರಿಚಯವಾದರು. ಅಲ್ಲಿ ಅನೇಕ ಕಾರ್ಯಗಳನ್ನು ಕಲಿತುಕೊಂಡೆವು. ಸ್ವಲ್ಪ-ಸ್ವಲ್ಪ ಇಂಗ್ಲೀಷ್ ಮಾತಾಡೋಕೆ ಆರಂಭಿಸಿದೆವು. ತುಂಬಾ ಚೆನ್ನಾಗಿ ನಡೆಸುತ್ತಿದ್ದರು. ಆದರೆ ದಿನಗಳು ಕಳೆದು ಬಂದಾಗ ನಮ್ಮನ್ನು ಕರೆದು ಫೀಜ್ ಯಾಕೆ ಕಟ್ಟಿಲ್ಲ ಎಂದು ವಿಚಾರಿಸಿ. ಹೊರ ಹಾಕಿದರು. ನಮಗೆ ತುಂಬಾ ದುಃಖ ಆಗಿ ಹೊರಗೆ ಬಂದೆವು.

ಆದರೆ ಅದೇ ಕಾಲೇಜ್ ಮಾಷ್ಟರ್ ಬಂದು ಒಂದು ಸಲಹೆ ಕೊಟ್ಟರು. ನೀವು ನಮ್ಮ ಮನೆಗೆ ಬರಬಹುದು ನಾನು ಅಲ್ಲಿ ಸಣ್ಣದಾಗಿ ಕಾಲೇಜ್ ಶುರು ಮಾಡುತ್ತೇನೆ ಎಂದರು. ನಿಮಗೆ ಇರಲು ಸ್ಥಳ ಕೊಡುತ್ತೇನೆ. ಆದರೆ ನಾನು ಕೊಡುವ ಪುಸ್ತಕಗಳನ್ನು ಮಾರಿ ನಿಮ್ಮ ಹೊಟ್ಟೆ ತುಂಬಿಸಿಕೊಳ್ಳಬೇಕು ಅಂದರು. ನಾವು ಅದಕ್ಕೆ ಸರಿ ಎಂದು ಒಪ್ಪಿಕೊಂಡು ಹೇಳಿ 12 ಜನರು ಈ ಮಾಸ್ಟರ್ ಮನೆಯಲ್ಲಿ ಇರಲು ಮುಂದಾದೆವು.

ಸಂತೋಷದಿಂದ ಮಾಸ್ಟರ್ ಮನೆಗೆ ಬಂದು ಸೇರಿದವು. ಅಲ್ಲಿ ಸ್ನಾನ ಮಾಡಲು ಸ್ಥಳವಿಲ್ಲ ಶೌಚಾಲಯದಲ್ಲೇ ಸ್ನಾನಮಾಡಬೇಕು. ದಿನವೂ ಸ್ನಾನಕ್ಕೆ ಅನುಕೂಲವಿರಲಿಲ್ಲ ವಾರಕ್ಕೆ ಒಂದು ಬಾರಿ ಮಾತ್ರ ಮಾಡಬೇಕು, ಏಕೆಂದರೆ ಅಲ್ಲಿ ನೀರು ಸಿಗಲು ಬಹಳ ಕಷ್ಟ. ನೀರು ಬೇಕೆಂದರೆ 2 ಮೈಲು ದೂರ ಹೋಗಿ ತೆಗೆದುಕೊಂಡು ಬರಬೇಕಾಗಿತ್ತು. ಅಲ್ಲಿ ಜೀವನ ನಮಗೆ ತುಂಬ ಕಷ್ಟವಾಗುತ್ತಿತ್ತು. ಬಿಸಿಲಿನಲ್ಲಿ ಹೋಗಿ ಪುಸ್ತಕ ಮಾರಿಕೊಂಡು ಬರುತ್ತಿದ್ದೆವು. ಸ್ವಲ್ಪ ಪುಸ್ತಕಗಳು ಮಾರಾಟವಾದರೆ ಅದರಿಂದ ಬಂದ ಹಣದಿಂದ ಊಟ ಮಾಡಿ ತಿನ್ನುತ್ತಿದ್ದವು. ಈ ರೀತಿಯಲ್ಲಿ 3 ತಿಂಗಳು ಕಠಿಣವಾದ ಕಷ್ಟವನ್ನು ಅನುಭವಿಸಿದೆವು.

ಸ್ವಲ್ಪ ದಿನಗಳು ಆದ ಮೇಲೆ ವಸಂತಬಾಬು ಸಹೋದರನು ಅವನ ಮನೆಗೆ ಅಂದರೆ ಆಂಧ್ರಪ್ರದೇಶಕ್ಕೆ ನಮ್ಮನ್ನು ಕರೆದುಕೊಂಡು ಹೋದನು. ಅಲ್ಲಿ ಒಂದು ವಾರವಿದ್ದುಕೊಂಡು ನಂತರ ಬೆಂಗಳೂರಿಗೆ ಬಂದು ಮತ್ತೆ ಸ್ಮೀತಾ ಮನೆಯಲ್ಲಿ ಇದ್ದುಕೊಂಡು ಟೈಲರ್ ಕೆಲಸಕ್ಕೆ ಹೋಗಲು ಆರಂಭಿಸಿದೆವು. ನಾನು ಬಟ್ಟೆ ಹೊಲಿಯುವುದನ್ನು ಕಲಿತುಕೊಂಡೆನು, ಆದರೆ ಸ್ಪೀಡ್ ಆಗಿ ಕೆಲಸ ಮಾಡುತ್ತಿಲ್ಲ ಎಂದು ಹೇಳಿ ಚೆಕಿಂಗ್ ಕೆಲಸಕ್ಕೆ ಹಾಕಿಕೊಂಡರು. ತಿಂಗಳಿಗೆ 5 ಸಾವಿರ ಕೊಡುತ್ತಿದ್ದರು.

ನಾವಿಬ್ಬರು ಅವರ ಮನೆಯಲ್ಲಿ ಇರಲು ಆಗದೇ 'ಗಾರೆ ಪಾಳ್ಯ' ಎನ್ನುವ ಸ್ಥಳದಲ್ಲಿ ಒಂದು ಬಾಡಿಗೆ ಮನೆಯನ್ನು ಮಾಡಿಕೊಂಡೆವು ನನ್ನೊಂದಿಗೆ ಸ್ಮೀತಾ ಸಹ ಕಷ್ಟಪಡುತ್ತಿದ್ದಳು, ಅಲ್ಲಿ ಸ್ವಲ್ಪ ತಿಂಗಳುಗಳು ಇದ್ದೆವು. ಗಾರ್ಮೆಂಟ್ಸ್ ಕೆಲಸ ಸರಿಯಾಗಿಲ್ಲ ಎಂದು 'ಎಲೆಕ್ಟ್ರಾನಿಕ್ಸ್' ಕಂಪನಿಗೆ ವೈರುಸಾಲ್ಡ್‌ರಿಂಗ್ ಮಾಡೋಕೆ ಸೇರಿಕೊಂಡೆವು. ಸ್ಮೀತಾ ಎರಡು ತಿಂಗಳು ಮಾತ್ರ ಕೆಲಸ ಮಾಡಿ ಬಿಟ್ಟು-ಬಿಟ್ಟಳು, ಆಮೇಲೆ ಅವಳಿಗೆ ಜ್ವರಾ ಬಂದಿತು ಆಸ್ಪತ್ರೆಗೆ ಸೇರಿಸಿದೆ, ಯಾರೂ ಸಹಾಯಕ್ಕೆ ಬರಲಿಲ್ಲ, ಅನ್ಯಜನರಿಂದ ನಮಗೆ ಸಹಾಯ ಸಿಕ್ಕಿತು, ನಾನು 3-4 ತಿಂಗಳು ಕೆಲಸ ಮಾಡಿದೆ, ನಂತರ ನನ್ನ ಕೈಯಲ್ಲೂ ಆಗಲಿಲ್ಲ.

ಬೇರೆ ಕೆಲಸ ಎಲ್ಲಾದರೂ ಹುಡುಕೋಣ ಎಂದು ಬಿ.ಟಿ.ಎಂ ಲೇಔಟ್ ಕಡೆಗೆ ಹೋಗಿತ್ತಿದ್ದೆನು, ಅಲ್ಲಿ 3ನೇ ಅಕ್ಕನ ಸ್ನೇಹಿತೆ ಒಬ್ಬಳು ಸಿಕ್ಕಿದಳು ಆಕೆ ನನ್ನನ್ನು ಕರೆದು ಮಾತಾನಾಡಿಸುವ ರೀತಿಯಲ್ಲಿ ಅವಳ ಮನೆಗೆ ಕರೆದುಕೊಂಡು ಹೋದಳು. ಆದರೆ ಅವಳ ಉದ್ದೇಶ ಬೇರೆಯಾಗಿತ್ತು ಎಂದು ನನಗೆ ಗೊತ್ತಾಗಲೇ ಇಲ್ಲ. 3ನೇ ಅಕ್ಕಳನ್ನು ಕರೆದು ಅವಳಿಗೆ ನನ್ನನ್ನು ಹಿಡಿದುಕೊಟ್ಟಳು, ನನಗೆ ಆಕೆ ಆ ರೀತಿ ಮಾಡಿದ್ದು ತುಂಬಾ ಬೇಸರವಾಯಿತು. ನನ್ನ ಅಕ್ಕ ನನ್ನನ್ನು ಮನೆಗೆ ಎಳೆದುಕೊಂಡು ಹೋಗಿ ಅವಳ ಸ್ನೇಹಿತೆಯ ಮುಂದೆಯೇ ಹೊಡೆದು ಕೆಟ್ಟ-ಕೆಟ್ಟ ಮಾತುಗಳನ್ನಾಡಿ, ಮನೆಯಿಂದ ಹೊರಗೆ ಬಿಡದೇ ಬಂಧಿಸಿದರು. ಆದರೆ ದೇವರ ಕೃಪೆಯಿಂದ ಅಲ್ಲಿದ್ದ ಅಕ್ಕಳ ಮೊಮ್ಮಗು ನನ್ನ ಬಳಿಯಲ್ಲಿ ಬಂದು ನಾನು ಆ ಮಗುವನ್ನು ಎತ್ತಿಕೊಳ್ಳಬೇಕೆಂದು ಹಟ ಮಾಡಿತು, ಯಾಕೆ ಈ ಮಗು ಈ ರೀತಿ ನನ್ನನ್ನೇ ಆತುಕೊಳ್ಳುತ್ತಿದೆ ಎಂದು ಯೋಚಿಸುತ್ತಾ ನಾನು ಆ ಮಗುವನ್ನು ಆಟವಾಡಿಸುತ್ತಿದ್ದೆ, ದೇವರೇ ಆ ಮಗುವನ್ನು ನನ್ನ ಬಳಿ ಬರುವಂತೆ ಮಾಡಿದರೆಂದು ನೆನೆಸುತ್ತೇನೆ. ಆ ಮಗುವನ್ನು ಆಟವಾಡಿಸುತ್ತಾ ಆಟವಾಡಿಸುತ್ತಾ ಆ ಜಾಗದಿಂದ ನನಗೆ ತಪ್ಪಿಸಿಕೊಳ್ಳಲು ಮಾರ್ಗವಾಯಿತು. ಅಲ್ಲಿಂದ ತಪ್ಪಿಸಿಕೊಂಡು ಮನೆಗೆ ಮತ್ತೆ ಹಿಂದಿರುಗಿ ಬಂದು ನಡೆದದ್ದನ್ನೇಲ್ಲಾ ಸ್ಮೀತಾ ತಿಳಿಸಿ ನೊಂದುಕೊಂಡೆನು.

ಚರ್ಚ್‌ನಲ್ಲಿ ಮತ್ತೇ 21 ದಿವಸ ಉಪವಾಸ ಆರಂಭವಾಯಿತು. ನಾವಿಬ್ಬರೂ ಅಲ್ಲೇ ಇದ್ದು ಪ್ರಾರ್ಥಿಸಿದೆವು. ದೇವರು ನಮ್ಮ ಮೇಲೆ ಕರುಣೆ ತೋರಿಸಿ ಬಾನಸವಾಡಿಯಲ್ಲಿ 'ಬೆಂಗಳೂರು ಬೈಬಲ್ ಕಾಲೇಜ್'ನಲ್ಲಿ ಸೇರಲು ಸಹಾಯ ಮಾಡಿದರು. ಅಲ್ಲಿ ಫೀಜ್ ಇಲ್ಲ, ಆದರೆ ಅಡ್ಮಿಶನ್ ಮಾತ್ರ 3000 ಕಟ್ಟಬೇಕು ಎಂದು ತಿಳಿಯಿತು. ಆಗ 'ಶೀಲ' ಎನ್ನುವ ಆಂಟಿ ಮನೆಯಲ್ಲಿ ಕೆಲಸ ಮಾಡಿ ಅದರಿಂದ ಬಂದ ಸಂಬಳ ತೆಗೆದುಕೊಂಡು ಹೋಗಿ ಕಟ್ಟಿ ಕಾಲೇಜ್‌ನಲ್ಲಿ

ಸೇರಿಕೊಂಡೆವು. ದೇವರಿಗೆ ಸ್ತೋತ್ರ ಸಲ್ಲಿಸಿದೆವು.

ಕಾಲೇಜ್‌ನಲ್ಲಿ ಇರುವಾಗಲೇ ಅನೇಕ ಸ್ಥಳಗಳಿಗೆ ಹೋಗಿ ಸೇವೆ ಮಾಡಲು ದೇವರು ನನಗೆ ಕೃಪೆ ತೋರಿಸಿದರು. ಆಗ ಆಂಧ್ರದಲ್ಲಿ ಮತ್ತೊಂದು ಕುಟುಂಬ ನನಗೆ ಪರಿಚಯವಾಯಿತು. ಆ ಕುಟುಂಬದವರು ಹೆಚ್ಚು ಪ್ರೀತಿ ತೋರಿಸುತ್ತಾ ತುಂಬಾ ಹತ್ತಿರವಾಗಿದ್ದರು. ಅವರು ನನ್ನನ್ನು ಮಗುವಿನ ರೀತಿಯಲ್ಲಿ ನೋಡಿಕೊಳ್ಳಲು ಆರಂಭಿಸಿದರು, ನನ್ನ ಕಷ್ಟದಲ್ಲಿಯೂ ದುಃಖದಲ್ಲಿಯೂ ಪಾಲುಗೊಳ್ಳುತ್ತಿದ್ದರು.

ಅದ್ಭುತಕರವಾಗಿ 3 ವರುಷ ಅದೇ ಕಾಲೇಜ್‌ನಲ್ಲಿ ಬಿ.ಟಿ.ಹೆಚ್‌ನಲ್ಲಿ 'ಗ್ರಾಜುಏಶನ್' ಮಾಡಿಕೊಳ್ಳಲು ಸಹಾಯವಾಯಿತು. ಮತ್ತೇ ಅಮಿಯಾ ಎನ್ನುವ ಸಹೋದರಿ ಹಾಗೂ ಪ್ರಕಾಶ್ ಎನ್ನುವ ಸಹೋದರ ಸಿಕ್ಕಿದರು. ಅವರಿಂದ ಅನೇಕ ವಿಚಾರಗಳನ್ನು ಕಲಿತುಕೊಂಡೆನು. ಅಮಿಯಾ ನನ್ನ ಸಾಕ್ಷಿ ಕೇಳಿ ಅವರ ಊರಾದ 'ನಾಗಾಲ್ಯಾಂಡ್'ಗೆ ಕರೆದುಕೊಂಡು ಹೋದರು 15 ದಿವಸಗಳು ಅಲ್ಲಿ ಇದ್ದು ಸೇವೆ ಮಾಡಲು ದೇವರು ಕೃಪೆ ತೋರಿದರು. ದೇವರು ನನ್ನ ಜೊತೆಯಿದ್ದು ನನ್ನನ್ನು ಹೆಜ್ಜೆ-ಹೆಜ್ಜೆಯಲ್ಲೂ ನಡೆಸುತ್ತಿದ್ದರು.

## 16. ಆಂಧ್ರದಲ್ಲಿ

ಕಾಲೇಜ್ ಮುಗಿಯಿತು. ಮತ್ತೇ ಬೇರೆ ಎಲ್ಲಿಗೆ ಹೋಗಲಿ ನನಗೆ ಎಂದು ಮನೆಯಿಲ್ಲವಲ್ಲಾ ಎಂದು ಮತ್ತೇ ತುಂಬಾ ಚಿಂತಿಸಿದೆ, ಮನೆ ಬಿಟ್ಟು 6 ವರುಷಗಳಾಗಿ ಹೋಯಿತು. ದೇವರೇ ನನಗೆ ಒಂದು ಮನೆ ಕೊಡಪ್ಪಾ 'ಪ್ರಾರ್ಥನಾ ಮಂದಿರ' ಎನ್ನುವ ಹೆಸರನ್ನು ಇಟ್ಟುಕೊಂಡು ನಿನ್ನ ಸೇವೆ ಮಾಡಿಕೊಂಡು ಜೀವಿಸುತ್ತೇನೆ ಎಂದು ಯಾವಾಗಲೂ ಪ್ರಾರ್ಥನೆಯನ್ನು ಮಾಡುತ್ತಿದ್ದೆ.

ಬೇರೆ ಎಲ್ಲಿಗೂ ಹೋಗಲು ತಿಳಿಯದೆ ಮತ್ತೇ ಸ್ಮೀತಾ ಮನೆಯಲ್ಲಿ ಇರುತ್ತಿದ್ದೆ, ಆದರೆ ಆಂಧ್ರದಲ್ಲಿ ನನ್ನನ್ನು ಅಲ್ಲಿರುವ ತಂದೆ-ತಾಯಿಯು ಬಹಳ ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದುದರಿಂದ ಎಷ್ಟೋ ಬಾರಿ ಸ್ಮೀತಾ ಮನೆಯಿಂದ ಅಲ್ಲಿಗೆ ಹೋಗಿ 1 ತಿಂಗಳು 2 ತಿಂಗಳುಗಳ ಕಾಲ ಅಲ್ಲೇ ಇರುತ್ತಿದ್ದೆ. ಅಲ್ಲಿಯೂ ಕರ್ತನು ನನ್ನನ್ನು ಸೇವೆಯಲ್ಲಿ ತುಂಬಾ ಉಪಯೋಗಿಸಿಕೊಂಡರು. ಅಲ್ಲಿ ಅನೇಕರಿಗೆ ದೆವ್ವಗಳನ್ನು ಬಿಡಿಸುತ್ತಾ, ಪ್ರವಾದಿಸುತ್ತಾ, ಸ್ವಸ್ಥತೆಯ ಪ್ರಾರ್ಥನೆಗಳನ್ನು ಮಾಡುತ್ತಾ ಸಂತೋಷವಾಗಿ ಇರುತ್ತಿದ್ದೆನು. ಅಲ್ಲಿನ ಜನರೂ

ಮುಗ್ಧಜನರು ನನ್ನನ್ನು ತುಂಬಾ ಪ್ರೀತಿ ಮಾಡುತ್ತಾ ಅವರ ಬಿಡುಗಡೆಗಾಗಿ ಅವರವರ ಮನೆಗೆ ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ದೇವರು ಅವರ ಆಸಕ್ತಿಯನ್ನು ನೋಡಿ ಅನೇಕರಿಗೆ ಉತ್ತಮವಾದ ಬಿಡುಗಡೆಯನ್ನು ಉಂಟುಮಾಡುತ್ತಿದ್ದರು.

ನನ್ನ ಆರಾಧನೆಯನ್ನೂ, ಪ್ರಾರ್ಥನೆಯನ್ನೂ, ಸೇವೆಯನ್ನೂ ನೋಡಿ ಅಲ್ಲಿ ನನ್ನನ್ನು ನೋಡಿಕೊಳ್ಳುತ್ತಿದ್ದ ಕುಟುಂಬದವರು ಹೇಳಿದರು  'ನೀನು ಇಲ್ಲೇ ಇರು ಒಂದು ರೂಂ ಮಾಡಿಕೊಡುತ್ತೇವೆ ಎಲ್ಲೂ ಹೋಗಬೇಡ ನಮ್ಮ ಜೊತೆಯಲ್ಲಿ ಇರು' ಎಂದು ಕೇಳಿಕೊಳ್ಳುತ್ತಿದ್ದರು. ಆ ಕುಟುಂಬದಲ್ಲಿ ತಂದೆ-ರಾಜ್‌ಬಾಬು, ತಾಯಿ ರೆಬ್ಕಾ ಮಕ್ಕಳಾದ ಶಾಲೇಮ್-ಬ್ಲೆಸಿ ಈ ಮಕ್ಕಳಿಬ್ಬರ ಜೊತೆಯಲ್ಲಿ ನಾನು ಸಹಾ ಒಂದು ಮಗುವಾಗಿ ಆ ಕುಟುಂಬದಲ್ಲಿ ಇರುತ್ತಿದ್ದೆನು. ಅವರು ಎಲ್ಲರೊಟ್ಟಿಗೆ ನನಗೆ 3 ಮಕ್ಕಳು ಎಂದು ಹೇಳಿಕೊಂಡು ನನ್ನನ್ನು ತುಂಬಾ ಪ್ರೀತಿಮಾಡುತ್ತಿದ್ದರು. ಅವರ ಪ್ರೀತಿ ನನ್ನ ಮೇಲೆ ಅಪಾರವಾಗಿತ್ತು.

ಕೀರ್ತನೆ 101:1,2 ವಾಕ್ಯ ಹೇಳುತ್ತದೆ - "ಪ್ರೀತಿ ನೀತಿಗಳನ್ನು ಕುರಿತು ಹಾಡುವೆನು; ಯೆಹೋವನೇ, ನಿನ್ನನ್ನು ಕೊಂಡಾಡುವೆನು. ಸನ್ಮಾರ್ಗವನ್ನು ಲಕ್ಷಿಸಿ ನಡೆಯುವೆನು; ನನಗೆ ಯಾವಾಗ ದರ್ಶನಕೊಡುವಿ? ಮನೆಯೊಳಗೂ ಯಥಾರ್ಥ ಹೃದಯದಿಂದಲೇ ಪ್ರವರ್ತಿಸುವೆನು," ಎನ್ನುವ ಪ್ರಕಾರ ಯೇಸುವಿನ ಪ್ರೀತಿಯನ್ನು ಯಥಾರ್ಥವಾಗಿ ಕುಟುಂಬಕ್ಕೆ ತೋರಿಸಿದ ಕಾರಣ ಅವರು ನನ್ನನ್ನು ಕೈಬಿಡದೇ ಪ್ರೀತಿಯಿಂದಲೇ ನೋಡಿಕೊಳ್ಳುತ್ತಿದ್ದರು.

ಒಂದು ಭಾರಿ ಆಂಧ್ರದಲ್ಲಿ ನಾನು ಇರುವಾಗ ದಿಢೀರನೇ 'ಚಿಕನ್‌ಗುನಿಯ' ಎನ್ನುವ ರೋಗಕ್ಕೆ ನಾನು ಒಳಗಾದೆ, ಆಗ ನನ್ನ ಕೈಯಿಂದ ಯಾವ ಕೆಲಸ ಸಹಾ ಮಾಡಿಕೊಳ್ಳಲು ಆಗುತ್ತಿರಲಿಲ್ಲ. ಮನೆ ಬಿಟ್ಟ ಮೇಲೆ ನಾನು ಇಂತಹ ರೋಗಕ್ಕೆ ಒಳಗಾಗಿದ್ದು ಇದೇ ಮೊದಲನೇ ಭಾರಿ. ಇಂತಹ ಭಯಂಕರವಾದ ರೋಗ ಯಾರಿಗೂ ಬರಬಾರದು ಎಂದು ನಾನು ಕರ್ತನಲ್ಲಿ ಪ್ರಾರ್ಥಿಸುತ್ತೇನೆ. ಏಕೆಂದರೆ ಈ ಖಾಯಿಲೆಗೆ ಒಳಗಾದರೆ ಮನುಷ್ಯನು ಯಾವ ಕೆಲಸ ಸಹಾ ಮಾಡಲು ಸಾಧ್ಯವಿಲ್ಲ, ಮೈಯಲ್ಲಾ ನೋವು ಕೈ-ಕಾಲು ಅಲ್ಲಾಡಿಸುವುದಕ್ಕೆ ಆಗಲ್ಲ, ಸ್ವಂತ ಕಾರ್ಯಗಳು ಯಾವುದೂ ಸಹಾ ಮಾಡಿಕೊಳ್ಳಲು ಆಗದೇ ಹಾಸಿಗೆ ಮೇಲೆ ಇರಬೇಕಾದಂತಹ ಪರಿಸ್ಥಿತಿ. ಇಂತಹ ಒಂದು ಸನ್ನಿವೇಶ ಮನೆಬಿಟ್ಟ ಮೇಲೆ ನನಗೆ ಬಂದಾಗಲೂ ದೇವರು ನನ್ನನ್ನು ಕೈ ಬಿಡಲೇ ಇಲ್ಲ. ಆಂಧ್ರ ತಾಯಿಯ ಮನೆಯಲ್ಲಿ ಈ ರೀತಿ ಖಾಯಿಲೆಗೆ ಒಳಪಟ್ಟೆ. ಆದರೆ ನನ್ನ ಕರ್ತನಪ್ರೀತಿ ಬಹಳವಾಗಿ ನನ್ನ ಮೇಲೆ ಇದ್ದ ಕಾರಣ

ರೋಗದಲ್ಲಿ ಇದ್ದ ನನ್ನನ್ನು ಆ ಕುಟುಂಬವು ನನ್ನನ್ನು ಬಹಳವಾಗಿ ಆರೈಕೆ ಮಾಡಿತು. ಅವರು ಮಾಡಿದ ಒಂದೊಂದು ತ್ಯಾಗಕ್ಕೂ ನಾನು ಹೃದಯಪೂರ್ವಕವಾಗಿ ಆ ಕುಟುಂಬಕ್ಕೆ ಚಿರಋಣಿ ಆಗಿದ್ದೇನೆ. ನಿಜವಾದ ಪ್ರೀತಿ ನನಗೆ ಅಲ್ಲಿ ಸಿಕ್ಕಿತು, ಈಗಲೂ ಆ ಪ್ರೀತಿ ಇಂದಿನವರೆಗೂ ಬೆಳೆಯುತ್ತಲೇ ಬರುತ್ತಿದ್ದೆ ಅದಕ್ಕಾಗಿ ನಾನು ಕರ್ತನಿಗೆ ಸ್ತೋತ್ರ ಸಲ್ಲಿಸುತ್ತೇನೆ.

ಒಂದು ವ್ಯಕ್ತಿಯು ಕಷ್ಟದಲ್ಲಿಯಾಗಲಿ ಅಥವಾ ರೋಗದಲ್ಲಿಯಾಗಲಿ ಇರುವಾಗ ಯಾರೂ ಆ ಕ್ಷಣದಲ್ಲಿ ಆ ವ್ಯಕ್ತಿಯನ್ನು ನೋಡಿಕೊಳ್ಳಲು ಅವರನ್ನು ಆರೈಕೆಮಾಡಲು ಪಾಲುಗೊಳ್ಳುತ್ತಾ, ಒಳ್ಳೇ ಪ್ರೀತಿಯನ್ನು ತೋರಿಸುತ್ತಾರೋ ಅವರೇ ನಿಜವಾದ ಒಳ್ಳೇ ಸ್ನೇಹಿತರು ಆಗಲು ಸಾಧ್ಯ. ನನಗೆ ಈ ಕುಟುಂಬ ಎಲ್ಲದರಲ್ಲೂ ಪಾಲುಗೊಂಡು ನನ್ನವರೆಂದು ಎನಿಸಿಕೊಂಡಿರುವ ಕುಟುಂಬವಾಗಿ ಮಾರ್ಪಟ್ಟಿತು. ಅನಾಥಳಾಗಿ ಅಲೆಯುತ್ತಿದ್ದ ನನಗೆ ಈ ಕುಟುಂಬ ಆಧಾರವಾಗಿ ನಿಂತುಕೊಂಡಿದ್ದು ಕರ್ತನ ಕಾರ್ಯವೇ ಆಗಿದೆ ಎಂದು ನಾನು ನಂಬುತ್ತೇನೆ. ನಂತರ ದೇವರು ನನಗೆ ಈ ಖಾಯಿಲೆಯಿಂದಲೂ ಬಹು ಬೇಗ ಚೇತರಿಸಿಕೊಳ್ಳಲು ಕೃಪೆತೋರಿಸಿದರು. ದೇವರಿಗೆ ಸ್ತೋತ್ರ.

## 17. ಕರ್ತನು ಇಳಿದು ಬಂದನು

ನಾನು 2007ನೇ ವರ್ಷದಲ್ಲಿ 21ದಿನದ ಉಪವಾಸದಲ್ಲಿ ಪಾಲ್ಗೊಳ್ಳಬೇಕಾಯಿತು ಆಗ ನಾನು ಆಂಧ್ರಪ್ರದೇಶದಲ್ಲಿದ್ದೆನು. ಆಗಲೇ ಈ ಉಪವಾಸ ಆರಂಭವಾಗಿತ್ತು. ನಾನು ಸಹ ಸಭೆಯೊಟ್ಟಿಗೆ ಈ ಉಪವಾಸ ತೆಗೆದುಕೊಳ್ಳಬೇಕೆಂದು ಆಂಧ್ರದಲ್ಲೇ ಉಪವಾಸ ಪ್ರಾರಂಭಮಾಡಿದೆ. ಒಂದನೇ ದಿನದ ಉಪವಾದಸದಂದು ಸಾಯಂಕಾಲ ಬೆಂಗಳೂರಿಗೆ ರೈಲಿನಲ್ಲಿ ಪ್ರಯಾಣಮಾಡಬೇಕಾಗಿತ್ತು. ದೇವರು ನನ್ನೊಟ್ಟಿಗೆ ಇರುತ್ತಾನೆ ಎಂಬ ಧೈರ್ಯದಿಂದ ಉಪವಾಸದಲ್ಲೇ ಪ್ರಯಾಣಮಾಡಿದೆ. ಆಗ ಮಧ್ಯರಾತ್ರಿ 2:00 ಗಂಟೆವರೆಗೂ ಸೀಟು ಸಿಗದೇ ನಿಂತುಕೊಂಡು ಪ್ರಯಾಣ ಮಾಡಿ ನನಗೆ ತುಂಬಾ ಆಯಾಸವಾಯಿತು. ಕಾರಣ ನಾನು ಜನರಲ್‌ಗೆ ಬಂದಿದ್ದು; ಬುಕಿಂಗ್ ಮಾಡಿಕೊಳ್ಳಲಿಲ್ಲ. ಆದರೂ ಪರವಾಗಿಲ್ಲ ಎಂದು ಪ್ರಯಾಣಮಾಡಿದೆ, 2ನೇ ದಿನದ ಉಪವಾಸದಲ್ಲಿ ಮಧ್ಯಾನ್ಹ ಬೆಂಗಳೂರಿಗೆ ಬಂದೆ, ನಾನು ನೇರವಾಗಿ ಸಭೆಗೆ ಹೋದೆ, ಅಲ್ಲಿ ಒಂದು ದಿನ ಇದ್ದು, 4ನೇ ದಿನ ನನ್ನ ಗೆಳತಿ ಸ್ಮಿತಾ ಮನೆಗೆ

ಹೋಗಿ ಅಲ್ಲಿ ಆ ದಿನವಿದ್ದು 5ನೇ ದಿನ ನಾನು ನನ್ನ ಆತ್ಮೀಯ ತಮ್ಮನಾದ ಶಾಲೇಮ್ ಸಹ ಆ ದಿನ ಅಲ್ಲೇ ಇದ್ದು 6ನೇ ದಿನ ನಾನು, ಶಾಲೇಮ್, ಸ್ಮಿತಾ ಬಸ್ಸಿನಲ್ಲಿ ಸಭೆಗೆ ಹೊರಟೆವು. ಬಸ್ಸ್ ಇಳಿದು ಹೆಬ್ಬಾಳ ರಿಂಗ್ರೋಡ್ ದಾಟಿ ಸಭೆಗೆ ಹೋಗಬೇಕು. ಆಗ ನನ್ನ ಬಲಗಡೆ ಶಾಲೇಮ್ ಇದ್ದಾನೆ, ಎಡಗಡೆ ಸ್ಮೀತಾ ಇದ್ದಾಳೆ ಇಬ್ಬರ ಕೈಯಿಡಿದು ಮಧ್ಯದಲ್ಲಿ ನಾನು ರಸ್ತೆದಾಟಲು ಹೋಗುವಾಗ ಸಿಗ್ನಲ್ ಬಿತ್ತು, ಯಾವ ಗಾಡಿಗಳು ಬರಲ್ಲಾ ಎಂದು ತಿಳಿದು ವೇಗನೆ ರಸ್ತೆ ದಾಟಲು ಮುಂದಾದೆವು ಒಂದು 'ಪಲ್ಸರ್' ಗಾಡಿ ವೇಗನೆ ಬಂದ ಕಾರಣ ನನ್ನ ಬಲಗೈಗೆ ಅಪಘಾತವಾಗಿ ಕೆಳೆಗೆ ಬಿದ್ದು ಹೋದೆನು, ದೇವರ ಕೃಪೆಯಿಂದ ನನ್ನ ಕೈ ಹಿಡಿದಿದ್ದ ಶಾಲೇಮನಿಗೆ ಏನೂ ಆಗಲಿಲ್ಲ. ನನಗೆ ಗಾಡಿ ಹೊಡೆದ ಕಾರಣ ಪ್ರಜ್ಞೆತಪ್ಪಿಹೋಯಿತು. ಆಟೋದಲ್ಲಿ 'ಕೊಲೊಂಬೊ ಏಷಿಯಾ' ಆಸ್ಪತ್ರೆಗೆ ಕರೆದುಕೊಂಡು ಹೋಗಿ ಅಲ್ಲಿ ಬಿಟ್ಟು ಎಲ್ಲರೂ ಹೊರಟುಹೋದರು. ಆದರೆ ಸ್ಮಿತಾ, ಶಾಲೇಮ್ ತುಂಬಾ ಅಳುತ್ತಾ ಅಲ್ಲಿ ಇದ್ದ ವ್ಯಕ್ತಿಗಳೊಟ್ಟಿಗೆ ಸಹಾಯ ಬೇಡುತ್ತಿದ್ದರು, ಯಾರೂ ಮುಂದಾಗಿ ಬಂದು ಸಹಾಯಮಾಡಲಿಲ್ಲ. ಸ್ಮಿತಾ ಅನೇಕ ಪಾಸ್ಟರ್‌ಗಳ ಸಹಾಯಕೇಳಲು ಫೋನ್ ಮಾಡಿದರೂ ಎಲ್ಲಾ ಕಡೆ ಮೀಟಿಂಗ್ ನಡೆಯುತ್ತಿದ್ದ ಕಾರಣ ಯಾರೂ ನಮ್ಮ ಸಹಾಯಕ್ಕೆ ಬರಲೇ ಇಲ್ಲ. ಅವಳಿಗೆ ತುಂಬಾ ಭಯವಾಗಿ ಏನು ಮಡಬೇಕೋ ಗೊತ್ತಾಗದೆ ಅಲೆಯುತ್ತಿದ್ದಳು.

ನನ್ನನ್ನು ಎಕ್ಸ್‌ರೇ ರೂಮಿಗೆ ಕರೆದುಕೊಂಡು ಹೋಗಿ ಮಲಗಿಸಿದರು. ನನ್ನನ್ನು ಅಲ್ಲಿ ಒಂದು ನಿಮಿಷ ಒಂಟಿಯಾಗಿ ಬಿಟ್ಟು ಎಲ್ಲರು ಹೊರಗೆ ಹೋದರು. ನನ್ನ ಬಳಿಯಲ್ಲಿ 200 ರೂ ಮಾತ್ರ ಹಣವಿತ್ತು. ಅದು ನಾನು ತೆಗೆದುಕೊಳ್ಳುತ್ತಿದ್ದಂತಹ ಚಿಕಿತ್ಸೆಗೆ ಸ್ವಲ್ಪವೂ ಸಾಕಾಗುತ್ತಿರಲಿಲ್ಲ, ಆದಕಾರಣ ನಾನು ಬಹು ದುಃಖದಿಂದ ಆಸ್ಪತ್ರೆಯಲ್ಲಿ ಯೇಸುವಿನ ಬಳಿ ಪ್ರಾರ್ಥಿಸಿದೆ- "ಹೆತ್ತ ತಾಯಿ ತನ್ನ ಕೂಸನ್ನು ಮರೆಯುತ್ತಾಳೆ. ಆದರೆ ನಾನು ನಿನ್ನನ್ನು ಮರೆಯುವುದಿಲ್ಲ" ಎಂದು ಹೇಳಿದ ದೇವರೇ ಕೃಪೆ ತೋರಿಸು, ಇದರಿಂದ ನನ್ನನ್ನು ತಪ್ಪಿಸಿ ಕಾಪಾಡು. ನನ್ನನ್ನು ಕೈ ಬಿಡಬೇಡ ಎಂದು ಹೇಳುತ್ತಾ ಕಣ್ಣೀರು ಇಟ್ಟು ಪ್ರಾರ್ಥಿಸಿದೆನು. ನಂತರ ನನಗೆ ಎಕ್ಸ್‌ರೇ ತೆಗೆದು ಹೊರಗೆ ಕರೆದುಕೊಂಡು ಬರುವಾಗ ನನ್ನ ಎದುರಾಗಿ ಒಬ್ಬ ವ್ಯಕ್ತಿ ಅಂದರೆ-"ಬಂಗಾರದ ಕೂದಲು, ನೀಲಿ ಮತ್ತು ಹಳದಿ ಇರುವ ಚೆಕ್ಸ್ ಶರ್ಟ್ ಗೋದಿ ಬಣ್ಣದ ಪ್ಯಾಂಟ್ ಹಾಕಿರುವ ವ್ಯಕ್ತಿ ಬಂದಾಗ ನನಗೆ ತಿಳಿಯದೇ ಎರಡು ಕೈಗಳನ್ನು ಎತ್ತಿ ಸ್ತೋತ್ರ ಹೇಳಿದೆ ಆಗ ಅವರು ನನ್ನನ್ನು ನೋಡಿ ನಗುತ್ತಾ ಮುಂದೆ ಹೋದರು. ಅಲ್ಲಿ ಸ್ಮಿತಾ ಅಳುತ್ತಾ ಇರುವಾಗ ಆ ವ್ಯಕ್ತಿ ನೋಡಿ - ಯಾಕೆ ಅಳುತ್ತಾ ಇದ್ದೀಯಾ

ಅಂದಾಗ-ನನ್ನ ಅಕ್ಕನಿಗೆ ಸಹಾಯ ಮಾಡಲು ಯಾರೂ ಬರುತ್ತಿಲ್ಲಾ. ಆಸ್ಪತ್ರೆಗೆ ಹಣ ಕಟ್ಟಬೇಕು ಎಂದು ಹೇಳಿದಾಗ ಅವರು ಹೇಳಿದರು- "ನೀನು ಭಯಪಡಬೇಡ ನಿನಗೆ ಏನೇ ಬೇಕೆಂದರೂ ನಾನು ಮೇಲೆ ಇರುತ್ತೇನೆ ಬಂದು ಕೇಳು" ಎಂದು ಹೇಳಿ ಹೊರಟು ಹೋದರು.

ನನಗೆ ಚಿಕಿತ್ಸೆ ಆದ ಮೇಲೆ ಹೊರಗೆ ಬಂದಾಗ, ಸ್ಮಿತಾ ಹೇಳಿದಳು- ಬಾ ನಮಗೆ ಸಹಾಯ ಮಾಡಿದ ವ್ಯಕ್ತಿಗೆ ಕೃತಜ್ಞತೆ ಹೇಳೋಣ ಅವರು ಮೇಲೆ ಇರುತ್ತಾರಂತೆ ಅಂದಳು. ನಾವಿಬ್ಬರು ಹೋಗಿ ನರ್ಸ್ ಹತ್ತಿರ ಮೇಲೆ ಹೋಗಲು ಜಾಗ ತೋರಿಸಿ ಎಂದು ಕೇಳಿದೆವು ಆಗ- ಅವರು ಮೇಲೆ ಏನೂ ಇಲ್ಲ; ಯಾರೂ ಇಲ್ಲ ಅಂದರು. ನಮಗೆ ಸಹಾಯ ಮಾಡಿದ ವ್ಯಕ್ತಿ ಮೇಲೆ ಇರುತ್ತೇನೆ ಬಾ ಅಂದರು ಅದಕ್ಕೆ ನಾವು ಕೇಳುತ್ತಿದ್ದೇವೆ ತೋರಿಸಿ ಎಂದು ಕೇಳಿಕೊಂಡೆವು, ನರ್ಸ್ ಹೇಳಿದರು 'ಬೇಕಾದರೆ ಹೋಗಿ ನೋಡಿ, ಮೇಲೆ ಏನೂ ಇಲ್ಲ. ನಿಮಗೆ ಆಸ್ಪತ್ರೆನೇ ಸಹಾಯ ಮಾಡಿದ್ದು' ಎಂದು ಹೇಳಿದರು. ನಾವು ತುಂಬ ಆಶ್ಚರ್ಯಪಡುತ್ತಾ ಆಸ್ಪತ್ರೆಯಿಂದ ಹೊರಗೆ ಬಂದೆವು. ಕರ್ತನು- ದೂತನ ಹಾಗೆ ಮನುಷ್ಯನ ರೀತಿಯಲ್ಲಿ ಬಂದು ಸಹಾಯ ಮಾಡುತ್ತಾರೆಂದು ಮತ್ತೇ ಯೇಸುದೇವರು ಸತ್ತು 3ನೇ ದಿನ ಎದ್ದು 40 ದಿನ ಶಿಷ್ಯರೊಟ್ಟಿಗೆ ಇರುವಾಗ ಅವರಿಗೆ ಕರ್ತನ ಗುರುತು ತಿಳಿಯಲಿಲ್ಲ, ಯಾವಾಗ ರೊಟ್ಟಿ ಮುರಿದರೋ ಆಗ ಅವರ ಕಣ್ಣು ತೆರೆಯಲ್ಪಟ್ಟಿತು, ಅದೇ ರೀತಿ ನನ್ನ ಕರ್ತನು ನನ್ನ ಕೂಗನ್ನು ಕೇಳಿ ಒಬ್ಬ ಮನುಷ್ಯನ ರೂಪದಲ್ಲಿ ಬಂದು ಸಹಾಯ ಮಾಡಿದನು. ಎಂದು ನಾನು ಗ್ರಹಿಸಿಕೊಂಡು ಕರ್ತನಿಗೆ ಮಹಿಮೆಯನ್ನು ಸಲ್ಲಿಸಿದೆನು.

ದೇವರು ನಮ್ಮನ್ನು ಯಾವಾಗಲು ನೋಡುವ ದೇವರಾಗಿದ್ದಾನೆ. ನನಗೆ ಯಾರೂ ಸಹಾಯಕರು ಇಲ್ಲದೆ ಇರುವಂತಹ ಸಂಧರ್ಭದಲ್ಲಿ ಕರ್ತನು ತಾನೇ ಇಳಿದು ಬಂದು ಸಹಾಯ ಮಾಡಿದನು, ಇದು ನಂಬಲು ಅಸಾಧ್ಯವಾದಂತಹ ಮಾತಾಗಿದೆ ಆದರೆ ನನ್ನ ಕರ್ತನು ಇಂದಿಗೂ ಜೀವಿಸುತ್ತಿದ್ದಾನೆ. ನನ್ನ ಅಸಹಾಯಕವಾದ ಪರಿಸ್ಥಿತಿಯನ್ನು ಕರ್ತನು ನೋಡಿ ತಾನೇ ನನಗೆ ಸಹಾಯಮಾಡಿದನು ಎಂದು ನಿಮಗೆ ತಿಳಿಸಲು ನಾನು ಬಹಳ ಸಂತೋಷವುಳ್ಳವಳಾಗಿದ್ದೇನೆ.

ಪ್ರಿಯರೇ ನೀವು ಎಂಥ ಇಕ್ಕಟ್ಟಿನಲ್ಲಿ ಇರುವುದಾದರೂ ಜೀವಿಸುವ ದೇವರ ಬಳಿಯಲ್ಲಿ ಬೇಡಿಕೊಳ್ಳಿರಿ ಆತನು ಪಕ್ಷಪಾತಿಯಲ್ಲಾ ನನಗೆ ಸಹಾಯಮಾಡಲು ಇಳಿದು ಬಂದ ದೇವರು ನಿಮಗಾಗಿಯೂ ಸಹ ಬಂದೇ ಬರುತ್ತಾರೆ. ನಂಬಿಕೆಯಿಂದ ದೇವರನ್ನು ನೋಡಿ ಬೇಡಿಕೊಳ್ಳಿರಿ.

ಕರ್ತನು ನನ್ನ ಜೀವನದಲ್ಲಿ ಹೆಜ್ಜೆ-ಹೆಜ್ಜೆಗೂ ಅದ್ಭುತ ಮಾಡುತ್ತಲೇ ಬಂದಿರುವುದಕ್ಕಾಗಿ ನಾನು ಎಷ್ಟು ಸ್ತೋತ್ರಗಳನ್ನು ಸಲ್ಲಿಸಿದರೂ ಸಾಲದು.

## 18. ಮಾತನಾಡಿದ ದೇವರು

"ದೇವರೇ, ಸುಮ್ಮನಿರಬೇಡ; ನಿಶ್ಚಿಂತನಾಗಿ ಮೌನದಿಂದಿರಬೇಡ ಸ್ವಾಮೀ. ನೋಡು ನಿನ್ನ ಶತ್ರುಗಳು ಘೋಷಿಸುತ್ತಾರೆ; ನಿನ್ನ ದ್ವೇಷಿಗಳು ತಲೆಯೆತ್ತಿದ್ದಾರೆ." (ಕೀರ್ತ 83:1,2)

ನನ್ನ ತಂದೆ ನನಗೆ ಹೆಣ್ಣು ಮಕ್ಕಳ ಬಟ್ಟೆಯನ್ನು ಹಾಕಿ ಬೆಳಸಲಿಲ್ಲವಾದುದರಿಂದ ನಾನು ಅವರ ಇಷ್ಟದ ಪ್ರಕಾರವಾಗಿಯೇ ಬೆಳೆದು ಬಂದೆನು. ನಾನು ಈ ರೀತಿ ಪ್ಯಾಂಟ್-ಶರ್ಟ್ ಹಾಕುವುದರಿಂದ ಈ ಲೋಕದಲ್ಲಿ ಎಷ್ಟೋ ಭಾರಿ ನಾನು ನಿಂದನೆಗೆ ಒಳಗಾಗಿದ್ದೆನು. ಆದರೆ ನಾನು ಯೇಸುಕ್ರಿಸ್ತನ ಮಗಳಾದ ಮೇಲೆ ಎಲ್ಲಾ ದೇವರ ಮಕ್ಕಳು ಚರ್ಚ್‌ನಲ್ಲಿರುವುದರಿಂದ ನನಗೆ ಚರ್ಚ್‌ನಲ್ಲಿ ಯಾವ ರೀತಿಯ ಅವಮಾನ ಆಗುವುದಿಲ್ಲ ಎಂದು ನಾನು ನೆನೆಸಿದೆ. ಆದರೆ ಚರ್ಚ್‌ನಲ್ಲಿರುವ ಎಲ್ಲಾ ವ್ಯಕ್ತಿಗಳು ನನ್ನನ್ನು ತುಂಬಾ ಕೀಳಾಗಿ ನೋಡಲು ಆರಂಭಿಸಿದರು. ಇದು ನನ್ನ ಹೃದಯಕ್ಕೆ ತುಂಬಾ ನೋವಾಯಿತು. ನಾನು ದೇವರ ಬಳಿ ಕೇಳಿದೆ ದೇವರೇ ನೀನು ಹೃದಯವನ್ನು ನೋಡುತ್ತೀಯಾ ಅಥವಾ ನನ್ನ ಹೊರ ನೋಟ ನೋಡುತ್ತೀಯಾ? ಎಂದು ಬಹು ದುಃಖದಿಂದ ದೇವರ ಬಳಿಯಲ್ಲಿ ಪ್ರಾರ್ಥಿಸುತ್ತಿದ್ದೆನು.

ಆಗ ಉಪವಾಸ ದಿನಗಳು ನಡೆಯುತ್ತಿತ್ತು ಅಲ್ಲಿ ಸ್ಯಾಮುಚ್ಚನ್ ಎನ್ನುವ ಪ್ರವಾದಿ ಬರುತ್ತಾರೆಂದು ಕೇಳಲ್ಪಟ್ಟೆನು, ನನ್ನ ಆತ್ಮೀಕ ತಾಯಿ ನನಗೆ ಹೇಳಿಕೊಟ್ಟರು ಅವರು ಒಳ್ಳೇ ಪ್ರವಾದಿಯಾಗಿದ್ದಾರೆ ಅವರ ಮೂಲಕ ದೇವರು ನಿನ್ನ ಬಳಿ ಮಾತನಾಡಲಿ ಎಂದು ಕೇಳಿಕೋ ಎಂದು ನನಗೆ ತಿಳಿಸಿದರು, ನಾನು ದೇವರೇ ನನ್ನ ಅವಮಾನವನ್ನು ಹೋಗಲಾಡಿಸಲು ನನ್ನ ಬಳಿ ಮಾತನಾಡು ಎಂದು ಪ್ರಾರ್ಥಿಸುತ್ತಿದ್ದೆ, ಮೊಟ್ಟ ಮೊದಲ ಭಾರಿಗೆ ಸ್ಯಾಮುಚ್ಚನ್ ಪ್ರವಾದಿಯು ನನ್ನನ್ನು ಕರೆದು ನನಗೆ ಈ ರೀತಿ ಪ್ರವಾದಿಸಿದರು.

"ಕನ್ನಡದಲ್ಲಿ ಹುಟ್ಟಿ ಕನ್ನಡದಲ್ಲೇ ಮಾತನಾಡುವ ಸ್ತ್ರೀಯನ್ನು ನೋಡುತ್ತಿದ್ದೇನೆ, ಆಕೆಯು ಚಿಕ್ಕ ವಯಸ್ಸಿನಿಂದಲೇ 'ಬಾಯ್ ಕಟ್' ಮಾಡಿಕೊಂಡು ಪ್ಯಾಂಟು-ಶರ್ಟ್ ಧರಿಸಿರುವ ಸ್ತ್ರೀ ಆಕೆಯ ಮೇಲಿರುವ ದೆವ್ವಗಳನ್ನು ಓಡಿಸಿ ನಾನು ಆಕೆಗೆ ದೆವ್ವಗಳನ್ನು ಓಡಿಸುವ ಅಧಿಕಾರವನ್ನು

ಕೊಟ್ಟಿದ್ದೇನೆ." ಎಂದು ಮಾತನಾಡಿದರು. ಆಗ ಸಭೆಯಲ್ಲಿ ನನ್ನನ್ನು ನೋಡಿ ಆಶ್ಚರ್ಯಪಟ್ಟು ನನ್ನ ಬಳಿಯಲ್ಲಿ ಅನೇಕರು ಬಂದು ಕ್ಷಮಾಪಣೆ ಕೇಳಿದರು.

ನಂತರ ಒಂದೆರಡು ವರ್ಷಗಳು ಕಳೆದ ಮೇಲೆ ಅದೇ ಉಪವಾಸ ದಿನದಂದು ಕರ್ತನು ಮತ್ತೆ ನನ್ನೊಟ್ಟಿಗೆ ಮಾತನಾಡಿದರು. ನನಗೆ ಆಕ್ಸಿಡೆಂಟ್ ಆದ ಸಮಯದಲ್ಲಿ ಚಿಕಿತ್ಸೆ ಮುಗಿದ ಮೇಲೆ ನಾನು ಚರ್ಚ್‌ಗೆ ಬಂದು ಅಲ್ಲೇ ಉಪವಾಸದ ಪ್ರಾರ್ಥನೆ ಮುಗಿಯುವವರೆಗೂ ಇದ್ದೆನು. ಆಗ 'ಸಾಮುಚ್ಚನ್' ಎನ್ನುವ ಒಂದು ದೊಡ್ಡ ಪ್ರವಾದಿ ಅಲ್ಲಿ ಪ್ರಾರ್ಥನಾ ಕೂಟವನ್ನು ನಡೆಸಲು ಮತ್ತೇ ಅಲ್ಲಿಗೆ ಬಂದಿದ್ದರು. ಅವರು ಯಾವಾಗಲೂ ಹೆಸರಿಡಿದು ಪ್ರವಾದಿಸುವ ಪ್ರವಾದಿಯಾಗಿದ್ದರು. ನಾನು ದೇವರ ಬಳಿ ಪ್ರಾರ್ಥಿಸಿದೆ. ದೇವರೇ ನನ್ನ ಬಳಿಯಲ್ಲಿ ಮಾತನಾಡು ಎಲ್ಲರೂ ನನ್ನನ್ನು ನೀನು ಪ್ಯಾಂಟ್-ಶರ್ಟ್ ಹಾಕುತ್ತೀಯಾ ನಿನ್ನ ಮೇಲೆ ದೇವರಾತ್ಮ ಇಲ್ಲ, ದೆವ್ವ ಇದೆ ಎಂದು ಹೀಯಾಳಿಸುತ್ತಿದ್ದಾರೆ, ಬಂದಿರುವ ಪ್ರವಾದಿಯ ಮುಖಾಂತರ ನನ್ನ ಬಳಿ ಮಾತನಾಡು ಎಂದು ಪ್ರಾರ್ಥಿಸಿದೆ. ಆ ಪ್ರವಾದಿಯು ಮೂರು ದಿನಗಳು ಮಾತ್ರ ಅಲ್ಲಿ ಪ್ರಾರ್ಥನೆ ನಡೆಸುತ್ತಾರೆ. ಅದಕ್ಕಾಗಿ ನಾನು ಆ ಮೂರುದಿನಗಳೂ ನನ್ನ ಬಳಿಯಲ್ಲಿಯೂ ದೇವರು ಮಾತನಾಡಲಿ ಎಂದು ಪ್ರಾರ್ಥಿಸುತ್ತಿದ್ದೆ.

ಮೊದಲನೆಯ ದಿನ ನನ್ನ ಅಕ್ಕ-ಪಕ್ಕದಲ್ಲಿರುವ ವ್ಯಕ್ತಿಗಳ ಹೆಸರಿಡಿದು ದೇವರು ಅವರ ಮುಖಾಂತರ ಕರೆದರು. ನನ್ನನ್ನು ಕರೆಯಲಿಲ್ಲ, ಎರಡನೆಯ ದಿನದಲ್ಲಿಯೂ ಮಾತಾಡಲಿಲ್ಲ, ನಾನು ದೇವರೇ ನನ್ನ ಬಳಿ ಮಾತನಾಡು ನನ್ನ ಪಕ್ಕದಲ್ಲಿರುವವರನ್ನು ನೀನು ನೋಡಿದ್ದೀಯಾ ಅಂದರೆ ನನ್ನನ್ನು ನೀನು ನೋಡಿದ್ದೀಯಾ ಎಂದು ನಾನು ನಂಬುತ್ತೇನೆ, ದಯವಿಟ್ಟು ಈ ದಿನವಾದರೂ ಮಾತನಾಡೆಂದು ಕಣ್ಣೀರಿನಿಂದ ಪ್ರಾರ್ಥಿಸುತ್ತಿದ್ದೆ, ಆಗ ದೇವರು ನನ್ನ ಮೊರೆಯನ್ನು ಕೇಳಿದರು, ಮೂರನೆಯ ದಿನದಲ್ಲಿ ಪ್ರವಾದಿಯು ನನ್ನನ್ನು ನೋಡಿ ಬೆರಳು ನೀಟಿ ಕರೆದರು, "ಆರೆಂಜ್ ಶರ್ಟ್ ಹಾಕಿರುವ ಸ್ತ್ರೀ ಎದ್ದೇಳು ಎಂದರು. ನನಗೆ ಭಯವಾಯಿತು, ಎಲ್ಲರೂ ಪದ್ಮ ನಿನ್ನನ್ನೇ ಕರೆಯುತ್ತಿದ್ದಾರೆ ಎಂದರು, ನಾನು ಎದ್ದು ನಿಂತೆನು. ಕಾರಣವೇನೆಂದರೆ ಆಕ್ಸಿಡೆಂಟ್ ಆಗಿ ನನ್ನ ಬಲಗೈಗೆ ಗಾಯವಾಗಿದ್ದುದರಿಂದ ಮಾತ್ರೆ ತೆಗೆದುಕೊಂಡಿದುದರಿಂದ ನನಗೆ ತುಂಬಾ ಆಯಾಸವಾಗಿತ್ತು, ಅವರು ಕರೆದಾಗ ನನಗೆ ಅರ್ಥವಾಗಲಿಲ್ಲ, ಅಕ್ಕ-ಪಕ್ಕದವರು ನನಗೆ ನಿನ್ನನ್ನೇ ಕರೆಯುತ್ತಾರೆ ಎಂದರು.

ಪ್ರವಾದಿಯಾದರೋ ನನಗೆ ಸ್ಟೇಜ್ ಮೇಲೆ ಬರಲು ಹೇಳಿದರು ಅಲ್ಲಿ ನೆರೆದಿದ್ದದ್ದು ಅಂದು 5000 ಜನರು ಆಗಿದ್ದರು, ನನ್ನನ್ನು ದೇವರು ನೋಡಿ

ಕರೆದಿದ್ದಕ್ಕಾಗಿ ಎಲ್ಲರೂ ನನ್ನನ್ನು ಆಶ್ಚರ್ಯವಾಗಿ ನೋಡುತ್ತಿದ್ದರು. ನಾನು ಸ್ಟೇಜ್ ಮೇಲೆ ಹೋದೆ, ಪ್ರವಾದಿಯು ನನ್ನ ತಲೆ ಮೇಲೆ ಕೈಯಿಟ್ಟು ಪ್ರವಾದಿಸ ತೊಡಗಿದರು. "ನಿನ್ನ ಮನೆಯಲ್ಲಿ ಎಲ್ಲ ಹೆಣ್ಣು ಮಕ್ಕಳಿದ್ದಾರೆ ಆದರೆ ನಾನು ನಿನ್ನನ್ನು ಪ್ರತ್ಯೇಕವಾಗಿ ಆರಿಸಿಕೊಂಡಿದ್ದೇನೆ, ನೀನು ಅಯಸ್ಕಾಂತದ ರೀತಿಯಲ್ಲಿ ಎಲ್ಲಾ ಜನರನ್ನು ನನ್ನ ಬಳಿಗೆ ಆಕರ್ಷಿಸುತ್ತೀಯಾ, ಅನೇಕ ಭಾಷೆಗಳಲ್ಲಿ ಮಾತನಾಡುತ್ತೀಯಾ, ಮಳೆಯಾಳಂ ಭಾಷೆಯಲ್ಲಿ ಪ್ರಸಂಗಿಸುತ್ತೀಯಾ, ನಿನಗೆ ಗಂಡಿನ ವೇಷ ಗಂಡಿನ ಸ್ವಭಾವ ಕೊಟ್ಟಿರುವುದು ನಾನೇ, ನೀನು ನನ್ನ ಸಭೆಯನ್ನು ಕಟ್ಟುತ್ತೀಯಾ" ಎಂದು ಪ್ರವಾದಿಸಿದರು.

ಈ ರೀತಿ ಕರ್ತನು ನನ್ನನ್ನು ಎಲ್ಲರ ಮುಂದೆ ಮೇಲಕ್ಕೆತ್ತಿದನು. ಅಂದಿನಿಂದ ನನ್ನ ಉಡುಪಿನ ವಿಚಾರವಾಗಿ ಯಾವಾಗಲೂ ಹೀಯಾಳಿಸುತ್ತಿದ್ದವರು ನನ್ನನ್ನು ನೋಡಿ ಏನು ಮಾತನಾಡುವುದಕ್ಕೂ ಮುಂದೆ ಬರಲಿಲ್ಲ. ನಂತರ ಅನೇಕರು ನನಗೆ ಹೇಳಿದರು 'ದೇವರು ನಿನ್ನನ್ನು ಈ ರೀತಿಯಲ್ಲೇ ಇಟ್ಟಿದ್ದಾರೆ ಅದಕ್ಕಾಗಿ ನಾವು ಯಾರೂ ಈ ವಿಚಾರವನ್ನು ಹಿಡಿದು ಏನೂ ಮಾತನಾಡುವುದಿಲ್ಲ, ನೀನು ಹೀಗೇ ಇದ್ದುಕೊಂಡು ಸೇವೆಯನ್ನು ಮುಂದುವರಿಸು' ಎಂದು ಅನೇಕ ಪ್ರೋತ್ಸಾಹದ ಮಾತುಗಳನ್ನು ಆಡಿದರು.

ನನಗಾದರೋ ದೇವರು ಮಾತನಾಡುವ ದೇವರೆಂದು ದೇವರ ವಿಷಯದಲ್ಲಿ ಬಹಳ ಸಂತೋಷವುಂಟಾಯಿತು, ಈಗಲೂ ನನ್ನನ್ನು ಅನೇಕರು ನನ್ನ ಹಿಂದೆ ಒಂದು ಮುಂದೆ ಒಂದು ಮಾತನಾಡುತ್ತಾರೆ, ನಾನಾದರೋ ದೇವರೇ ನೀನೇ ಅವರ ಬಳಿ ಮಾತನಾಡು ಎಂದು ಹೇಳಿ, ಕರ್ತನ ಬಳಿಯಲ್ಲಿ ಒಪ್ಪಿಸಿ ನನ್ನ ಸರ್ವಸ್ವವಾದ ದೇವರ ಬಳಿಯಲ್ಲಿ ಸಂತೋಷದಿಂದ ಜೀವಿಸುತ್ತಿದ್ದೇನೆ.

ಎಷ್ಟೇ ಜನ ನನ್ನನ್ನು ಹೀಯಾಳಿಸಿ ಮಾತನಾಡಿದರೂ, ನನಗೆ ಕರ್ತನ ವಾಕ್ಯವು ಬಲಪಡಿಸುತ್ತಲೇ ಇದೆ. "ಯೆಹೋವನು ಮನುಷ್ಯರಂತೆ ಹೊರಗಿನ ತೋರಿಕೆಯನ್ನು ನೋಡದೆ ಹೃದಯವನ್ನೇ ನೋಡುವವನಾಗಿದ್ದಾನೆ" (1 ಸಮು 16:7) ನಾನು ಹೇಳುವುದು ಒಂದೇ, ಒಂದು ಹೆಣ್ಣು ದೇವರನ್ನು ಅರಿತುಕೊಂಡು ಮನೆಬಿಟ್ಟು ಹೊರಗಡೆ ಜೀವಿಸುವುದು ಅದು ಎಷ್ಟೋ ಕಠಿಣ, ಒಂದು ಗಂಡು ಯಾವ ರಸ್ತೆಯಲ್ಲಿ ಬೇಕಾದರೂ ಜೀವಿಸಬಹುದು, ಆದರೆ ಹೆಣ್ಣಿಗೆ ಎಷ್ಟು ಕಷ್ಟ ಎಂದು ಒಂದು ಭಾರಿ ಯೋಚಿಸಿನೋಡಿ, ದೇವರು ನನಗೆ ಕೊಟ್ಟಿರುವ ಉಡುಪಿನಿಂದಲೇ ನಾನು ಈ ಎಲ್ಲಾ ಕಷ್ಟಗಳನ್ನು ಎದುರಿಸಿಕೊಂಡು ನನಗೆ ಸಹಾಯವಾಯಿತೆಂದು ನಾನು ನಿಜವಾಗಿಯೂ ನಿಮ್ಮ ಬಳಿ ಸಾಕ್ಷಿ

ಹೇಳುತ್ತಿದ್ದೇನೆ. ನಾನು ನನ್ನ ಮನೆ ಬಿಟ್ಟ ಮೇಲೆ ಎಷ್ಟುಭಾರಿ ರಸ್ತೆಯಲ್ಲಿ ಮಲಗಿದ್ದೆನು, ಆದರೆ ನನ್ನನ್ನು ನೋಡಿ ತತ್‌ಕ್ಷಣವಾಗಿ ಯಾರು ಹುಡುಗಿ ಎಂದು ಕಂಡು ಹಿಡಿಯಲು ಆಗುತ್ತಿರಲಿಲ್ಲ, ನನ್ನ ವಸ್ತ್ರನೋಡಿ ಯಾರೋ ಹುಡುಗ ಎಂದುಕೊಂಡು ನನ್ನ ಬಳಿಯಲ್ಲಿ ಮಾತನಾಡಿಸುತ್ತಲೇ ಇರಲಿಲ್ಲ, ದೇವರು ನನಗೆ ವಸ್ತ್ರ ಅಲ್ಲ ವಜ್ರಕವಚ ಕೊಟ್ಟಿದ್ದಾರೆ ಎಂದು ನಾನು ನಿಮ್ಮ ಮುಂದೆ ಧೈರ್ಯವಾಗಿ ಹೇಳುತ್ತೇನೆ.

## 19. ಜೀವನ ಬದಲಾಯಿತು

ಸ್ಮೀತಾ ಮನೆ ಚಿಕ್ಕದ್ದು, ಬಡತನದ ಜೀವನ, ಅದರಲ್ಲಿ ನಾನು ಬೇರೆ ಅವರ ಮನೆಯಲ್ಲಿ ಇದ್ದು ಅವರಿಗೆ ಭಾರಕೊಡುತ್ತಿರುವೆನು ಎನ್ನುವ ನೋವು, ಆದರೂ ಸಹಾ ಅವರು ನನಗೆ ಸಹಾಯ ಮಾಡುತ್ತಿದ್ದರು. ನಾನು ಇದನ್ನೆಲ್ಲಾ ನೋಡಿ ಕೆಲಸಕ್ಕೆ ಹೋಗಲು ಆರಂಭಿಸಿದೆ. ಗಾರ್ಮೆಂಟ್ಸ್ ಹೋಗುತ್ತಿದ್ದೆ ಅಲ್ಲಿ ಬರುವ ಸಂಬಳ ತೆಗೆದು ಬಾಡಿಗೆ ಮನೆಯಲ್ಲಿ ವಾಸ ಮಾಡಲು ಆರಂಭಿಸಿದೆ. ನನ್ನ ಉದ್ದೇಶ ಯಾರಿಗೂ ಕಷ್ಟ ಕೊಡಬಾರದು ಎಂದೇ, ನನ್ನಿಂದ ಯಾರಿಗೂ ಭಾರ ಆಗಬಾರದು ಎನ್ನುವ ಒಂದೇ ಉದ್ದೇಶದಿಂದ ನಾನು ಕಷ್ಟ ಪಡುತ್ತಿದ್ದೆ. ಕೆಲಸಕ್ಕೆ 2 ತಿಂಗಳು ಹೋದರೆ ಸಾಕು ಜ್ವರ ಬಂದು ಮಲಗುತ್ತಿದ್ದೆ, ಮತ್ತೇ ಮನೆಯಲ್ಲಿ ಕಷ್ಟ ಆಗುತ್ತಿತ್ತು, ನನ್ನ ಜೊತೆ ಸ್ಮೀತಾ ಸಹಾ ಕಷ್ಟ ಪಡುತ್ತಿದ್ದಳು. ಮತ್ತೇ ಬೇರೆ ಕೆಲಸ ಹುಡುಕಿಕೊಂಡು ಹೋಗಿ ಅಲ್ಲಿ ಸೇರಿಕೊಂಡು ಸ್ವಲ್ಪ ತಿಂಗಳು ಮಾಡುವುದು. ಆಗ ಸ್ಮೀತಾಗೆ ಉಷಾರಿಲ್ಲದೆ ತುಂಬ ತೊಂದರೆಗಳು ಆಗುತ್ತಿತ್ತು. ಅಂತಹ ಸಮಯದಲ್ಲಿ ಏನು ಮಾಡಬೇಕೋ ಗೊತ್ತಾಗುತ್ತಿರಲಿಲ್ಲ, ಆಗ ದೇವರು ಯಾರನ್ನಾದರು ನಮ್ಮ ಬಳಿ ಕಳುಹಿಸಿ ಸಹಾಯ ಮಾಡುತ್ತಿದ್ದರು.

ಕೆಲವು ದಿನಗಳ ಕಳೆದು ಮತ್ತೇ ಸ್ಮೀತಾ ಮನೆಯಲ್ಲೇ ಇದ್ದೆ. 21 ದಿನದ ಉಪವಾಸ ಪ್ರಾರ್ಥನೆಯಲ್ಲಿ ನನಗೆ 'ಸೂಸಿಸೈಮನ್' ಎನ್ನುವ ಆಂಟಿ ಪರಿಚಯವಾದರು. ಅವರು ಕೇರಳದಲ್ಲಿ ವಾಸವಾಗಿದ್ದ ವ್ಯಕ್ತಿ. ಅವರು ನಾನು ಮಾಡುವ ಪ್ರಾರ್ಥನೆಯನ್ನೂ, ಆರಾಧನೆಯನ್ನೂ ಹಾಗೂ ಸಾಕ್ಷಿಯನ್ನೂ ಕೇಳಿ ತುಂಬಾ ಇಷ್ಟವಾಗಿ ನನ್ನ ಬಳಿ ಮಾತಾಡಲು ಬಂದರು. ಅವರು ನನ್ನನ್ನು ಕೇಳಿದರು-ನೀನು ಕೇರಳದಲ್ಲಿ ಸೇವೆ ಮಾಡುತ್ತೀಯಾ? ಅಲ್ಲಿ ಚರ್ಚ್ ಇದೆ. ಎಂದರು. ನಾನು ಅದಕ್ಕೆ ಒಪ್ಪಿಕೊಂಡೆನು. ಅವರು ಉಪವಾಸ ಮುಗಿದ ಮೇಲೆ ಯಾವಾಗ ಬರಬೇಕು ಎಂದು ತಿಳಿಸುತ್ತೇನೆ ಎಂದು ಹೇಳಿ ಹೊರಟು ಹೋದರು.

ನನಗೆ ಸ್ಮೀತಾ ಮನೆಯಲ್ಲಿ ಇರಲು ಕಷ್ಟವಾಗುತ್ತಿತ್ತು. ಕಾರಣ ಅಲ್ಲಿ ಆಗುವ ಪರಿಸ್ಥಿತಿಗಳು ಹೃದಯಕ್ಕೆ ತುಂಬಾ ದುಃಖ ಆಗುತ್ತಿತ್ತು ಅದನ್ನೆಲ್ಲಾ ನೋಡುವಾಗ ನಾನು ಅವರ ಮನೆಯಲ್ಲಿ ಇರದೇ ಬಸ್ಸ್ ಸ್ಟಾಪ್‌ನಲ್ಲಿ ಕುಳಿತುಕೊಳ್ಳುತ್ತಿದ್ದೆ, ಹೊಟ್ಟೆ ಹಸಿವನ್ನು ತಡೆಯಲಾರದೆ ರಸ್ತೆ ಬದಿಗಳಲ್ಲಿರುವಂತಹ ಕೊಳಾಯಿಗಳಲ್ಲಿ ನೀರು ಕುಡಿದು ಸುಮ್ಮನೆ ಆಗುತ್ತಿದ್ದೆ. ಎಲ್ಲಿಯಾದರು ಕೂಟಗಳು ಇರುವುದಾದರೆ ಅಲ್ಲಿಗೆ ಹೋಗುತ್ತಿದ್ದೆ. ನನ್ನ ಸ್ನೇಹಿತೆಯ ಮನೆಯಲ್ಲಿ ಒಂದೊಂದು ಭಾರಿ ನಿದ್ದೆಯನ್ನೂ ಸಹ ಮಾಡಲು ಆಗುತ್ತಿರಲಿಲ್ಲ. ಆಗ ಬೆಳಗ್ಗೆ ಎದ್ದು ರೈಲ್ವೆ ನಿಲ್ದಾಣಕ್ಕೆ ಹೋಗಿ ಅಲ್ಲಿ ಮಲಗುತ್ತಿದ್ದೆ, ಇದನ್ನು ನೋಡಿ ನನ್ನನ್ನು ಕನಿಕರಿಸುವ ವ್ಯಕ್ತಿ ಒಬ್ಬರೂ ಇಲ್ಲವಲ್ಲ ಎಂದು ತಡೆಯಲಾರದಷ್ಟು ದುಃಖವಾಗುತ್ತಿತ್ತು. ಆಗ ನನ್ನ ಹೃದಯಕ್ಕೆ ಆಗುವಂತಹ ಆಘಾತ ಯಾರಿಗೂ ಅರ್ಥವಾಗುತ್ತಿರಲಿಲ್ಲ. ಅಂತಹ ಸಮಯದಲ್ಲಿ ನನ್ನ ಕರ್ತನು ನನ್ನನ್ನು ಆದರಿಸಿ ಪ್ರೀತಿಯನ್ನು ತೋರಿಸುತ್ತಿದ್ದರು. ತನ್ನ ವಾಕ್ಯದಿಂದ ನನ್ನ ಬಳಿಯಲ್ಲಿ ಮಾತನಾಡಿ ಸಂತೈಸುತ್ತಿದ್ದರು. ಕರ್ತನ ವಾಕ್ಯವೇ ನನಗೆ ತುಂಬಾ ಹೆಚ್ಚಾಗಿ ಬಲಪಡಿಸುತ್ತಿತ್ತು. ಎಂತಹ ಪರಿಸ್ಥಿತಿಯಲ್ಲೂ ನನ್ನ ಕರ್ತನು ನನ್ನನ್ನು ಕೈಬಿಡದೇ ಕಾಯುತ್ತಿದ್ದುದನ್ನು ಈಗಲೂ ನೆನೆಸಿ ಹೃದಯಪೂರ್ವಕವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

"ಜನರೇ ಯಾವಾಗಲೂ ಆತನನ್ನೇ ನಂಬಿ ನಿಮ್ಮ ಹೃದಯವನ್ನು ಆತನ ಮುಂದೆ ಬಿಚ್ಚಿರಿ; ದೇವರು ನಮ್ಮ ಆಶ್ರಯ" (ಕೀರ್ತ 62;8) ನಾನು ಹೃದಯವನ್ನು ಬಿಚ್ಚಿ ಆತನೊಟ್ಟಿಗೆ ಮಾಡನಾಡುವಾಗ ನನ್ನ ಕರ್ತನು ನನಗೆ ಆಶ್ರಯದುರ್ಗವಾಗಿ ಸಂತೈಸುತ್ತಿದ್ದನು. ಆಗ ಎಲ್ಲಾ ನೋವುಗಳನ್ನು ಮರೆಯುತ್ತಿದ್ದೆ. ಇದೇ ರೀತಿ ಮನೆ ಬಿಟ್ಟ ದಿನದಿಂದ 7 ವರ್ಷಗಳು ಕಳೆದು ಹೋದವು. ಆದರೆ ನನ್ನನ್ನು ಕರ್ತನು ತನ್ನ ಸೇವೆಯಲ್ಲಿ ಬಲವಾಗಿ ಉಪಯೋಗಿಸಿಕೊಳ್ಳುತ್ತಿದ್ದದ್ದು ನನಗೆ ತುಂಬಾ ಸಂತೋಷ ಆಗುತ್ತಿತ್ತು. ನಾನು ಮೈಸೂರು, ಮಂಗಳೂರು, ಬೆಳಗಾಂ, ಚೆನ್ನೈ. ಆಂಧ್ರ, ಕೇರಳ ಎಲ್ಲಾ ಕಡೆಗೆ ಹೋಗಿ ಸೇವೆ ಮಾಡಿದೆನು.

ಸೂಸಿಸ್ಯೆಮನ್ ಆಂಟಿ ಕೇರಳಕ್ಕೆ ಕರೆದುಕೊಂಡು ಹೋಗಿ ಅಲ್ಲಿ ಸೇವೆಗೆ ಬಿಟ್ಟರು. ಒಂದುವರೆ ತಿಂಗಳುಗಳ ಕಾಲ ನಾನು ಸೇವೆ ಮಾಡುತ್ತಾ ಇದ್ದೆನು. ಆ ಸಮಯದಲ್ಲಿ ಕೆಲವು ಕುಟುಂಬಗಳು ಪರಿಚಯವಾಯಿತು. ಅಲ್ಲಿ ಒಂದು ಕುಟುಂಬಕ್ಕಾಗಿ ಪ್ರಾರ್ಥನೆಯನ್ನು ಮಾಡಲು ಹೋಗಿದ್ದಾಗ ಅಲ್ಲಿ ಕೆಲವು ಸೇವಕರು ಬಂದಿದ್ದರು. ಅವರು ನನ್ನ ಸಾಕ್ಷಿಯನ್ನು ಬಹು ಆಸಕ್ತಿಯಿಂದ

ಕೇಳಿದರು. ನಂತರ ನನ್ನ ಬಳಿ ಹೀಗೆ ಕೇಳಿದರು 'ಸಿಸ್ಟರ್ ನಿಮ್ಮ ಸೇವೆ ತುಂಬಾ ಚೆನ್ನಾಗಿದೆ ನೀವು ಮಲೇಷಿಯಾದಲ್ಲಿ ಸೇವೆ ಮಾಡಲು ಬರುತ್ತೀರಾ! ನಿಮ್ಮ ಬಳಿ ಪಾಸ್‌ಪೋರ್ಟ್ ಇದಿಯಾ?' ಎಂದು ಕೇಳಿದರು. ನಾನು ನನ್ನ ಬಳಿ ಪಾಸ್‌ಪೋರ್ಟ್ ಇಲ್ಲವಲ್ಲ ಎಂದು ನೊಂದುಕೊಂಡೆನು. ಅವರಾದರೋ ನೀವು ಪಾಸ್‌ಪೋರ್ಟ್‌ಅನ್ನು ಮಾಡಿಸಿಕೊಂಡು ಬಂದರೆ ಮಲೇಶಿಯಾದಲ್ಲಿ ಸೇವೆ ಮಾಡಲು ಕರೆದುಕೊಂಡು ಹೋಗುತ್ತೇವೆ ಎಂದು ಮಾತುಕೊಟ್ಟರು. ಅಲ್ಲಿ ಟ್ರೈನಿಂಗ್ ಇರುತ್ತದೆ ಅದರ ನಂತರ ಎಲ್ಲಿ ಬೇಕಾದರೂ ಸೇವೆ ಮಾಡಬಹುದು. ಅದರಿಂದ ನಿಮಗೆ ಎಲ್ಲಾ ಅನುಕೂಲ ಆಗುತ್ತದೆ ಎಂದು ಹೇಳಿದರು. ನಾನು ಆಯಿತು ಪಾಸ್‌ಪೋರ್ಟ್ ಮಾಡಿಸಿಕೊಂಡು ಬರುತ್ತೇನೆ ಎಂದು ಹೇಳಿ ಬೆಂಗಳೂರಿಗೆ ವಾಪಸ್ಸಾದೆನು.

ಸ್ಮಿತಾಳಿಗೆ ಈ ವಿಷಯ ತಿಳಿಸೋಣ ಎಂದು ಮನಸ್ಸಿನಲ್ಲಿ ಅಂದುಕೊಂಡು ಬೆಂಗಳೂರಿಗೆ ಬಂದೆನು. ಆವಳಾದರೋ ನಾನು ಬರುತ್ತಿದ್ದಂತೆಯೇ ಹೀಗೇ ಹೇಳಿದಳು - "ಲಕ್ಷ್ಮೀ ಆಂಟಿ ಮನೆಯಲ್ಲಿ 3 ದಿನ ಉಪವಾಸಕ್ಕೆ ಮನೆಗೆ ಕರೆದಿದ್ದಾರೆ ನಾನು ನೀನು ಬಂದ ಮೇಲೆ ಬರುತ್ತೇವೆ ಎಂದು ಹೇಳಿದ್ದೇನೆ ಬಾ ಅಲ್ಲಿಗೆ ಹೋಗಿ ಬರೋಣ" ಎಂದು ಹೇಳಿದಳು. ನಾನು ಅದಕ್ಕೆ ಒಪ್ಪಿಕೊಂಡೆನು. ಆದರೆ ನನ್ನ ವಿಷಯ ಅವಳ ಹತ್ತಿರ ಹೇಳಲು ಆಗಲೇ ಇಲ್ಲ, ನಾನು ಸಹಾ ಸಮಯ ಸಿಕ್ಕಿದಾಗ ಹೇಳೋಣ ಎಂದು ಸುಮ್ಮನಾದೆನು. ಅವರಿಗೋಸ್ಕರ ಮೂರುದಿನ ಉಪವಾಸ ಪ್ರಾರ್ಥನೆ ಮಾಡುವ ಸಲುವಾಗಿ ಅವರ ಮನೆಗೆ ಹೋದೆವು. ಅವರ ಮನೆ ಹೊಸ ಮನೆ ಇನ್ನು ಪೂರ್ತಿಯಾಗಿ ಕಟ್ಟಿರಲಿಲ್ಲ. ಮಲಗುವುದಕ್ಕೆ ಸ್ಥಳವು ಬೇರೆ ಸರಿಯಾಗಿರಲಿಲ್ಲ, ನಾನು ಇಲ್ಲಿ ಹೇಗೆ ಮಲಗುವುದು. ಚಳಿ ಬೇರೆ ಇದೆ ಬಾಗಿಲುಗಳು ಬೇರೆ ಇಲ್ಲ, ನೆಲ ಇನ್ನು ಹಾಕಿರಲಿಲ್ಲ, ಅಲ್ಲೇ ಮರಳಿನಲ್ಲಿ ಚಾಪೆ ಹಾಕಿಕೊಂಡು ಮಲಗಬಹುದು ಎಂದು ಹೇಳಿದರು. ನಾನು ಸುಮ್ಮನೆ ನಿಂತು ಎಲ್ಲವನ್ನು ಮನಸ್ಸಿನಲ್ಲೇ ಯೋಚಿಸುತ್ತಿದ್ದೆ, ಏನು ಮಾಡಬೇಕೋ ಗೊತ್ತಾಗಲಿಲ್ಲ,

ರುಕ್ಮಿಣಿ ಸಿಸ್ಟರ್ ಎನ್ನುವವರು ಒಬ್ಬರು ಅಲ್ಲಿಗೆ ಬಂದರು ನಮ್ಮೊಂದಿಗೆ ಮಾತನಾಡಿ ನೀವಿಬ್ಬರು ಇಲ್ಲಿ ಮಲಗಲು ಅನುಕೂಲವಿಲ್ಲವಲ್ಲ ನೀವು ನಮ್ಮ ಮನೆಗೆ ಬನ್ನಿರಿ ಅಲ್ಲಿ ರಾತ್ರಿ ಮಲಗಿದ್ದು, ಬೆಳಿಗ್ಗೆ ಇಲ್ಲಿಗೆ ಬಂದು ಪ್ರಾರ್ಥನೆ ಮಾಡಬಹುದು ಎಂದು ಹೇಳಿದರು. ನನಗೆ ತುಂಬಾ ಸಂತೋಷ ಆಯಿತು. ಆದರೂ ನಮ್ಮನ್ನು ಕರೆದಿರುವ ಆಂಟಿಯವರು ಇದಕ್ಕೆ ಒಪ್ಪುವರೋ ಇಲ್ಲವೋ ಎಂದು ಯೋಚಿಸುತ್ತಿದ್ದೆ, ಆದರೆ ರುಕ್ಮಿಣಿ ಸಿಸ್ಟರ್ ಹೇಳಿದ್ದು ಆ ಆಂಟಿಯವರಿಗೂ

ಸರಿ ಎಂದು ತೋಚಿತು, ದೇವರ ಕೃಪೆಯಿಂದ ಅವರೂ ಒಪ್ಪಿಕೊಂಡರು.

"ಯೆಹೋವನು ನನಗೆ ಕುರುಬನು; ಕೊರತಡಪಡೆನು, ಆತನು ಹಸುರುಗಾವಲುಗಳಲ್ಲಿ ನನ್ನನ್ನು ತಂಗಿಸುತ್ತಾನೆ; ವಿಶ್ರಾಂತಿಕರವಾದ ನೀರುಗಳ ಬಳಿಗೆ ಬರಮಾಡುತ್ತಾನೆ." ಎಂದು ಕೀರ್ತ 23:1,2 ರಲ್ಲಿ ಹೇಳುತ್ತದೆ. ಅದೇ ರೀತಿಯಲ್ಲಿ ರುಕ್ಮಿಣಿ ಸಿಸ್ಟರ್ ನಮಗೆ ಸಹಾಯ ಮಾಡಿದರು, 3 ದಿನ ಉಪವಾಸ ಮುಗಿಯಿತು, ನಂತರ ಸಿಸ್ಟರ್ ನಮ್ಮ ಮನೆಯಲ್ಲಿಯೂ ನಮಗಾಗಿಯೂ 3 ದಿನ ಉಪವಾಸ ಪ್ರಾರ್ಥನೆ ಮಾಡಿ ಇಲ್ಲೇ ಇರಿ, ನಾನು ನೋಡಿಕೊಳ್ಳುತ್ತೇನೆ ಎಂದು ರುಕ್ಷ್ಮಿಣಿ ಸಿಸ್ಟರ್ ಹೇಳಿದರು. ಆಗ ನಾನು ಅದಕ್ಕೆ ಒಪ್ಪಿಕೊಂಡು 3 ದಿನ ಅವರಿಗೋಸ್ಕರವಾಗಿ ಉಪವಾಸ ಮಾಡುತ್ತಾ ಅಲ್ಲೇ ಇದ್ದೆ. ದೇವರ ಕೃಪೆಯಿಂದ ಉಪವಾಸ ಪ್ರಾರ್ಥನೆ ನಡೆಸಲು ಸಾಧ್ಯವಾಯಿತು. 3 ದಿನದ ನಂತರ ನಾನು ಸ್ಮೀತಾ, ನಾವು ಹೋಗಿಬರುತ್ತೇವೆ ಎಂದು ಹೇಳಿದಾಗ ಆ ಸಿಸ್ಟರ್ ಹೇಳಿದರು, ನಿಮ್ಮ ಹಾಗೆ ಸೇವೆ ಮಾಡುವ ಒಬ್ಬ ವ್ಯಕ್ತಿ ಇದ್ದಾರೆ, ನೀವು ಅವರಿಗಾಗಿ ಪ್ರಾರ್ಥಿಸಿ ನಂತರ ಹೋಗಬಹುದು ಎಂದು ಹೇಳಿದರು. ಸರಿ ಎಂದು ನಾವು ಆ ವ್ಯಕ್ತಿಗಾಗಿ ಕಾಯುತ್ತಿದ್ದೆವು.

ನಾನು ಆ ಮನೆಯಲ್ಲಿರುವಾಗ ನನ್ನೊಟ್ಟಿಗೆ ಆ ದಿನದಂದು ಸುಮಾರು 10-15 ಜನರು ನಾವು ಕಾಯುತ್ತಾ ಇದ್ದಂತಹ ಆ ಸಹೋದರಿಗೋಸ್ಕರ ಅವರೆಲ್ಲರು ಕಾಯುತ್ತಿದ್ದರು. ಅವರೆಲ್ಲರೂ ಬಹಳ ಜೋರಾದ ಶಬ್ಧದಿಂದ ಮಾತಾಡುತ್ತಿದ್ದರು, ನನಗಾದರೋ ಆ ಶಬ್ಧ ಬಹಳ ಹಿಂಸೆ ಆಗುತ್ತಿತ್ತು, ಅವರನ್ನು ನಿಶಬ್ಧವಾಗಿ ಇರಿಸಲು ನಾನು ಪ್ರಯತ್ನ ಸಹ ಮಾಡಲಿಲ್ಲ. ಅಂತಹ ಶಬ್ಧ! ಆಗ ನಾವು ಕಾಯುತ್ತಿದ್ದ ವ್ಯಕ್ತಿ ಬಂದರು, ಬಂದ ತಕ್ಷಣವೇ ಮಳೆ ಜೋರಾಗಿ ಬಂದು ಯಾವ ರೀತಿ ದಿಢೀರನೇ ಶಬ್ಧ ಕಡಿಮೆಯಾಗುತ್ತದೋ, ಆ ರೀತಿ ಅಲ್ಲಿರುವ ಜನರೆಲ್ಲಾ ನಿಶಬ್ಧವಾದರು, ಇದನ್ನು ನೋಡಿ ನನಗೆ ತುಂಬಾ ಆಶ್ಚರ್ಯವಾಯಿತು - - - ಭಯನೂ ಆಯಿತು. ಏನಿದು ಆಶ್ಚರ್ಯ ಈ ಸಹೋದರಿ ಬಂದ ತಕ್ಷಣ ಎಲ್ಲರೂ ಈ ರೀತಿ ಗಪ್‌ಚಿಪ್ ಆದರಲ್ಲಾ! ಎಂದು ಚಿಂತೆಮಾಡಿದೆ, ಆಗ ಅವರು ಒಬ್ಬ ಪ್ರವಾದಿನಿಯಾಗಿದ್ದಾರೆ ಎಂದು ತಿಳಿಯಿತು.

ದೇವರು ಆ ಸಹೋದರಿಯ ಮುಖಾಂತರ ಹೇಳಿರುವ ಒಂದೊಂದು ಆಲೋಚನೆಗಳು ಒಬ್ಬೊಬ್ಬರ ಜೀವನದಲ್ಲಿ ನಡೆಯುತ್ತಿದ್ದಂತಹ ಕಾರಣ ಎಲ್ಲರೂ ಇವರನ್ನು ಹುಡುಕಿಕೊಂಡು ಅವರ ಹತ್ತಿರ ಬರುತ್ತಾರೆ ಎಂದು ತಿಳಿಯಿತು. ಆದರೆ ಆ ಸಹೋದರಿಯಾದರೋ ಮನೆಯಲ್ಲಿ ಯಾರಿಗೂ ಗೊತ್ತಿಲ್ಲದೇ ರಹಸ್ಯವಾಗಿ ಸೇವೆಯನ್ನು ಮಾಡುತ್ತಿದ್ದರೆಂದು ತಿಳಿದು ನನಗೆ ತುಂಬಾ

ಆಶ್ಚರ್ಯವಾಯಿತು, ನಾನು ನೆನೆಸಿದೆ ಇದು ಸುಲಭವಲ್ಲವೆಂದು. ಆದರೆ ಇವರು ಕರ್ತನಿಗಾಗಿ ಹೇಗಾದರೂ ಸೇವೆಯನ್ನು ಮಾಡಲೇಬೇಕು ಎನ್ನುವ ಛಲದಿಂದ ಮಾಡುತ್ತಿದ್ದರು, ಮತ್ತು ಎಲ್ಲರನ್ನು ಎದುರಿಸಿಕೊಂಡು ಅಂತಹ ಸೇವೆಯನ್ನು ಮಾಡಬೇಕೆನ್ನುವ ಅವರಲ್ಲಿರುವ ಉತ್ಸಾಹ ಹಾಗೂ ಧೈರ್ಯ, ನನ್ನಲ್ಲಿ ಇನ್ನೂ ವೈರಾಗ್ಯ ತಂದಿತು. ಇಂಥವರ ಸಹವಾಸ ಬೆಳೆಸುವುದಾದರೆ ಆತ್ಮೀಕದಲ್ಲಿ ಬೆಳೆಯಲು ನನಗೆ ಇನ್ನೂ ಸಾಧ್ಯವಾಗುತ್ತದೆ ಎಂದು ಮನಸ್ಸಿನಲ್ಲಿ ತೀರ್ಮಾನ ಮಾಡಿಕೊಂಡೆನು.

ಅವರ ಹೆಸರು 'ಪರಿಮಳ' ಎಂದು ನನಗೆ ಪರಿಚಯವಾಯಿತು. ನಾನು ಇವರಿಗಾಗಿ ಪ್ರಾರ್ಥಿಸಿದೆ, ದೇವರು ಕೆಲವು ಆಲೋಚನೆ ನೀಡಿದರು ಅದನ್ನು ಅವರ ಬಳಿ ಹಂಚಿಕೊಂಡೆ. ಪರಿಮಳ ಅವರಿಗೆ ನನ್ನ ಮುಖಾಂತರ ಬಂದ ಪ್ರವಾದನೆ ಕೇಳಿ ಎಲ್ಲಾ ಸರಿಯಾಗಿ ಇದೆ ಎಂದು ಹೇಳಿದರು. ಅವರ ಮುಂದೆ ಕರ್ತನು ನನ್ನನ್ನು ಉಪಯೋಗಿಸಿ ಕೊಂಡದ್ದಕ್ಕಾಗಿ ದೇವರಿಗೆ ಸ್ತೋತ್ರ.

ಅವರು ನನಗಾಗಿಯೂ ಪ್ರಾರ್ಥಿಸಿದರು. ಅನೇಕ ಆಲೋಚನೆಯನ್ನು ಸಹ ಕೊಟ್ಟರು, ನಂತರ ನಾನು ಸ್ಮೀತಾ ಅಲ್ಲಿಂದ ಹೊರಟು ಸ್ಮೀತಾ ಮನೆಗೆ ವಾಪಾಸ್ಸಾದೆವು. ಆದರೆ ಸಹೋದರಿ ಪರಿಮಳ ಅವರನ್ನು ನೆನೆಸಿ ಪ್ರಾರ್ಥಿಸಿದೆ. ನಂತರ ಪರಿಮಳ ಅವರು ನನಗೆ ಫೋನ್ ಮಾಡಿದರು. ಅವರ ವಿಷಯಗಳನ್ನು ನನಗೆ ಹೇಳಿದರು. ನಾನು ಅವರಿಗಾಗಿ ಕರ್ತನಲ್ಲಿ ಪ್ರಾರ್ಥಿಸಿದೆ. ಅವರ ವಿಷಯವಾಗಿ ನನಗೆ ದೇವರಿಂದ ಬಂದ ಉತ್ತರವೇನೆಂದರೆ  'ನೀನು ಹೊರಗೆ ಇದ್ದು ಕಷ್ಟ ಪಡುತ್ತಿದ್ದೀಯಾ; ಅವರು ಒಳಗೆ ಇದ್ದು ನೋವು ಅನುಭವಿಸುತ್ತಿದ್ದಾರೆ' ಎಂದು ಹೇಳಿದಾಗ ನನಗೆ ತುಂಬಾ ದುಃಖವಾಯಿತು. ಆಕೆ ನನ್ನನ್ನು ತನ್ನ ಮನೆಗೆ ಆಹ್ವಾನಿಸಿದರು. ನಾನು ಮತ್ತು ಸ್ಮೀತಾ ಇಬ್ಬರೂ ಸಹ ಅವರ ಮನೆಗೆ ಹೋದೆವು, ಅವರು ನಮ್ಮೊಂದಿಗೆ ಚೆನ್ನಾಗಿ ಪ್ರೀತಿಯಿಂದ ಮಾತಾಡಿದರು. ಊಟ ಬಡಿಸಿದರು. ನಾವು ಅವರೊಟ್ಟಿಗೆಯಿದ್ದು ನಂತರ ಮನೆಗೆ ಬಂದು, ಅವರು ಮಾಡಿದ ಉಪಚಾರ ನೆನಸಿಕೊಂಡಾಗ ಭಯವಾಯಿತು, ಯಾಕೆಂದರೆ ಶ್ರೀಮಂತರ ಕುಟುಂಬದ ಮಗಳು, ಬೆಳ್ಳಿ ತಟ್ಟೆಯಲ್ಲಿ ಊಟ, ಹಣಕ್ಕೆ ಕೊರತೆಯಿಲ್ಲ. ಈ ರೀತಿ ಇರುವ ವ್ಯಕ್ತಿಯೊಟ್ಟಿಗೆ ಸ್ನೇಹ ಬೆಳೆಸುವುದು ಕಷ್ಟವೆಂದೆನಿಸಿತು; ಮತ್ತೊಂದು ಕಡೆ ಇಂಥಹ ವ್ಯಕ್ತಿಯು ಕ್ರಿಸ್ತನಿಗಾಗಿ ಈ ರೀತಿಯಲ್ಲಿ ವೈರಾಗ್ಯದಿಂದಿರುವುದು ನನ್ನ ಆತ್ಮೀಕ ಜೀವನಕ್ಕೆ ಹುರಿದುಂಬಿಸಿದಂತಾಯಿತು. ಇವರ ಸ್ನೇಹವನ್ನು ನಾನು ಬೆಳೆಸಬೇಕೋ ಬೇಡವೋ ಎಂದು ಕರ್ತನ ಬಳಿಯಲ್ಲಿ ಒಂದು ಗುರುತನ್ನು ಇಟ್ಟು ಪ್ರಾರ್ಥಿಸಿದೆ,

“ಯೇಸಪ್ಪಾ ನಾನು ಇವರ ಸ್ನೇಹ ಬೆಳಸಬೇಕೆಂದರೆ ಅವರು ನಾನಿರುವ ಸ್ಥಳಕ್ಕೆ ಬರುವುದಕ್ಕೆ ಈಗ ಕರೆಯುತ್ತೇನೆ, ಅವರು ನನ್ನ ಮಾತಿಗೆ ಒಪ್ಪಿಕೊಂಡು ಬರುತ್ತೇನೆ ಎಂದು ಹೇಳಿ ಬಂದರೆ ಇವರ ಸ್ನೇಹ ನಾನು ಬೆಳೆಸಬಹುದು ಎಂದು ನಾನು ಅರ್ಥಮಾಡಿಕೊಳ್ಳುತ್ತೇನೆ’ ಎಂದು ಪ್ರಾರ್ಥಿಸಿದೆ.

ಪರಿಮಳ ಅವರಿಗೆ ನಾನು ಫೋನ್ ಮಾಡಿ ಸ್ಮೀತಾ ಮನೆ ವಿಳಾಸ ತಿಳಿಸಿ ನನ್ನ ಗುರುತಿನ ಪ್ರಾರ್ಥನೆಯ ಪ್ರಕಾರ ನಾನಿರುವ ಸ್ಥಳಕ್ಕೆ ಆಹ್ವಾನಿಸಿದೆ. ಅವರು ನನ್ನನ್ನು ಹುಡುಕಿಕೊಂಡು ಬಂದು ನನ್ನೊಟ್ಟಿಗೆ ತುಂಬಾ ಪ್ರೀತಿಯಿಂದ ಮಾತನಾಡಿದರು. ನಾನು ಸಹಾ ಮನಬಿಚ್ಚಿ ಮಾತಾಡಿ ನಾನು ಪಡುತ್ತಿರುವ ಎಲ್ಲಾ ಕಷ್ಟ-ಪಾಡುಗಳನ್ನು ಹಂಚಿಕೊಂಡೆನು.

ನನಗೆ- ಪಾಸ್‌ಫೋರ್ಟ್ ಅವಶ್ಯಕತೆಯಿದೆ ಎನ್ನುವ ವಿಷಯವನ್ನು ತಿಳಿಸಿದೆ. ಅವರು ಅದಕ್ಕೆ ಬೇಕಾದ ಎಲ್ಲಾ ದಾಖಲೆಗಳನ್ನು ಕೇಳಿದರು. ಆದರೆ ನನ್ನ ಬಳಿ ಅವರು ಕೇಳಿದಂತಹ ಯಾವ ದಾಖಲೆಗಳೂ ಇಲ್ಲವೆಂದು ನಾನು ನೊಂದುಕೊಂಡೆನು. ಪಾಸ್‌ಫೋರ್ಟ್‌ಗಾಗಿ ಮನೆಯ ‘ರೆಂಟಲ್ ಅಗ್ರಿಮೆಂಟ್’ ಮಾಡಿಕೊಳ್ಳಬೇಕೆಂದು ಅವರು ತಿಳಿಸಿದಾಗ ನಾನು ಅದು ಬೇಕಾದರೆ ಕೊಡುತ್ತೇನೆ ಯಾಕೆಂದರೆ ನನ್ನ ಗೆಳತಿ ಸ್ಮೀತಾ ಮನೆಯಲ್ಲೇ ಇರೋದು ನಾನು ಅವಳ ಬಳಿಯಲ್ಲಿ ಕೇಳಿದರೆ ಖಂಡಿತವಾಗಿ ನನಗೆ ಆಕೆ ಸಹಾಯ ಮಾಡುತ್ತಾಳೆ ಎಂದು ಹೇಳಿದೆನು. ನಂತರ ಅವರು ನನ್ನನ್ನು ಕರೆದುಕೊಂಡು ಹೋಗಿ ನನಗೆ ಒಂದು ಅಗ್ರಿಮೆಂಟ್ ಪತ್ರವನ್ನು ಮಾಡಿಸಿಕೊಟ್ಟು ಇದಕ್ಕೆ ನಿನ್ನ ಸ್ನೇಹಿತೆಯಿಂದ ಒಂದು ಸಹಿ ಹಾಕಿಸಿಕೊಂಡು ಬಾ, ನಂತರ ಮುಂದೆ ಏನು ಮಾಡಬೇಕೋ ಎಲ್ಲವನ್ನು ತಿಳಿಸುತ್ತೇನೆ ಅಂದರು. ನಾನು ಅದಕ್ಕೆ ತುಂಬಾ ಸಂತೋಷದಿಂದ ಸ್ಮೀತಾ ಹತ್ತಿರ ಬಂದು ಎಲ್ಲಾ ವಿಷಯವನ್ನು ಸಂತೋಷದಿಂದಲೇ ತಿಳಿಸಿದೆ, ನನಗೆ ದೇವರು ಒಂದು ಮಾರ್ಗವನ್ನು ತೆರೆದಿದ್ದಾರೆಂತಲೂ ಸಹೋದರಿ ಪರಿಮಳ ಅವರು ನಾನು ಮಲೇಶಿಯಾಗೆ ಹೋಗಲು ಪಾಸ್‌ಫೋರ್ಟ್ ಮಾಡಿಕೊಡಲು ನೆರವಾಗಿ ನಿಂತಿದ್ದಾರೆಂತಲೂ, ಅದಕ್ಕಾಗಿ ಅಡ್ರೆಸ್ ಫ್ರೂಫ್‌ಗಾಗಿ ಈ ರೆಂಟಲ್ ಅಗ್ರಿಮೆಂಟ್ ಮಾಡಿಸಿಕೊಟ್ಟಿದ್ದಾರೆ, ಅದಕ್ಕಾಗಿ ಒಂದು ಸಹಿ ಬೇಕೆಂತಲೂ ನನಗೆ ತಿಳಿಸಿದ್ದಾರೆಂದು ನಾನು ಉತ್ಸಾಹದಿಂದ ಅವಳಿಗೆ ತಿಳಿಸಿದೆ. ಸ್ಮೀತಾ ಇದೆಲ್ಲವನ್ನು ತನ್ನ ತಾಯಿ ಮತ್ತು ಅಕ್ಕನೊಟ್ಟಿಗೆ ತಿಳಿಸಿದಳು.

ಆಗ ಅವಳ ಮನೆಯವರೆಲ್ಲರೂ ನನ್ನನ್ನು ತಪ್ಪಾಗಿ ತಿಳಿದುಕೊಂಡು ಬಾಯಿಗೆ ಬಂದ ರೀತಿಯಲ್ಲಿ ಬೈದರು. ನಮಗಿರುವುದು ಒಂದೇ ಮನೆ ಆ ಮನೆಯ ಮೇಲೆಯೂ ಕಣ್ಣು ಹಾಕಿದ್ದೀಯಾ ಎಂದು, ನಾನು ಹೇಳುವುದನ್ನು

ಸರಿಯಾಗಿ ಅರ್ಥಮಾಡಿಕೊಳ್ಳದೇ ನನ್ನನ್ನು ಅವಮಾನ ಪಡಿಸಿದರು. ನನಗೆ ತುಂಬಾ ಸಹಿಸಲಾರದಷ್ಟು ದುಃಖವಾಯಿತು, ತತ್‌ಕ್ಷಣವೇ ನಾನು ಅವರ ಮುಂದೆ ಆ ರೆಂಟಲ್ ಅಗ್ರಿಮೆಂಟ್ ಪತ್ರವನ್ನು ಹರಿದುಹಾಕಿದೆ. ಇನ್ನು ಮುಂದೆ ನಿಮ್ಮ ಮನೆಗೆ ನಾನು ಬರುವುದೇ ಇಲ್ಲಾ ಎಂದು ಹೇಳಿ ಅದೇ ರಾತ್ರಿಯಲ್ಲೇ ನನ್ನ ಬಟ್ಟೆಗಳನ್ನು ತೆಗೆದುಕೊಂಡು ಅವರ ಮನೆಯಿಂದ ಒಂದು ಕ್ಷಣವೂ ಸಹ ಯೋಚನೆ ಮಾಡದೆ ಹೊರಗೆ ಬಂದು ಬಿಟ್ಟೆನು. ಹೊರಗಡೆ ಬಂದ ಮೇಲೆ ನಾನು ಎಲ್ಲಿಗೆ ಹೋಗಬೇಕು, ಏನು ಮಾಡಬೇಕೋ ನನಗೆ ಗೊತ್ತಾಗಲೇ ಇಲ್ಲ. ನಂತರ ಯೋಚಿಸಿದೆ ಈ ರಾತ್ರಿ ಎಲ್ಲಾದರೂ ಇದ್ದರೆ ನಾಳೆ ಆಂಧ್ರಗೆ ಹೋಗಿಬಿಡೋಣ ಎಂದು ತೀರ್ಮಾನ ಮಾಡಿಕೊಂಡೆನು, ಆದರೆ ಯಾರ ಮನೆಗೆ ಹೋಗುವುದು ಎಂದೆಲ್ಲಾ ಚಿಂತೆ ಮಾಡಿ ಕಡೆಗೆ ಪರಿಮಳ ಅವರನ್ನು ಒಂದು ಮಾತನ್ನು ಕೇಳೋಣ ಎಂದು ಚಿಂತೆ ಮಾಡಿ ಅವರಿಗೆ ಫೋನ್ ಮಾಡಿ ನಡೆದಂತ ಎಲ್ಲಾ ವಿಷಯವನ್ನು ಏನೂ ಮರೆಮಾಚದೆ ತಿಳಿಸಿದೆ, ಅವರಾದರೋ ಏನೂ ಚಿಂತೆಮಾಡದೆ ಹೇಳಿದರು, ಎಲ್ಲಿಗೂ ಹೋಗಬೇಡಿ ಮನೆಗೆ ಬನ್ನಿರಿ ಎಂದು ಕರೆದರು. ನಾನು ಆಟೋ ಹಿಡಿದು ಮನೆ ಹತ್ತಿರ ಹೋದೆನು. ನನ್ನನ್ನು ಮನೆಯೊಳಗೆ ಕರೆದುಕೊಂಡು ಹೋಗಿ ಆದರಿಸಿ ಊಟ ಮಾಡಿಸಿದರು. ನಾನು ಮನಸ್ಸಿನಲ್ಲಿ ಅಂದುಕೊಂಡೆ ಇವತ್ತು ರಾತ್ರಿ ಇಲ್ಲೇ ಇದ್ದು ನಾಳೆ ಬೇಗನೆ ಆಂಧ್ರಗೆ ಹೊರಟು ಹೋಗೋಣ, ನನ್ನಿಂದ ಇವರು ಯಾವ ಕಷ್ಟ ಪಡಬಾರದೆಂದು ಆಲೋಚನೆ ಮಾಡಿಕೊಂಡೆನು.

ಪರಿಮಳ ಅವರು ನನಗೆ ತೋರಿಸುತ್ತಿದ್ದ ಪ್ರೀತಿ ತುಂಬಾ ಆಶ್ಚರ್ಯವಾಗುತ್ತಿತ್ತು. ಕಾರಣ ನಾನು ಅಂತಹ ಒಳ್ಳೇ ಪ್ರೀತಿಯನ್ನು ನಾನು ಯಾವ ಸ್ನೇಹಿತೆಯರಲ್ಲಿಯೂ ಈವರೆಗೂ ಕಂಡಿರಲ್ಲಿಲ್ಲ, ಎಲ್ಲ ವ್ಯಕ್ತಿಗಳು ಒಳಗೊಂದು ಹೊರಗೊಂದು ಪ್ರೀತಿಯನ್ನು ತೋರಿಸಿ ಮೆಚ್ಚುಸುತ್ತಾರೆ, ಆದರೆ ಇವರು ತೋರುತ್ತಿದ್ದ ಯಥಾರ್ಥದ ಪ್ರೀತಿಯು ನನಗೆ ತುಂಬಾ ಆಶ್ಚರ್ಯವನ್ನುಂಟು ಮಾಡಿತು.

ನಾನು ದೇವರಲ್ಲಿ ಯಾವಾಗಲೂ ಹೀಗೆ ಪ್ರಾರ್ಥಿಸುತ್ತಿದ್ದೆ - 'ಯೇಸಪ್ಪಾ ನನಗೆ ಬೆಂಗಳೂರಿನಲ್ಲಿ ಒಂದು ಚಿಕ್ಕ ಮನೆಯನ್ನು ಕೊಡಿ ಅದಕ್ಕೆ ನಾನು 'ಪ್ರಾರ್ಥನಾ ಮಂದಿರ' ಎಂದು ಹೆಸರಿಟ್ಟು ನಿನ್ನ ಸೇವೆ ಮಾಡುತ್ತೇನೆ.' ಎಂದು. ಈ ಪ್ರಾರ್ಥನೆಗೆ ಕರ್ತನು ಉತ್ತರವಾಗಿ-'ನಾನು ನಿನಗೆ ಮನೆಕೊಟ್ಟು ನಿನ್ನ ಜೊತೆಯಲ್ಲಿ ಇರುವುದಕ್ಕೆ ಒಂದು ಆಶ್ರಯವ್ಯಕ್ತಿಯನ್ನೂ ಸಹಾ ಕೊಡುತ್ತೇನೆ' ಎಂದು ಹೇಳಿದರು. ಅದಕ್ಕಾಗಿ ನಾನು ಯಾವಾಗಲೂ ಹಿಡಿದಿಟ್ಟು ಪ್ರಾರ್ಥಿಸುತ್ತಿದ್ದೆ.

ಆದರೆ ಆಶ್ರಯ ಸಿಗುತ್ತದೆ ಎಂದು ನಂಬಿದೆ ಆಶ್ರಯವಾಗಿ ಒಂದು ವ್ಯಕ್ತಿಯನ್ನು ಕೊಡುತ್ತೇನೆ ಎಂದು ಕರ್ತನು ನನಗೆ ತಿಳಿಸಿದುದರ ವಿಚಾರವಾಗಿ ನನಗೆ ಅಷ್ಟು ಅರ್ಥವಾಗಿರಲಿಲ್ಲ. ಆದರೆ ಕರ್ತನು ಯಾವ ಮಾತನ್ನು ಕೊಡುತ್ತಾನೋ ಅದನ್ನು ನೆರವೇರಿಸುವವನಾಗಿದ್ದಾನೆ. ಆತನು ನನ್ನನ್ನು ಎಡೆಬಿಡದೆ ಕಾಯುತ್ತಿರುವುದಕ್ಕಾಗಿ ನಾನು ಸ್ತೋತ್ರ ಸಲ್ಲಿಸುತ್ತೇನೆ.

ಎಲ್ಲಾ ಕಡೆಗೆ ಹೋಗಿ ಸೇವೆ ಮಾಡಿ ಬರುತ್ತಿದ್ದೆ, ಎಲ್ಲಿಯೂ ಸಮಾಧಾನ ಇರುತ್ತಿರಲಿಲ್ಲ ಎಲ್ಲರೂ ಪ್ರೀತಿ ತೋರಿಸಿದರೂ ಅದು ನನಗೆ ಇದು ಸ್ವಲ್ಪ ದಿನಗಳು ಮಾತ್ರ, ಮತ್ತೇ ಇವರು ದೂರವಾಗುತ್ತಾರೆ ಮತ್ತೇ ನಾನು ಒಂಟಿಯಾಗುತ್ತೇನೆ. ಯೇಸಪ್ಪಾನೇ ನನಗೆ ಸ್ವಂತ ಎಂದು ತಿಳಿದುಕೊಂಡು ಎಲ್ಲರೊಟ್ಟಿಗೆ ಪ್ರೀತಿಯಿಂದ ಸೇವೆ ಮಾಡುತ್ತಾ ಇರುತ್ತಿದೆ. ನನಗೆ ಸತ್ಯವೇದದಲ್ಲಿ ಒಂದು ವಾಕ್ಯ ಜ್ಞಾಪಕ ಬಂತು ಅದು ಏನೆಂದರೆ- “ಸಹೋದರನಿಗಿಂತಲೂ ಹತ್ತಿರ ಹೊಂದಿಕೊಳ್ಳುವ ಮಿತ್ರನುಂಟು” ಎಂದು ಜ್ಞಾನೋ 18:24 ರಲ್ಲಿ ತಿಳಿಸುತ್ತದೆ. ಅದೇ ರೀತಿ ನಾನು ಎಷ್ಟೋ ಗೆಳತಿಯರನ್ನ ಮಾಡಿದೆ, ಆದರೆ ಹತ್ತಿರ ಹೊಂದಿಕೊಳ್ಳುವಂತ ಸ್ನೇಹಿತೆ ಸಿಗಲಿಲ್ಲ, ನಾನು ಇವರನ್ನು ನೋಡಿದಾಗ ತುಂಬ ಸಂತೋಷವಾಯಿತು.

ನಾನು ಅವರೊಟ್ಟಿಗೆ ಹೇಳಿದೆ. ನನಗೆ ಇಲ್ಲಿ ಮನೆಯಿಲ್ಲಾ ಅದಕ್ಕೆ ಆಂಧ್ರಪ್ರದೇಶಕ್ಕೆ ಹೋಗಿ ಅಲ್ಲಿದ್ದು ಸೇವೆ ಮಾಡೋಣ ಎಂದು ಆಲೋಚನೆ ಮಾಡಿದ್ದೇನೆ ನೀವು ನನಗಾಗಿ ಪ್ರಾರ್ಥಿಸಿರಿ ಎಂದು ತಿಳಿಸಿದೆ. ಆಗ ಅವರು “ಬೆಂಗಳೂರಿನಲ್ಲಿ ಸೇವೆಯಿದೆ, ಇಲ್ಲೇ ಇರಬೇಕು” ಎನ್ನುವ ಪ್ರವಾದನೆಯನ್ನು ನನ್ನ ನೆನಪಿಗೆ ತಂದರು.

ಆಗ ನಾನು ಮನೆಯನ್ನು ಹುಡುಕಲು ಪ್ರಯತ್ನಿಸಿರಿ ಎಂದು ಹೇಳಿದೆ. ಒಂದು ಚಿಕ್ಕ ಮನೆಯನ್ನು ಬಾಡಿಗೆಗೆ ನೋಡೋಣ ಅದಕ್ಕೆ ನಾನು ಸಾಧ್ಯವಾದಷ್ಟು ಬಾಡಿಗೆಯನ್ನು ಕಟ್ಟಲು ಸಹಾಯ ಮಾಡುತ್ತೇನೆಂದು ತಿಳಿಸಿದರು. ನಾಳೆಯಿಂದ ಮನೆ ಹುಡುಕಲು ಆರಂಭಿಸೋಣ ಅಂದರು. ಅದಕ್ಕೆ ನಾನು ಒಪ್ಪಿಕೊಂಡು ಅವರೊಟ್ಟಿಗೆ ಅನೇಕ ಮನೆಗಳನ್ನು ಹೋಗಿ ನೋಡಿದೆನು ಆದರೆ ಯಾವ ಮನೆಯೂ ನನಗೆ ಇಷ್ಟವಾಗಲಿಲ್ಲ, ನಾನು ಪ್ರಾರ್ಥನೆ ಮಾಡುತ್ತಲೇ ಇದ್ದೆ ಯಾಕೆಂದರೆ ನನಗೆ ಯಾವ ಬಾಡಿಗೆಯನ್ನೂ ಕಟ್ಟಲು ಯಾರ ಸಹಾಯವೂ ಇರಲಿಲ್ಲ, ಅದಕ್ಕಾಗಿ ‘ದೇವರೇ ನನಗೆ ಬಾಡಿಗೆ ಕಟ್ಟಲು ಹಣವಿಲ್ಲ, ಅಡ್ವಾನ್ಸ್ ಕೊಡಲೂ ಹಣವಿಲ್ಲ ದಯವಿಟ್ಟು ನನ್ನನ್ನು ಕರುಣಿಸಿ ನನಗೆ ಬಾಡಿಗೆ ಅಡ್ವಾನ್ಸ್ ಕೇಳದೆ ಇರುವಂತಹ ಒಂದು ಮನೆಯನ್ನು ಕೊಡು’ ಎಂದು ಪ್ರಾರ್ಥಿಸುತ್ತಲೇ

ಇದ್ದೆ. ಎಷ್ಟು ಹುಡುಕಿದರೂ ಮನೆ ಸಿಗಲಿಲ್ಲವಾದ ಕಾರಣ ನಾನು ಗುರುತನ್ನು ಇಟ್ಟು ಪ್ರಾರ್ಥಿಸಿದೆ ಆ ದಿನ ಗುರುವಾರವಾಗಿತ್ತು - "ದೇವರೇ ಈ ಶನಿವಾರದೊಳಗೆ ಮನೆ ಸಿಕ್ಕಿದರೆ ನಾನು ಇಲ್ಲೇ ಇರುತ್ತೇನೆ, ಇಲ್ಲದಿದ್ದರೆ ಆಂಧಪ್ರದೇಶದಲ್ಲಿ ನಾನು ಹೋದರೆ ನನಗೆ ಅಲ್ಲಿ ಮನೆಯನ್ನು ಕೊಡುತ್ತೇನೆಂದು ಹೇಳಿದ್ದಾರೆ ನಾನು ಅಲ್ಲಿಗೆ ಹೋಗಿ ನಿನ್ನ ಸೇವೆಯಲ್ಲಿ ತೊಡಗುತ್ತೇನೆ, ಆದರೆ ನನ್ನ ಇಷ್ಟದಂತೆ ಆಗದೇ ನಿನ್ನ ಚಿತ್ತದಂತೆಯೇ ಆಗಲಿ" ಎಂದು ದೇವರಿಗೆ ಬಿನ್ನಹಿಸಿದೆನು.

ಶನಿವಾರದವರೆಗೂ ಮನೆ ಸಿಗಲಿಲ್ಲ, ಓಹೋ ಹಾಗಾದರೆ ನನ್ನನ್ನು ಕರ್ತನು ಆಂಧ್ರಪ್ರದೇಶಕ್ಕೇ ಕಳುಹಿಸುತ್ತಾರೆ ಎಂದು ನನ್ನಲ್ಲಿ ನಾನು ಮಾತನಾಡಿಕೊಂಡೆನು. ಪರಿಮಳ ಅವರು ಅದೇ ಶನಿವಾರದಲ್ಲಿ ಒಂದು ಮನೆಯಲ್ಲಿ ನಡೆಯುವಂತಹ ಪ್ರಾರ್ಥನಾ ಕೂಟಕ್ಕೆ ನನ್ನನ್ನು ಕರೆದುಕೊಂಡು ಹೋದರು. ಅಲ್ಲಿ ಪ್ರಸಂಗ ಮಾಡಲು ನನಗೆ ಹೇಳಿದರು. ನಾನು ದೇವರ ಕೃಪೆಯಿಂದ ಅಲ್ಲಿ ವಾಕ್ಯವನ್ನು ಭೋದಿಸಿದೆನು. ನಂತರ ಪರಿಮಳ ಅವರು ಆ ಮನೆಯ ಓನರ್ ಆದ ವಿಜಯಾಂಟಿ ಬಳಿ ಹೀಗೆ ಕೇಳಿದರು. ಆಂಟಿ 'ತೇಜು ಸಿಸ್ಟರ್'ಗೆ ಮನೆ ಹುಡುಕುತ್ತಿದ್ದೇನೆ. ನಿಮ್ಮ ಬಿಲ್ಡಿಂಗ್‌ನಲ್ಲಿ ಮನೆ ಖಾಲಿ ಇದ್ದರೆ ತಿಳಿಸಿ 1000 ರೂಗೆ ಬಾಡಿಗೆ ಇರುವ ಮನೆ ಬೇಕು" ಎಂದು ಕೇಳಿದರು. ಅದಕ್ಕ ಆಂಟಿ? ವಿಜಯನಗರದಲ್ಲಿ ನಾವು ಬಾಡಿಗೆ ಮನೆಗಳನ್ನು ಕಟ್ಟಿದ್ದೇವೆ ಹೋಗಿ ನೋಡಿಕೊಂಡು ಬನ್ನಿ ಅಂದರು ಆಗ ನಾವಿಬ್ಬರೂ ಗಾಡಿಯಲ್ಲಿ ಆ ಸ್ಥಳಕ್ಕೆ ಹೋದೆವು.

ನಾನು ಪ್ರಾರ್ಥಿಸಿಕೊಂಡೆ-'ಯೇಸಪ್ಪಾ ಬಾಡಿಗೆ, ಅಡ್ವಾನ್ಸ್ ಕೇಳಬಾರದು, ಮತ್ತೇ ಆ ಮನೆ ನನಗಾಗಿ ನೀನು ಇಟ್ಟಿರುವುದಾದರೆ, ಆ ಕ್ಷಣದಲ್ಲಿ ಮನೆಯ ಬೀಗ ನನ್ನ ಕೈಯಲ್ಲಿ ಸೇರಬೇಕು ಎಂದು ಪ್ರಾರ್ಥಿಸಿದೆ.' ನಾವಿಬ್ಬರೂ ವಿಜಯನಗರಕ್ಕೆ ಬಂದೆವು. ಅಲ್ಲಿ ಮೂರನೇ ಮಹಡಿಯನ್ನು ಹತ್ತಿದೆವು, ಮನೆಯನ್ನು ನೋಡಿದೆವು. ನನಗೆ ಇಷ್ಟವಾಯಿತು ದೇವರಿಗೆ ಸ್ತೋತ್ರ ಹೇಳಿದೆ. ನಾನು ಬ್ರದರ್ ಹತ್ತಿರ ಕೇಳಿದೆ- ಎಷ್ಟು ಬಾಡಿಗೆ, ಅಡ್ವಾನ್ಸ್ ಎಂದು ಆಗ ಅವರು ಹೇಳಿದ್ದು- ನಿಮಗೆ ಇಷ್ಟ ಆಯಿತಾ? ಇಲ್ಲಿ ಇರುತ್ತೀರಾ? ಎಂದು ಆಗ ನಾನು ಅವರಿಗೆ ಮನೆ ಚನ್ನಾಗಿದೆ ನಾನು ಇಲ್ಲಿ ಇರುತ್ತೇನೆ ಎಂದು ಹೇಳಿದೆನು. ಆಗ ಅವರು ಕೈಯಲ್ಲಿ ಇದ್ದ ಆ ಮನೆ ಬೀಗದ ಕೈಯನ್ನು ಕೊಟ್ಟು ಈ ಕ್ಷಣದಿಂದಲೇ ಇಲ್ಲಿ ನೀವು ಇರಬಹುದು. ಬಾಡಿಗೆ ಅಡ್ವಾನ್ಸ್ ಬೇಡ, ಇದು ಸೇವಕರಿಗಾಗಿ ಕಟ್ಟಿ ಬಿಟ್ಟಿರುವ ಮನೆ ನೀವು ಇಲ್ಲಿದ್ದು ಸೇವೆಮಾಡಿಕೊಳ್ಳಬಹುದು ನಾವು

ಯಾರಾದರೂ ಸೇವಕರು ಬಂದು ಇರಲಿ ಎಂದು ಮೂರು ವರ್ಷಗಳಿಂದ ಪ್ರಾರ್ಥಿಸುತ್ತಿದ್ದೇವೆ. ದೇವರಿಗೆ ನಮ್ಮ ಪ್ರಾರ್ಥನೆ ಕೇಳಿಸಿದೆ. ನೀವು ಈ ಮನೆಯಲ್ಲಿರ ಬಹುದು ಎಂದು ಹೇಳಿದರು. ನನಗೆ ಆ ಮಾತು ಕೇಳಿ ತುಂಬ ಸಂತೋಷವಾಯಿತು. ಅವರಿಗೆ ವಂದನೆ ತಿಳಿಸಿದೆ, ನನ್ನ ಪ್ರಾರ್ಥನೆಗೆ ದೇವರು ಉತ್ತರಕೊಟ್ಟರು. ನಾವಿಬ್ಬರೂ ತುಂಬ ಸಂತೋಷಪಟ್ಟೆವು. ನಾನು ಅಂದುಕೊಂಡಿದ್ದು ಆಂಧ್ರಪ್ರದೇಶಕ್ಕೆ ಹೋಗೋಣ ಎಂದು; ಆದರೆ ದೇವರ ತೀರ್ಮಾನ ನಾನು ಬೆಂಗಳೂರಿನಲ್ಲೇ ಇರಬೇಕೆಂದು, ಕಡೆಗೆ ಆತನ ಚಿತ್ತವೇ ನನ್ನಲ್ಲಿ ನೆರವೇರಲು ಸಾಧ್ಯವಾಯಿತು. ವಾಕ್ಯ ಹೇಳುತ್ತದೆ  "ಯೆಹೋವನು ಹೀಗೆನ್ನುತ್ತಾನೆ-ನನ್ನ ಆಲೋಚನೆಗಳು ನಿಮ್ಮ ಆಲೋಚನೆಗಳಲ್ಲ, ನಿಮ್ಮ ಮಾರ್ಗಗಳು ನನ್ನ ಮಾರ್ಗಗಳಲ್ಲ" ಎಂದು (ಯೆಶಾಯ 55:8) ಈ ವಾಕ್ಯದ ಪ್ರಕಾರ ನನ್ನ ಜೀವನದಲ್ಲಿ ಒಂದೊಂದು ಹೆಜ್ಜೆಯಲ್ಲಿಯೂ ಇಂದಿನವರೆಗೂ ಸಹ ನಡೆಯುತ್ತಲೇ ಇದೆ.

ಪರಿಮಳ ಅವರು ನನಗೆ ಒಂದು ಮನೆ ಸಿಗುವವರೆಗೂ ಅವರ ಮನೆಯಲ್ಲೇ ಇರಲು ನನಗೆ ನೆರವಾದರು. ಆದರೆ ಆಶ್ಚರ್ಯವಾದ ಸಂಗತಿ ಏನೆಂದರೆ ಅವರು ನನ್ನನ್ನು ತನ್ನ ಮನೆಯಲ್ಲಿ ಇರಿಸಿಕೊಂಡಿರುವುದನ್ನು ಮನೆಯಲ್ಲಿರುವ ಯಾವ ವ್ಯಕ್ತಿಗೂ ತಿಳಿಸಿರಲಿಲ್ಲ. ಹೀಗೆ ನಾನು ಅವರ ಮನೆಯವರಿಗೆ ಗೊತ್ತಿಲ್ಲದೆ ಸೀಕ್ರೇಟ್ ಆಗಿ ಆರೇಳು ತಿಂಗಳು ಅವರ ಮನೆಯಲ್ಲಿರಲು ಕರ್ತನು ನನಗೆ ಕೃಪೆತೋರಿಸಿದ್ದುದನ್ನು ಈಗಲೂ ನೆನಸಿಕೊಂಡರೆ ನನಗೆ ಯಾವ ರೀತಿಯಲ್ಲಿ ಕರ್ತನಿಗೆ ಸ್ತೋತ್ರಗಳನ್ನು ಸಮರ್ಪಿಸಬೇಕೋ ತಿಳಿಯುತ್ತಿಲ್ಲ. ಆದರೆ ಕರ್ತನು ನನ್ನ ಇಕ್ಕಟ್ಟನ್ನು ನೋಡಿ ನನಗೆ ಈ ರೀತಿ ಸಹಾಯ ಮಾಡಿದರೆಂದು ನಾನು ಭಾವಿಸುತ್ತೇನೆ.

ದೇವರು ಆ ಸಮಯಗಳಲ್ಲಿ ಒಂದೊಂದು ದಿನದಲ್ಲೂ ನಡೆಸಿದ ಕಾರ್ಯಗಳನ್ನು ನೆನಸಿಕೊಂಡರೆ ನನಗೆ ಮೈಜುಮ್ ಎನಿಸುತ್ತದೆ. ಏಕೆಂದರೆ ಮನೆಯವರಿಗೆ ತಿಳಿದು ಅಲ್ಲಿ ನಾನು ಇರಲು ಅವರೆಲ್ಲರೂ ಒಪ್ಪಿಕೊಂಡಿದ್ದರೆ ನಾನು ಅಲ್ಲಿ ನಿರ್ಭಯವಾಗಿ ಇರಬಹುದಾಗಿತ್ತು. ಆದರೆ ಬಚ್ಚಿಟ್ಟುಕೊಂಡು ಅಲ್ಲಿ ಇರುವುದು ನನ್ನ ಮನಸ್ಸಿಗೆ ಎಷ್ಟು ಕಷ್ಟವಾಗಿರುತ್ತದೆಂದು ನೀವೇ ಊಹಿಸಿಕೊಳ್ಳಿರಿ.

ಆದರೂ ನನ್ನ ಕರ್ತನು ನನಗೆ ತಾನೇ ಸರ್ವಸ್ವನಾಗಿ ಯಾವ ಕೇಡು ಆಗದೆ ಕಾಯುತ್ತಿದ್ದರು. ಒಂದೊಂದು ಅದ್ಭುತಗಳನ್ನು ಹೇಳುವುದಾದರೇ ವರ್ಣಿಸಲು ಅಸಾಧ್ಯ. ಎಂತಹ ಸಮಯದಲ್ಲಾದರೂ ಕೂಗುವುದಾದರೂ ಅದಕ್ಕೆ

ಉತ್ತರ ಕೊಟ್ಟು ನನ್ನನ್ನು ನಡೆಸುತ್ತಿದ್ದರು. ನನ್ನ ಕರ್ತನು ನನ್ನೊಟ್ಟಿಗೆ ಇಲ್ಲದಿದ್ದರೆ ಮಣ್ಣಿಗೆ ಮಣ್ಣಾಗುತ್ತಿದ್ದೆ ಆದರೆ ಯೇಸಪ್ಪಾ ನನಗೆ ಸರ್ವಸ್ವವಾಗಿ ಸದಾಕಾಲ ಕಾಯ್ದು ಕಾಪಾಡುತ್ತಾ ನಡೆಸಿಕೊಂಡು ಬಂದರು. ನಾನು ಕೇಳುವುದಕ್ಕಿಂತ ಅಧಿಕವಾಗಿ ಎಲ್ಲವನ್ನು ಒದಗಿಸಿದನು. ಅಜ್ಞಾನಿಯಾಗಿದ್ದ ನನ್ನನ್ನು ಆತನ ಆತ್ಮದಿಂದ ತುಂಬಿಸಿ, ಅಭಿಷೇಕ ತುಂಬಿಸಿ ಜ್ಞಾನವುಳ್ಳವಳಾಗಿ ಮಾಡಿದನು. ಕರ್ತನಿಗೆ ಲೆಕ್ಕವಿಲ್ಲದಷ್ಟು ಸ್ತೋತ್ರ.

ಹೀಗೆ ನಮಗೆ ಸಿಕ್ಕಿದ ಮನೆಗೆ 'ಪ್ರಾರ್ಥನಾ ಮಂದಿರ' ಎಂದು ನಾನು ಕರ್ತನಿಗೆ ಮಾತು ಕೊಟ್ಟ ಹಾಗೆ ಹೆಸರನ್ನು ಇಟ್ಟು ಮೊಟ್ಟ ಮೊದಲ ಬಾರಿಗೆ 16-3-2008ರಂದು ಪ್ರಾರ್ಥನೆಯನ್ನು ಶುರುಮಾಡಿದೆವು. ದೇವರು ನಮ್ಮ ಪ್ರಾರ್ಥನೆಗಳನ್ನು ಕೇಳಿ ಅನೇಕ ಆತ್ಮಗಳನ್ನು ನಮಗೆ ಕಳುಹಿಸಿದರು.

ಇದಾದ ಮೇಲೆ 2-5-2008 ರಂದು ಕಾರಣಾಂತರದಿಂದ ಪರಿಮಳ ಅವರೂ ಸಹ ಅವರ ಮನೆಯಲ್ಲಿ ಎಲ್ಲರಿಗೂ ತಿಳಿಸಿ ತಾನು ಮನೆಯನ್ನು ಬಿಟ್ಟು ಹೋಗುತ್ತೇನೆಂದು ಹೇಳಿ ಹೊರಬಂದರು. ನನ್ನ ಜೊತೆಯಲ್ಲಿ ಬಂದು ಇರಲು ಆರಂಭಿಸಿದರು. ಸೇವೆ ಅಭಿವೃದ್ಧಿ ಆಯಿತು. ಅನೇಕರು ಬಂದು ರಕ್ಷಣೆಯನ್ನು ಹೊಂದಿಕೊಂಡರು. ನಂತರ ನಾವಿಬ್ಬರೂ ಉಪವಾಸದಿಂದಲೂ ದೇವರ ಆಜ್ಞೆಯ ಮೇರೆಗೆ "ಮಹಿಮಾ ಪ್ರಾರ್ಥನಾ ಮಂದಿರ" ಎನ್ನುವ ಹೆಸರಿನಿಂದ ಸಭೆಯನ್ನು ಆರಂಭಿಸಿದೆವು. ನಾವು ಹೆಣ್ಣು ಮಕ್ಕಳಾದುದರಿಂದ ಸಭಾಸೇವೆಯನ್ನು ಮಾಡಲು ಅನೇಕ ವ್ಯಕ್ತಿಗಳು ನಮ್ಮನ್ನು ಅಡ್ಡಿಮಾಡಿದರು, ಆದರೆ ಈವರೆಗೂ ನಮ್ಮನ್ನು ಯಾರೂ ಕರ್ತನ ಸೇವೆಯಿಂದಾಗಲೀ ಕರ್ತನಿಂದಾಗಲೀ ನಮ್ಮನ್ನು ಬೇರ್ಪಡಿಸಲಾಗುತ್ತಿಲ್ಲ. ಕರ್ತನು ಬಲವಾಗಿ ನಮ್ಮನ್ನು ತನ್ನ ಸೇವೆಯಲ್ಲಿ ಉಪಯೋಗಿಸಿಕೊಂಡು ಬರುತ್ತಿದ್ದಾರೆ.

ದೇವರು ಬಹುದೊಡ್ಡ ಕಾರ್ಯವನ್ನು ಮಾಡಿ ನಾವಿರುವ ಮಹಡಿಯ ಮುಂದೆ ಇದ್ದಂತಹ ಸ್ಥಳದಲ್ಲಿ ನಮ್ಮ ಓನರ್ ಆಂಟಿ ಒಂದು ಹಾಲ್‌ಅನ್ನು ಕಟ್ಟಿಸಿಕೊಡುವಂತೆ ಅದ್ಭುತ ಮಾಡಿದರು. ನಾನು ದೇವರಲ್ಲಿ ಕೇಳಿದ್ದು ಸೇವೆ ಮಾಡೋಕೆ 'ಗಾಡಿ' ಬೇಕು ಎಂದು ಆದರೆ ಗಾಡಿಯೊಂದಿಗೆ ಒಂದು ಆಶ್ರಯ ವ್ಯಕ್ತಿಯನ್ನು ಸಭೆಯನ್ನೂ ಒಳ್ಳೊಳ್ಳೇ ಆತ್ಮೀಕ ಮಕ್ಕಳನ್ನು ಉತ್ತಮವಾದಂತಹ ಸೇವೆಯನ್ನೂ ಕೊಟ್ಟು ಯಾವ ಕೊರತೆಯೂ ನನಗೆ ಬರದಂತೆ ಈ ದಿನ ಎಲ್ಲರಿಗೂ ಕರ್ತನು ನನ್ನನ್ನು ಆಶೀರ್ವಾದಕರವಾಗಿ ನಡೆಸುತ್ತಿದ್ದಾನೆ. ಎಂದು ನಾನು ಬಹಳ ಹೆಮ್ಮೆಯಿಂದ ನಿಮಗೆ ತಿಳಿಸಲು ಇಷ್ಟ ಪಡುತ್ತೇನೆ. ಕಷ್ಟ ಪಾಡುಗಳಿಗೆ ದೇವರು ಉತ್ತಮವಾಗಿ ಬಹುಮಾನಗಳನ್ನು ನನಗೆ ಕೊಟ್ಟಿದ್ದಾರೆ.

ಈ ಕೆಳಗೆ ಆ ಬಹುಮಾನಗಳನ್ನು ನಿಮ್ಮ ಬಳಿಯಲ್ಲಿ ನಾನು ಹಂಚಿಕೊಳ್ಳಲು ಇಷ್ಟ ಪಡುತ್ತೇನೆ.

ದೇವರ ಕೃಪೆಯಿಂದ 4 ಪುಸ್ತಕಗಳನ್ನು ಹೊರ ತರಲು ಕರ್ತನು ನನಗೆ ಕೃಪೆತೋರಿಸಿದರು. ಆ ಪುಸ್ತಕದ ಹೆಸರುಗಳು. 'ನಂಬಿಕೆಯ ರಹಸ್ಯ', 'ಅದ್ಭುತ ಸಾಕ್ಷಿ' ಮತ್ತು 'ಪ್ರೀತಿಯ ಯಶಸ್ಸು', 'ಕಣ್ಣೀರಿನ ಕೂಗು' ಎನ್ನುವ ಈ ನಾಲ್ಕು ಪುಸ್ತಕಗಳು ಅನೇಕ ಜನರ ಕೈ ತಲುಪುವಂತೆ ಕರ್ತನು ಕೃಪೆ ತೋರಿಸಿದರು. ಅನೇಕ ಫೋನ್ ಕಾಲ್‌ಗಳು ಬರುತ್ತಿವೆ, ಎಷ್ಟೋ ಜನರು ಆಶೀರ್ವದಿಸಲ್ಪಡು ತ್ತಿದ್ದಾರೆ. ದೇವರಿಗೆ ಅನೇಕಾನೇಕ ಸ್ತೋತ್ರಗಳನ್ನು ನಾನು ಹೃದಯ ಪೂರ್ವಕವಾಗಿ ಸಲ್ಲಿಸುತ್ತೇನೆ. ಈಗ ಐದನೆಯ ಪುಸ್ತಕವಾಗಿ ನಿಮ್ಮ ಮುಂದೆ 'ನಾನು ನನ್ನ ಸರ್ವಸ್ವ' ಎನ್ನುವ ನನ್ನ ಸಾಕ್ಷಿ ಪುಸ್ತಕವನ್ನು ನಿಮ್ಮ ಕೈಗೆ ತಲುಪು ವಂತೆ ನನ್ನ ಕರ್ತನು ಮಾಡಿದ್ದಾನೆ. ನೀವು ತಪ್ಪದೇ ನಮ್ಮ ಸೇವೆಗಾಗಿ ನಿಮ್ಮ ಪ್ರಾರ್ಥನೆಗಳಲ್ಲಿ ನೆನಪು ಮಾಡಿಕೊಳ್ಳುತ್ತೀರೆಂದು ನಾನು ವಿಶ್ವಾಸಿಸುತ್ತೇನೆ.

'ಕ್ರಿಸ್ತನ ಪರಿಮಳ ಆರಾಧನಾ ಗೀತೆಗಳು' ಎನ್ನುವ ಒಂದು ಆರಾಧನಾ ಸಿ.ಡಿ.ಯನ್ನು ಸಹ ಬಿಡುಗಡೆ ಮಾಡಲು ದೇವರು ಕೃಪೆ ತೋರಿಸಿದರು. ಈ ಸಿ.ಡಿ.ಯಲ್ಲಿರುವ ಹಾಡುಗಳೂ ಅನೇಕರ ಹೃದಯಗಳನ್ನು ಕಲಕುತ್ತಿದೆ ಎಂದು ನಾನು ನಿಮ್ಮ ಮುಂದೆ ಹೇಳಬಿಚ್ಛಿಸುತ್ತೇನೆ.

ಲೈಟ್.ಟಿ.ವಿ. ಎನ್ನುವ ಚಾನಲ್‌ನಲ್ಲಿ ಎರಡು ವರ್ಷದಿಂದ ವಾಕ್ಯವನ್ನು ಹಂಚಿಕೊಳ್ಳಲು ನಮ್ಮಿಬ್ಬರಿಗೆ ದೇವರು ಕೃಪೆ ತೋರಿಸಿದ್ದಾರೆ. ಮತ್ತು ಈ ವರ್ಷದಲ್ಲಿ 'ಜೈಲ್' ಸೇವೆ ಮಾಡಲು ನಮಗೆ ಅನುಮತಿ ಪತ್ರವು ಸಿಕ್ಕಿದೆ. ನಾವಿಬ್ಬರು 'ಜೈಲ್'ಗೆ ಹೋಗಿ ಅನೇಕ ಖೈದಿಗಳ ಮಧ್ಯದಲ್ಲಿ ವಾಕ್ಯವನ್ನು ಹಂಚುತ್ತಿದ್ದೇವೆ.

## ೨೦. ಮೆಲುಕು

ತಂದೆ-ತಾಯಿಯ ಬಳಿ ಮುದ್ದಾಗಿ ಬೆಳೆದ ನಾನು ಕರ್ತನನ್ನು ಅಂಗೀಕರಿಸಿಕೊಂಡ ಮೇಲೆ, ಮನೆಯಲ್ಲಿ ಚಿತ್ರಹಿಂಸೆ ಪಟ್ಟೆನು, ನಂತರ ತಂದೆ-ತಾಯಿಯನ್ನು ಕಳೆದುಕೊಂಡು ಮನೆಯಿಂದ ಹೊರಬಂದು ನೆಲೆಯಿಲ್ಲದೆ ಅನೇಕ ಕಷ್ಟ-ಪಾಡುಗಳನ್ನು ಎದುರಿಸಬೇಕಾಯಿತು, ಮನೆಬಿಟ್ಟು ಹೊರ ಬಂದ ಮೇಲೆ ಕರ್ತನು ನನ್ನನ್ನು 7 ವರ್ಷಗಳು ಶೋಧನೆಯಲ್ಲಿ ನಿಲ್ಲಿಸಿ ನಂತರ ನನಗೆ

ಉತ್ತಮವಾದ ಜಯವನ್ನು ಕೊಟ್ಟು 2008ರಲ್ಲಿ 'ಮಹಿಮಾ ಪ್ರಾರ್ಥನಾ ಮಂದಿರ' ಎನ್ನುವ ಸಭೆಯನ್ನು ಸ್ಥಾಪಿಸಲು ಕೃಪೆತೋರಿಸಿ ಈಗ ಉತ್ತಮವಾದ ಸಾಕ್ಷಿಯಾಗಿ ನನ್ನನ್ನು ನಿಲ್ಲಿಸಿರುವುದು ನಾನು ಚಿಂತಿಸಿದರೆ, ಇದರಲ್ಲಿ ನನಗೆ ಅರ್ಥವಾಗುತ್ತಿರುವುದು ಏನೆಂದರೆ ನನಗೆ ಈ ಲೋಕದಲ್ಲಿ ಎಲ್ಲಾದಕ್ಕಿಂತ ದೇವರೇ ನನಗೆ ಮುಖ್ಯವೆಂದು ನಾನು ಮುನ್ನುಗ್ಗಿದ್ದ ಕಾರಣದಿಂದ ನನಗೆ ದೇವರು ಇಷ್ಟು ಸಹಾಯ ಮಾಡಿದ್ದಾರೆಂದು ನಾನು ತಿಳಿಸಬಚ್ಚಿಸುತ್ತೇನೆ.

ಈ ಪುಸ್ತಕಕ್ಕೆ ನಾನು ಹೆಸರಿಡಲು ಯೋಚಿಸುತ್ತಿದ್ದೆ. 'ನನ್ನ ಸಾಕ್ಷಿ' ಎಂದಿಡಲೇ ಅಥವಾ 'ನನ್ನ ಜೀವನ ಕಥೆ' ಎಂದಿಡಲೇ ಅಥವಾ 'ನನ್ನ ಗೆಲುವು' ಎಂದಿಡಲೇ ಎಂದು ಎಷ್ಟೋ ಚಿಂತೆಗಳು ಬಂದಿತು. ಆದರೆ ನಾನು ನನ್ನ ಕರ್ತನನ್ನೇ ನನ್ನ ಸರ್ವಸ್ವವಾಗಿ ತಿಳಿದಿರುವುದರಿಂದ. ಕರ್ತನು ನನಗೆ ಹೆಜ್ಜೆ-ಹೆಜ್ಜೆಗೂ ಸಹಾಯ ಮಾಡುತ್ತಿರುವುದರಿಂದ ನನ್ನ ಸರ್ವಸ್ವವೇ ದೇವರೆಂದು ಎಲ್ಲರಿಗೂ ತಿಳಿಯಪಡಿಸುವ ಸಲುವಾಗಿಯೂ ಕರ್ತನ ಚಿತ್ತದ ಮೇರೆಗೆ 'ನಾನು ನನ್ನ ಸರ್ವಸ್ವ' ಎಂದು ಈ ಪುಸ್ತಕಕ್ಕೆ ಹೆಸರಿಡಲಾಗಿದೆ.

ನಿಮ್ಮೆಲ್ಲರಿಗೆ ಈ ಪುಸ್ತಕವು ಆಶೀರ್ವದಕರವಾಗಿರುತ್ತದೆಂದು ನಾನು ಪೂರ್ಣವಾಗಿ ವಿಶ್ವಾಸಿಸುತ್ತೇನೆ. ಕರ್ತನು ನಿಮ್ಮೊಂದಿಗಿರಲಿ.